ಕರ್ನಾಟಕ ಸರ್ಕಾರ

NCERT

ಗಣಿತ ಮೇಳ

ಗಣಿತ ಪಠ್ಯಪುಸ್ತಕ

ಭಾಗ – 2

ಕನ್ನಡ ಮಾಧ್ಯಮ

4

© BOOKTBS NOT TO BE REPUBLISHED

विद्यया ऽमृतमश्नुते

एन सी ई आर टी
NCERT

राष्ट्रीय शैक्षिक अनुसंधान और प्रशिक्षण परिषद्
NATIONAL COUNCIL OF EDUCATIONAL RESEARCH AND TRAINING

Karnataka Textbook Society (R.)
6th Cross, Malleshwaram,
Bengaluru - 560 003.

ಪರಿವಿಡಿ

ಅಧ್ಯಾಯ 8 : ಅದನ್ನು ತೂಕ ಮಾಡಿ, ಅದನ್ನು ಸುರಿಯಿರಿ	01 – 14
ಅಧ್ಯಾಯ 9 : ಸಮ ಗುಂಪುಗಳು	15 – 35
ಅಧ್ಯಾಯ 10 : ಆನೆಗಳು, ಹುಲಿಗಳು ಮತ್ತು ಚಿರತೆಗಳು	36 – 51
ಅಧ್ಯಾಯ 11 : ಸಮಮಿತಿಯೊಂದಿಗೆ ವಿನೋದ	52 – 62
ಅಧ್ಯಾಯ 12 : ಟಿಕ್‌ಟಿಕ್ ಗಡಿಯಾರಗಳು ಮತ್ತು ತಿರುಗುವ ಕ್ಯಾಲೆಂಡರ್	63 – 70
ಅಧ್ಯಾಯ 13 : ಸಾರಿಗೆ ವಸ್ತು ಸಂಗ್ರಹಾಲಯ	71 – 89
ಅಧ್ಯಾಯ 14 : ದತ್ತಾಂಶ ನಿರ್ವಹಣೆ	90 – 95
ಕಲಿಕಾ ಹಾಳೆಗಳು	96 – 110

@KTBS NOT TO BE REPUBLISHED

ಅಧ್ಯಾಯ
8

ಅದನ್ನು ತೂಕ ಮಾಡಿ, ಅದನ್ನು ಸುರಿಯಿರಿ

T4X9S8



3 ನೇ ತರಗತಿಯಲ್ಲಿ ತೂಕ ಮತ್ತು ಸಾಮರ್ಥ್ಯವನ್ನು ಅಳತೆ ಮಾಡುವುದನ್ನು ಕಲಿತಿದ್ದೇವೆ. 1 ಕಿಲೋಗ್ರಾಂ ಉಪ್ಪಿನ ಪೊಟ್ಟಣ ಮತ್ತು 1 ಲೀಟರ್ ಬಾಟಲ್ ನೆನಪಿದೆಯೇ? ತೂಕ ಮತ್ತು ಸಾಮರ್ಥ್ಯವನ್ನು ಅಳೆಯುವ ಬಗ್ಗೆ ಇನ್ನೂ ಹೆಚ್ಚಿನದನ್ನು ಕಲಿಯೋಣ.



@KTBS NOT TO BE REPUBLISHED

1. ಕೊಟ್ಟಿರುವ ಚಿತ್ರಗಳನ್ನು ಗಮನಿಸಿ, ಅತ್ಯಂತ ಭಾರವಿರುವ ಪ್ರಾಣಿಯಿಂದ ಅತ್ಯಂತ ಕಡಿಮೆ ಭಾರವಿರುವ ಪ್ರಾಣಿಗಳ ಹೆಸರುಗಳನ್ನು ಬರೆಯಿರಿ.

   _____

2. ನಿಮ್ಮ ಮನೆಯಲ್ಲಿ ಅತ್ಯಂತ ಭಾರವಿರುವ ವಸ್ತುವಿನ ಹೆಸರನ್ನು ಬರೆಯಿರಿ. ನಿಮಗೆ ಹೇಗೆ ತಿಳಿಯಿತು?

   _____

3. ನಿಮ್ಮ ಶಾಲಾ ಬ್ಯಾಗ್‌ನ್ನು ಆರಾಮವಾಗಿ ತೆಗೆದುಕೊಂಡು ಹೋಗುತ್ತೀರೋ ಅಥವಾ ಸ್ವಲ್ಪ ಶ್ರಮದೊಂದಿಗೊ?

   _____

4. ನಿಮ್ಮ ಬ್ಯಾಗ್‌ನಲ್ಲಿರುವ ಅತ್ಯಂತ ಭಾರವಾದ ಪುಸ್ತಕದ ಹೆಸರನ್ನು ಬರೆಯಿರಿ. ನಿಮಗೆ ಹೇಗೆ ತಿಳಿಯಿತು?

   _____


5. ನಿಮ್ಮ ತೂಕ ಎಷ್ಟು? ನಿಮಗೆ ಹೇಗೆ ತಿಳಿಯಿತು?



ತರಕಾರಿ ಮಾರ್ಕೆಟ್‌ನಲ್ಲಿ ವಿನೋದ!

ಕೆಲವು ಹಣ್ಣು ಮತ್ತು ತರಕಾರಿಗಳನ್ನು ಖರೀದಿಸಲು ರೀಟಾ ಮತ್ತು ಶಬನಮ್ ಮಾರ್ಕೆಟ್‌ಗೆ ಹೊರಟರು. ತರಕಾರಿ ಮಾರುವವನು ತರಕಾರಿಗಳನ್ನು ತೂಕ ಮಾಡುತ್ತಿರುವುದನ್ನು ಅವರು ನೋಡಿದರು.





ಅರ್ಧ ಕುಂಬಳಕಾಯಿಯ ತೂಕ ಎಷ್ಟಿರಬಹುದೆಂದು ನೀವು ಆಲೋಚಿಸುವಿರಿ? _____

©KTBS NOT TO BE REPUBLISHED

ನಾವು ಮಾಡೋಣ


ಮುಂದಿನವುಗಳ ತೂಕವನ್ನು ಅಂದಾಜು ಮಾಡಿ ಹಾಗೂ ಸೂಕ್ತವಾದ ಜಾಗದಲ್ಲಿ (✓) ಮಾಡಿ. ನಿಮ್ಮ ಅಂದಾಜು ಸರಿಯೆ ಎಂಬುದನ್ನು ತೂಕದ ತಕ್ಕಡಿ ಉಪಯೋಗಿಸಿ ಅಳೆದು ಪರಿಶೀಲಿಸಿ.

ಹಣ್ಣುಗಳು ಮತ್ತು ತರಕಾರಿಗಳು	ಅಂದಾಜು		ನೈಜ ತೂಕ	
	1 kg ಗಿಂತ ಕಡಿಮೆ	1 kg ಗಿಂತ ಹೆಚ್ಚು	1 kg ಗಿಂತ ಕಡಿಮೆ	1 kg ಗಿಂತ ಹೆಚ್ಚು
6 ಬಾಳೇಹಣ್ಣುಗಳು				
5 ಆಲೂಗಡ್ಡೆಗಳು				
10 ಟೊಮೊಟೋಗಳು				
15 ಈರುಳ್ಳಿಗಳು				

ನಾವು ಅನ್ವೇಷಿಸೋಣ

ನಾವು ಕಿಲೋಗ್ರಾಂ ಅನ್ನು *kg* ಎಂದೂ ಮತ್ತು ಗ್ರಾಂ ಅನ್ನು *g* ಎಂದೂ ಬರೆಯುತ್ತೇವೆ.


a. ಚಿತ್ರವನ್ನು ಗಮನಿಸಿ. ನೀವೂ ಸಹ ಅದನ್ನೇ ಮಾಡಲು ಪ್ರಯತ್ನಿಸಬಹುದು.



500 ಗ್ರಾಂಗಳ *2* ಪೊಟ್ಟಣಗಳು = 1000 g = 1 kg

ಹಾಗಾಗಿ, 500ಗ್ರಾಂ ನ *1* ಪೊಟ್ಟಣ = $\frac{1}{2}$ kg

ಅಥವಾ 500 g = $\frac{1}{2}$ kg



ಸಕ್ಕರೆ




ಅವಲಕ್ಕಿ



ಬೇಳೆ


b. ಚಿತ್ರವನ್ನು ಗಮನಿಸಿ. ನೀವೂ ಸಹ ಅದನ್ನೇ ಮಾಡಲು ಪ್ರಯತ್ನಿಸಬಹುದು.



***250* ಗ್ರಾಂಗಳ 4 ಪೊಟ್ಟಣಗಳು = 1000 g = 1 kg**

ಹಾಗಾಗಿ, *250 g* ನ 1 ಪೊಟ್ಟಣ = $\frac{1}{4}$ *kg*

ಅಥವಾ 250 g = $\frac{1}{4}$ kg



ಸಕ್ಕರೆ



ಕಡಲೆಬೀಜ




ಟೀ ಸೊಪ್ಪು



ಜೀರಿಗೆ

© KTBS NOT TO BE REPUBLISHED

c. ಚಿತ್ರವನ್ನು ಗಮನಿಸಿ. ನೀವೂ ಸಹ ಅದನ್ನೇ ಮಾಡಲು ಪ್ರಯತ್ನಿಸಬಹುದು.



100 ಗ್ರಾಂಗಳ 10 ಪೊಟ್ಟಣಗಳು = 1000 g = 1 kg



ಟೀ ಸೊಪ್ಪು



ಒಣದ್ರಾಕ್ಷಿ



ಬಾದಾಮಿ



ಗರಂ ಮಸಾಲ


ನಾವು ಕಂಡುಹಿಡಿಯೋಣ

1. 500 g ನ ಒಂದು ಬೇಳೆಯ ಪೊಟ್ಟಣಕ್ಕೆ 250 g ನ ಎಷ್ಟು ಬೇಳೆ ಪೊಟ್ಟಣಗಳು ಸರಿದೂಗುತ್ತವೆ?

ಚಿತ್ರದಲ್ಲಿ ತೋರಿಸಿರುವ ತಕ್ಕಡಿಯ ಎಡ ಪ್ಯಾನ್ ಮೇಲೆ 500 g ನ ಒಂದು ಪೊಟ್ಟಣವನ್ನು ಸರಿದೂಗಿಸಲು ಅಗತ್ಯವಿರುವಷ್ಟು 250 g ಗಳ ಪೊಟ್ಟಣಗಳನ್ನು ಖಾಲಿ ಪ್ಯಾನ್ ಮೇಲೆ ಬರೆಯಿರಿ.

ನೀವು ಏನನ್ನು ಕಂಡುಕೊಂಡಿರಿ?


250g = 500g ನ _____ ($\frac{1}{2}$, 2)




© BOOKTBS NOT TO BE REPUBLISHED

2. ತಕ್ಕಡಿಯ ಪ್ಯಾನ್ ಯಾವ ಬದಿಯಲ್ಲಿ ಬಾಗುತ್ತದೆ ಎಂಬುದನ್ನು ಸೂಚಿಸಲು ಬಾಣದ ಗುರುತುಗಳನ್ನು ಬರೆಯಿರಿ. ಒಂದನ್ನು ನಿಮಗಾಗಿ ತೋರಿಸಿದೆ.


a.




b.




c.




d.




3. ಮುಂದಿನ ಪ್ರತಿ ವಸ್ತುವನ್ನು ಅಳೆಯಲು ಸೂಕ್ತವಾದ ಮಾನವನ್ನು ಹೊಂದಿಸಿ.






@KSEEBS
NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ : 100 g, 500 g, 1 kg. ತೂಕದ ಬಟ್ಟುಗಳನ್ನು ಬಳಸುವ ಒಂದು ತೂಕದ ತಕ್ಕಡಿಯನ್ನು ನೀವು ತರಗತಿಯಲ್ಲಿ ಮಾಡಲು ಪ್ರಯತ್ನಿಸಬಹುದು. ಇದನ್ನು ಮಕ್ಕಳು ಮನೆಯಲ್ಲಿ ಅಥವಾ ತಮ್ಮ ನೆರೆಹೊರೆಯಲ್ಲಿ ಮಾಡಲು ತಿಳಿಸಬಹುದು.



ನಾವು ಮಾಡೋಣ



1. 50 g ನ ಅರಿಶಿನ ಪೊಟ್ಟಣಕ್ಕೆ ಎಷ್ಟು ಎರೇಸರ್‌ಗಳ ತೂಕವು ಸಮವಾಗುತ್ತದೆ? _____
2. 100 g ನ ಒಂದು ಬಾರ್ ಸೋಪ್ _____ ಎರೇಸರ್‌ಗಳಷ್ಟು ತೂಗುತ್ತದೆ.
3. _____ಎರೇಸರ್‌ಗಳು 250 g ಸಕ್ಕರೆಯ ತೂಕಕ್ಕೆ ಸಮ.

ನಾವು ಆಲೋಚಿಸೋಣ

ಸಿಹಿ ತಿಂಡಿ ಬಾಕ್ಸ್‌ಗಳು

ಸಿಹಿ ಅಂಗಡಿ ಮಾಲೀಕ ಶ್ರೀನಾಥನ್ ಅವರಿಗೆ 1 kg ಕಾಜು–ಕಟ್ಲಿಯ ಸರಬರಾಜಿಗೆ ಬಹಳಷ್ಟು ಆರ್ಡರ್‌ಗಳಿವೆ. ಆದರೆ ಅವರು ಅದನ್ನು ಬೇರೆ ಬೇರೆ ಗಾತ್ರದ ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಬೇಕಾಗಿದೆ.




© EBS NOT TO BE REPUBLISHED

ಖಾಲಿ ಜಾಗದಲ್ಲಿ 1 kg ಕಾಜು–ಕಟ್ಲಿಯನ್ನು ಪ್ಯಾಕ್ ಮಾಡಲು ಅಗತ್ಯವಿರುವ ಬಾಕ್ಸ್‌ಗಳ ಸಂಖ್ಯೆಯನ್ನು ಬರೆಯಿರಿ.

1. ಪ್ರತಿ ಬಾಕ್ಸ್‌ನಲ್ಲಿ 500 g ಸಿಹಿ ತೂಗುವಂತೆ ಶ್ರೀ ದಾಸ್ ಅವರಿಗೆ ಬಾಕ್ಸ್‌ಗಳು ಬೇಕಾಗಿವೆ. _____
2. ಪ್ರತಿ ಬಾಕ್ಸ್‌ನಲ್ಲಿ 250 g ಸಿಹಿ ತೂಗುವಂತೆ ಶ್ರೀಮತಿ ಫರ್ನಾಂಡಿಸ್ ಅವರಿಗೆ ಬಾಕ್ಸ್‌ಗಳು ಬೇಕಾಗಿವೆ _____
3. ಪ್ರತಿ ಬಾಕ್ಸ್‌ನಲ್ಲಿ 100 g ಸಿಹಿ ತೂಗುವಂತೆ ಶ್ರೀಮತಿ ಖಾನ್ ಅವರಿಗೆ ಬಾಕ್ಸ್‌ಗಳು ಬೇಕಾಗಿವೆ _____ .
4. ಪ್ರತಿ ಬಾಕ್ಸ್‌ನಲ್ಲಿ 50 g ಸಿಹಿ ತೂಗುವಂತೆ ಶ್ರೀ ಪಟೇಲ್ ಅವರಿಗೆ ಬಾಕ್ಸ್‌ಗಳು ಬೇಕಾಗಿವೆ _____ .

ತೂಕದ ಯಂತ್ರಗಳು

ವಿವಿಧ ವಸ್ತುಗಳನ್ನು ತೂಕ ಮಾಡಲು ವಿವಿಧ ತೂಕದ ಯಂತ್ರಗಳನ್ನು ಬಳಸುವ ಬಗ್ಗೆ ನಿಮಗೆ ತಿಳಿದಿದೆಯೇ?



ನಾವು ಮಾಡೋಣ

ಮುಂದಿನ ವಸ್ತುಗಳು ನಿಮ್ಮ ಮನೆಯಲ್ಲಿ ಒಂದು ತಿಂಗಳಲ್ಲಿ ಎಷ್ಟು ಖರ್ಚಾಗುತ್ತದೆ ಎಂಬುದನ್ನು ನಿಮ್ಮ ಪೋಷಕರನ್ನು ಕೇಳಿ, ಕಂಡುಕೊಳ್ಳಿ.

ವಸ್ತುಗಳು	ತೂಕ
ಗೋಧಿಹಿಟ್ಟು	
ಅಕ್ಕಿ	
ಬೇಳೆಗಳು	
ಸಕ್ಕರೆ	

@KTBS NOT TO BE REPUBLISHED

ತರನ್ ಮತ್ತು ಅವನ ಸಹೋದರಿ ಹಿಟ್ಟು, ಅಕ್ಕಿ ಮತ್ತು ಉಪ್ಪಿನ ಚೀಲಗಳನ್ನು ಎತ್ತುತ್ತಿದ್ದಾರೆ.



ಈ ಚೀಲಗಳನ್ನು ಎತ್ತುವಾಗ ಅವರು ಏನನ್ನು ಅನುಭವಿಸುತ್ತಿದ್ದಾರೆ ಎಂದು ನೀವು ಭಾವಿಸುವಿರಿ?

ಅಂತಹ ಚೀಲಗಳನ್ನು ನಿಮ್ಮ ಮನೆಯಲ್ಲಿ ನೀವು ಯಾವಾಗಲಾದರೂ ಎತ್ತಿರುವಿರಾ? ನೀವು ಏನನ್ನು ಅನುಭವಿಸಿರುವಿರಿ? ಚರ್ಚಿಸಿ.

ನಾವು ಮಾಡೋಣ

1. ನಿಮ್ಮ ಸುತ್ತಲಿರುವ ಕೆಲವು ವಸ್ತುಗಳನ್ನು ಎತ್ತಲು ಪ್ರಯತ್ನಿಸಿ ಮತ್ತು ಅವುಗಳಲ್ಲಿ ಯಾವ ಮೂರು ವಸ್ತುಗಳನ್ನು ಸುಲಭವಾಗಿ ಎತ್ತಲು ಸಾಧ್ಯವಾಯಿತು, ಅವುಗಳ ಹೆಸರುಗಳನ್ನು ಬರೆಯಿರಿ. ಅವುಗಳ ತೂಕಗಳನ್ನು ಅಂದಾಜಿಸಿ ಬರೆಯಿರಿ.

   1. _____ 2. _____ 3. _____

2. ಈಗ ಬಹಳಷ್ಟು ಪ್ರಯತ್ನಪಟ್ಟು ಎತ್ತಲು ಸಾಧ್ಯವಾದ ವಸ್ತುಗಳ ಹೆಸರುಗಳನ್ನು ಬರೆಯಿರಿ. ಅವುಗಳ ತೂಕಗಳನ್ನು ಅಂದಾಜಿಸಿ ಬರೆಯಿರಿ.


   1. _____ 2. _____ 3. _____

3. ಇವುಗಳಲ್ಲಿ 1 kg ಯ ಎಷ್ಟು ಪೊಟ್ಟಣಗಳಿವೆ?

   a. 10 kg: _____ c. 50 kg: _____

   b. 20 kg: _____ d. 25 kg: _____

4. ಎಡಭಾಗದಲ್ಲಿರುವ ವಸ್ತುಗಳನ್ನು ಬಲಭಾಗದಲ್ಲಿರುವ ಅವುಗಳ ಅಂದಾಜು ತೂಕಕ್ಕೆ ಹೋಲಿಸಿ.

ಒಂದು ಬೆಕ್ಕು 	1 g ಯಿಂದ 5 g
ಒಂದು ಆನೆ 	150 kg ಯಿಂದ 300 kg
1 ಲೀಟರ್ ತುಂಬಿದ ಬಾಟಲ್ 	3 kg ಯಿಂದ 5 kg
ಒಂದು ಹುಲಿ 	10 g ಯಿಂದ 15 g
ಒಂದು ಖಾಲಿ ಸಿಲಿಂಡರ್ 	6 kg ಯಿಂದ 10 kg
ಒಂದು ಪೆನ್ 	1000 kg ಗಿಂತ ಹೆಚ್ಚು
ಒಂದು ಎಲೆ 	15 kg
ಒಂದು ಮರದ ಕುರ್ಚಿ 	800 g ನಿಂದ 1000 g

@KTBS NOT TO BE REPUBLISHED

ನಿಮಗೆ ತಿಳಿದಿದೆಯೇ

ಮೀರಾಬಾಯಿ ಚಾನು ಭಾರತೀಯ ಭಾರ ಎತ್ತುವ ಪಟು. ಅವರು ಮಹಿಳೆಯರ 49 kg ಸ್ಪರ್ಧೆಯಲ್ಲಿ 2020ರ ಟೋಕಿಯೊ ಒಲಂಪಿಕ್ಸ್‌ನಲ್ಲಿ ಬೆಳ್ಳಿಯ ಪದಕವನ್ನು ಗೆದ್ದಿದ್ದಾರೆ. ಅವರು ಒಟ್ಟಿಗೆ 202 kg ತೂಕ ಎತ್ತಿದ್ದಾರೆ.



ಅಳತೆ ಮಾಡುವ ಸಾಮರ್ಥ್ಯ



1 ಲೀಟರ್ ಬಾಟಲ್ ನೆನಪಿದೆಯೇ? ನಿನ್ನ ನೀರಿನ ಬಾಟಲ್‌ನಲ್ಲಿ ಎಷ್ಟು ನೀರು ಹಿಡಿಯುತ್ತದೆ? ಮುಂದೆ ನೀಡಿರುವ ಪರಿಮಾಣದ ನೀರನ್ನು ಹಿಡಿಯುವ ಬಾಟಲ್‌ಗಳು ಮತ್ತು ಸಂಗ್ರಾಹಕಗಳನ್ನು ಕಂಡುಹಿಡಿಯಿರಿ. ಮುಂದಿನ ಕೋಷ್ಟಕದಲ್ಲಿ ಅವುಗಳ ಹೆಸರುಗಳನ್ನು ಸೂಕ್ತವಾದ ಜಾಗದಲ್ಲಿ ಬರೆಯಿರಿ.

1 ಲೀಟರ್‌ಗಿಂತ ಕಡಿಮೆ	1 ಲೀಟರ್	1 ಲೀಟರ್‌ಗಿಂತ ಹೆಚ್ಚು

500 *ml*, 250 *ml*, 100 *ml*, 50 *ml*, ಮತ್ತು 10 *ml* ಸಾಮರ್ಥ್ಯವಿರುವ ವಿವಿಧ ಬಾಟಲ್‌ಗಳನ್ನು ನಿಮ್ಮ ಶಿಕ್ಷಕರ ಮತ್ತು ಪೋಷಕರ ಸಹಾಯದಿಂದ ಸಂಗ್ರಹಿಸಿ.

ಒಂದು ಲೀಟರ್ ನೀರಿನ ಬಾಟಲ್ ಅನ್ನು ಬೇರೆ ಬೇರೆ ಚಿಕ್ಕ ಚಿಕ್ಕ ಬಾಟಲ್‌ಗಳಲ್ಲಿನ ನೀರಿನಿಂದ ತುಂಬಲು ಪ್ರಯತ್ನಿಸಿ.


ಕೆಲವೊಮ್ಮೆ, ನಾವು ಲೀಟರ್‌ಗೆ *l* ಎಂದೂ ಮಿಲಿಲೀಟರ್‌ಗೆ *ml* ಎಂದು ಬರೆಯುತ್ತೇವೆ.

@KTBS NOT TO BE REPUBLISHED

ನಾವು ಕಂಡುಹಿಡಿಯೋಣ

a) 1 *l* ಬಾಟಲ್ ಅನ್ನು 500 *ml* ನ ಎಷ್ಟು ಬಾಟಲ್‌ಗಳು ತುಂಬುತ್ತವೆ?






500 ml + 500 ml = 1 l

1000 ml = 1 l

500 ml = $\frac{1}{2}$ l

b) 1 *l* ಬಾಟಲ್ ಅನ್ನು 250 *ml* ನ ಎಷ್ಟು ಬಾಟಲ್‌ಗಳು ತುಂಬುತ್ತವೆ?



250 ml + 250 ml + 250 ml + 250 ml = 1 l

ml = 1 l

250 ml = $\frac{1}{4}$ l

c) 1 *l* ಬಾಟಲ್ ಅನ್ನು 100 *ml* ನ ಎಷ್ಟು ಬಾಟಲ್‌ಗಳು ತುಂಬುತ್ತವೆ?



d) ಇವುಗಳು ಎಷ್ಟು

$\frac{1}{2}$ *l* ನಲ್ಲಿ 250 *ml* _____

750 *ml* ನಲ್ಲಿ 250 *ml* = _____

$\frac{1}{2}$ *l* ನಲ್ಲಿ 100 *ml* = _____

800 *ml* ನಲ್ಲಿ 100 *ml* = _____

©KTBS NOT TO BE REPUBLISHED

ನಾವು ಮಾಡೋಣ

1. 10 *ml* ನ ಒಂದು ಡೋಸ್ ಕಪ್ ಅಥವಾ ಬಾಟಲ್ ಅನ್ನು ತೆಗೆದುಕೊಳ್ಳಿ. ಎಷ್ಟು 10 *ml* ಗಳು, 100 *ml* ಬಾಟಲ್ ಅನ್ನು ತುಂಬುತ್ತದೆ ಕಂಡುಹಿಡಿಯಿರಿ. _____



ಇವುಗಳು ಎಷ್ಟು? ಕಂಡುಹಿಡಿಯಿರಿ.


a) 250 *ml* ಲೋಟವನ್ನು 10 *ml* ಡೋಸ್‌ನ ಎಷ್ಟು ಕಪ್‌ಗಳು ತುಂಬುತ್ತವೆ?
_____

b) 500 *ml* ಪಾತ್ರೆಯನ್ನು 10 *ml* ಡೋಸ್‌ನ ಎಷ್ಟು ಕಪ್‌ಗಳು ತುಂಬುತ್ತವೆ?
_____

c) 1 *l* ಬಾಟಲ್ ಅನ್ನು 10 *ml* ಡೋಸ್‌ನ ಎಷ್ಟು ಕಪ್‌ಗಳು ತುಂಬುತ್ತವೆ? _____

2. 1 *ml* ಡ್ರಾಪರ್ ತೆಗೆದುಕೊಳ್ಳಿ, ಇವುಗಳನ್ನು ಕಂಡುಹಿಡಿಯಿರಿ.

a) 10 *ml* ಡೋಸ್‌ಕಪ್ ಅನ್ನು 1 *ml* ನ ಎಷ್ಟು ಡ್ರಾಪರ್‌ಗಳು ತುಂಬುತ್ತವೆ? _____



b) ಒಂದು ಚಮಚವನ್ನು ಎಷ್ಟು ಡ್ರಾಪರ್‌ಗಳು ತುಂಬುತ್ತವೆ?
_____

3. ಒಂದು ಬಾರಿಗೆ ಈ ದ್ರವಗಳನ್ನು ಎಷ್ಟು ಬಳಸುತ್ತಾರೆ ಎಂಬುದನ್ನು ಕಂಡುಹಿಡಿಯಿರಿ.

a) ಕಣ್ಣಿನ ಡ್ರಾಪ್ಸ್ ಒಂದು ಬಾರಿಗೆ 1 *ml* ಗಿಂತ ಕಡಿಮೆ

b) ಜೇನುತುಪ್ಪ _____

c) ಕೆಮ್ಮಿನ ಸಿರಪ್ _____

d) ಅಡುಗೆ ಎಣ್ಣೆ _____

e) _____ _____









4. ಶ್ರೀ ಕೃಷ್ಣ ಅವರು ಸುಗಂಧದ ಎಣ್ಣೆಯನ್ನು ವಿವಿಧ ಗಾತ್ರದ ಬಾಟಲ್‌ಗಳಲ್ಲಿ ಪ್ಯಾಕ್ ಮಾಡುತ್ತಾರೆ. ಒಂದು ಹಬ್ಬದ ಸಮಯದಲ್ಲಿ ಮುಂದಿನ ಗ್ರಾಹಕರು 1 *l* ಸುಗಂಧದ ಎಣ್ಣೆಯನ್ನು ವಿವಿಧ ಗಾತ್ರದ ಬಾಟಲ್‌ಗಳಲ್ಲಿ ಕೇಳುತ್ತಾರೆ. ಪ್ರತಿಯೊಬ್ಬರೂ ಪಡೆಯುವ ಬಾಟಲ್‌ಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

@KTBS NOT TO BE REPUBLISHED

a) ಶ್ರೀಮತಿ ಶೆಟ್ಟಿ ಅವರಿಗೆ ಪ್ರತಿಯೊಂದು 500 *ml* ನ ಬಾಟಲ್‌ಗಳು ಬೇಕಾಗಿವೆ _____

b) ಶ್ರೀ ಮುತ್ತುಕುಮಾರ್ ಅವರಿಗೆ ಪ್ರತಿಯೊಂದು 200 *ml* ನ ಬಾಟಲ್‌ಗಳು ಬೇಕಾಗಿವೆ _____

c) ಶ್ರೀಮತಿ ನಳಿನಿ ಅವರಿಗೆ ಪ್ರತಿಯೊಂದು 100 *ml* ನ ಬಾಟಲ್‌ಗಳು ಬೇಕಾಗಿವೆ _____

d) ಶ್ರೀಮತಿ ಕಣ್ಣನ್ ಅವರಿಗೆ ಪ್ರತಿಯೊಂದು 50 *ml* ನ ಬಾಟಲ್‌ಗಳು ಬೇಕಾಗಿವೆ _____

5. ಅಂದಾಜಿಸಿ ಮತ್ತು ಅಳತೆ ಮಾಡಿ ಪರಿಶೀಲಿಸಿ. ಈ ಉದ್ದೇಶಕ್ಕಾಗಿ ನೀವು ಸಂಗ್ರಹಿಸಿರುವ ಬಾಟಲ್‌ಗಳನ್ನು ಬಳಸಿ. (ಉದಾಹರಣೆಗೆ 500 *ml*, 250 *ml*, 100 *ml*, 50 *ml*, ಮತ್ತು 10 *ml*).

ಸಂಗ್ರಾಹಕ	ಅಂದಾಜು	ನೈಜ ಸಾಮರ್ಥ್ಯ
ನೀರಿನ ಬಾಟಲ್		
ಲೋಟ		
ಮಗ್		
ಜಗ್		
ಬಕೆಟ್		
ಚಮಚ		
ಬಟ್ಟಲು		



@KTBS NOT TO BE REPUBLISHED

ನಾವು ಅನ್ವೇಷಿಸೋಣ

ಹತ್ತಿರದ ಒಂದು ಅಂಗಡಿಗೆ ಭೇಟಿ ನೀಡಿ ಮತ್ತು ಅಲ್ಲಿ ಮುಂದೆ ನೀಡಿರುವ ಪರಿಮಾಣಗಳಲ್ಲಿ ಮಾರಾಟ ಮಾಡುವ ವಿವಿಧ ವಸ್ತುಗಳ ಪಟ್ಟಿಯನ್ನು ತಯಾರಿಸಿ.



50 *ml*	100 *ml*	200 *ml*	250 *ml*	500 *ml*	900 *ml*

ನಾವು ಕಂಡು ಹಿಡಿಯೋಣ

a) ಒಂದು ದಿನದಲ್ಲಿ ನೀವು ಎಷ್ಟು ಲೀಟರ್ ನೀರು ಕುಡಿಯುವಿರಿ? ಹೇಗೆ ಕಂಡುಹಿಡಿದಿರಿ?



_____

b) ಒಂದು ಬಾರಿಗೆ ಒಂದು ಕಾಗೆ ಎಷ್ಟು ನೀರು ಕುಡಿಯುತ್ತದೆ?



_____

c) ಒಂದು ದಿನದಲ್ಲಿ ನೀವು ಎಷ್ಟು ಹಾಲು ಕುಡಿಯುತ್ತೀರಿ?




_____

d) ಒಂದು ದಿನದಲ್ಲಿ ಒಂದು ಆನೆ ಎಷ್ಟು ನೀರು ಕುಡಿಯುತ್ತದೆ?

_____

ನೀರನ್ನು ಬಹುತೇಕ ಏತಕ್ಕಾಗಿ ಉಪಯೋಗಿಸುವಿರಿ? ಅತಿ ಕಡಿಮೆ ನೀರನ್ನು ಯಾವುದಕ್ಕೆ ಉಪಯೋಗಿಸುವಿರಿ? ಇದನ್ನು ನಿಮ್ಮ ತರಗತಿಯಲ್ಲಿ ಬೇರೆ ಕೆಲವುಗಳಿಗೆ ಹೋಲಿಸಿ. ಯಾವ ಚಟುವಟಿಕೆಗಳಿಗೆ ನೀರಿನ ಬಳಕೆಯ ಪ್ರಮಾಣ ಸಮವಾಗಿದೆ?

@KTBS NOT TO BE REPUBLISHED



ಮುಂದಿನ ಚಟುವಟಿಕೆಗಳಲ್ಲಿ ಎಷ್ಟು ನೀರನ್ನು ಉಪಯೋಗಿಸಬಹುದು?

a. ಸ್ನಾನ ಮಾಡಲು

b. ಭೂಮಿಯಲ್ಲಿ ಬೆಳೆಗಳಿಗೆ ನೀರುಣಿಸಲು



c. ಹೂ ಗಿಡಗಳಿಗೆ ನೀರುಣಿಸಲು


d. ಬಟ್ಟೆಗಳನ್ನು ಒಗೆಯಲು

e. _____

f. _____


ಸಾಮರ್ಥ್ಯವನ್ನು ಅಳೆಯಲು ಬಳಸುವ ಸಂಗ್ರಾಹಕಗಳು

ಹಾಲನ್ನು ಅಳತೆ ಮಾಡಲು ಮುಂದಿನ ಅಳತೆ ಕ್ಯಾನ್‌ಗಳನ್ನು ಉಪಯೋಗಿಸುವುದನ್ನು ನೀವು ನೋಡಿದ್ದೀರಾ?



50 *ml* 100 *ml* 200 *ml* 500 *ml* 1000 *ml*


ದೈನಂದಿನ ಜೀವನದಲ್ಲಿ ನೀರಿನ ಸಂರಕ್ಷಣೆ



ನಲ್ಲಿ ಅಥವಾ ನೀರಿನ ಶುದ್ಧೀಕರಣ ಯಂತ್ರದಿಂದ ಚಿಕ್ಕ ನೀರಿನ ಹನಿಗಳು ಹರಿಯುತ್ತಿರುವುದನ್ನು ನೀವು ಯಾವಾಗಲಾದರೂ ಗಮನಿಸಿರುವಿರಾ? ನಿಜವಾಗಿ ಎಷ್ಟು ನೀರು ವ್ಯರ್ಥವಾಗುತ್ತಿದೆ ಎಂಬುದನ್ನು ಪರಿಗಣಿಸಿರುವಿರಾ?

ಒಂದು ಪಾತ್ರೆಯನ್ನು ತೆಗೆದುಕೊಳ್ಳಿ, ಅದನ್ನು ನೀರು ಸೋರುತ್ತಿರುವ ನಲ್ಲಿ ಅಥವಾ ನೀರಿನ ಶುದ್ಧೀಕರಣ ಯಂತ್ರದ ಕೆಳಗೆ ಒಂದು ಗಂಟೆ ಕಾಲ ಇರಿಸಿ. ಕೇವಲ ಒಂದು ಹನಿಯಿಂದ ಒಂದು ಗಂಟೆಯಲ್ಲಿ ಎಷ್ಟು ನೀರು ವ್ಯರ್ಥವಾಗಿದೆ? ನಿಮಗೆ ಇದು ಆಶ್ಚರ್ಯವಾಯಿತೆ?

ಒಂದು ದಿನದಲ್ಲಿ ಎಷ್ಟು ನೀರು ವ್ಯರ್ಥವಾಗಿದೆ?
ಒಂದು ವಾರದಲ್ಲಿ ಎಷ್ಟು ವ್ಯರ್ಥವಾಗಿರಬಹುದು ಎಂದು ನೀವು ಆಲೋಚಿಸುವಿರಿ?
ಈ ರೀತಿ ನೀರಿನ ಅಪವ್ಯಯದಿಂದ ನಮಗೆ ಹೇಗೆ ತೊಂದರೆಯಾಗುತ್ತದೆ?



© KLPS NOT TO BE REPUBLISHED

ಅಧ್ಯಾಯ
9

ಸಮ ಗುಂಪುಗಳು


K5E2V3




ಪ್ರಾಣಿ ಜಿಗಿತಗಳು

ಖಾಲಿ ಜಾಗಗಳನ್ನು ಸೂಕ್ತವಾದ ಸಂಖ್ಯೆಗಳಿಂದ ಭರ್ತಿಮಾಡಿ. ತನ್ನ ಆಹಾರವನ್ನು ತಲುಪಲು ಪ್ರಾಣಿಗೆ ಎಷ್ಟು ಜಿಗಿತಗಳು ಬೇಕು ಎಂಬುದನ್ನು ಕಂಡುಹಿಡಿಯಿರಿ.

1. ಕಪ್ಪೆ ಒಮ್ಮೆಲೆ 3 ಹೆಜ್ಜೆಗಳಷ್ಟು ಜಿಗಿಯುತ್ತದೆ. ಯಾವ ಸಂಖ್ಯೆಗಳನ್ನು ಕಪ್ಪೆ ತಲುಪುತ್ತದೆ? ಅದು 67ನ್ನು ತಲುಪುತ್ತದೆಯೇ?




2. ಅಳಿಲು ಒಮ್ಮೆಲೆ 4 ಹೆಜ್ಜೆಗಳಷ್ಟು ಜಿಗಿಯುತ್ತದೆ. ಅಳಿಲು ಯಾವ ಸಂಖ್ಯೆಗಳನ್ನು ತಲುಪುತ್ತದೆ? 60 ನ್ನು ತಲುಪಲು ಅಳಿಲು ಎಷ್ಟು ಬಾರಿ ಜಿಗಿಯಬೇಕು?




@KTBS NOT TO BE REPUBLISHED

3. ಮೊಲ ಒಮ್ಮೆಲೆ 6 ಹೆಜ್ಜೆಗಳಷ್ಟು ಜಿಗಿಯುತ್ತದೆ.
ಯಾವ ಸಂಖ್ಯೆಗಳನ್ನು ಮೊಲ ತಲುಪುತ್ತದೆ?
ಮೊಲ ನಿಲ್ಲುವ 3–ಅಂಕಿಯ ಅತೀ ಚಿಕ್ಕ ಸಂಖ್ಯೆ ಯಾವುದು?
ಈ ಸಂಖ್ಯೆಯನ್ನು ತಲುಪಲು ಮೊಲ ಎಷ್ಟು ಬಾರಿ ಜಿಗಿಯಿತು?



4. ಕಾಂಗರೂ ಒಮ್ಮೆಲೆ 8 ಹೆಜ್ಜೆಗಳನ್ನು ಜಿಗಿಯುತ್ತದೆ. ಕಾಂಗರೂ ಯಾವ ಸಂಖ್ಯೆಗಳನ್ನು ತಲುಪುತ್ತದೆ?



ಮೊಲ ಮತ್ತು ಕಾಂಗರೂ ಎರಡೂ ತಲುಪುವ ಸಂಖ್ಯೆಗಳಿವೆಯೆ?

5. 48 ನ್ನು ತಲುಪಲು ಮೊಲ ಎಷ್ಟು ಬಾರಿ ಜಿಗಿಯಿತು? _____



ಅದೇ ಸಂಖ್ಯೆಯನ್ನು ತಲುಪಲು ಕಾಂಗರೂ ಎಷ್ಟು ಬಾರಿ ಜಿಗಿಯಿತು? _____
ನೀವು ಏನನ್ನು ಗಮನಿಸಿದಿರಿ? ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ. _____

6. 60 ನ್ನು ತಲುಪಲು, ಕಪ್ಪೆ ಎಷ್ಟು ಬಾರಿ ಜಿಗಿಯಿತು? _____
ನೀವು ಏನನ್ನು ಗಮನಿಸಿದಿರಿ? ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.


@KTBS NOT TO BE REPUBLISHED

ಸಾಮಾನ್ಯ ಗುಣಕಗಳು

1. ಕಪ್ಪೆ ಮತ್ತು ಅಳಿಲು ಎರಡೂ ತಲುಪಿದ ಸಂಖ್ಯೆಗಳು ಯಾವುವು? 3 ಮತ್ತು 4 ರ ಕೆಲವು ಸಾಮಾನ್ಯ ಗುಣಕಗಳು _____
2. ಮೊಲ ಮತ್ತು ಕಾಂಗರೂ ಎರಡೂ ತಲುಪಿದ ಸಂಖ್ಯೆಗಳು ಯಾವುವು? 6 ಮತ್ತು 8ರ ಕೆಲವು ಸಾಮಾನ್ಯ ಗುಣಕಗಳು _____

7. ಬೆಕ್ಕು ಮತ್ತು ಇಲಿ ಒಂದೇ ಸಂಖ್ಯೆಯ ಮೇಲೆ ಇದ್ದರೆ, ಬೆಕ್ಕು ಇಲಿಯನ್ನು ಹಿಡಿಯುತ್ತದೆ.

   ಈಗ ಬೆಕ್ಕು 6 ರ ಮೇಲೆ ಮತ್ತು ಇಲಿ 12 ರ ಮೇಲಿದೆ. ಬೆಕ್ಕು 3 ಹೆಜ್ಜೆಗಳು ಮುಂದೆ ಜಿಗಿದಾಗ, ಇಲಿ 2 ಹೆಜ್ಜೆಗಳು ಮುಂದೆ ಜಿಗಿಯುತ್ತದೆ. ಬೆಕ್ಕು ಇಲಿಯನ್ನು ಹಿಡಿಯುತ್ತದೆಯೇ? ಹೌದಾದರೆ, ಯಾವ ಸಂಖ್ಯೆಯಲ್ಲಿ?



8. ಗುಣಾಕಾರ ಮತ್ತು ಭಾಗಾಕಾರದ ವಾಕ್ಯಗಳನ್ನು ಗುರ್ತಿಸಿ. ವಾಕ್ಯಗಳಿಗೆ ಶೇಡ್ ಮಾಡಿ.

   ಎಷ್ಟು ಕಂಡುಹಿಡಿಯಲು ನಿಮಗೆ ಸಾಧ್ಯವಾಯಿತು?

   ಎರಡು ಉದಾಹರಣೆಗಳನ್ನು ನಿಮಗಾಗಿ ಮಾಡಲಾಗಿದೆ.

3	4	2	7	4	9	8	2
4	2	10	20	5	2	2	4
12	8	0	6	4	8	8	1
3	2	6	2	2	6	16	2
2	3	6	18	6	5	3	1
10	3	4	1	12	2	7	14
2	0	2	2	6	10	7	2
20	5	8	2	2	5	10	2

©KTBS NOT TO BE REPUBLISHED

ಗುಲಾಬಿನ ತೋಟ

1. ಗುಲಾಬಿನ ತೋಟದಲ್ಲಿ ಲಿಲ್ಲಿ ಹೂಗಳಿವೆ. ಪ್ರತಿ ಲಿಲ್ಲಿ ಹೂಗೆ 3 ದಳಗಳಿವೆ. 12 ಹೂಗಳಲ್ಲಿ ಎಷ್ಟು ದಳಗಳಿರುತ್ತವೆ? ನಿಮ್ಮ ಉತ್ತರವನ್ನು ಹೇಗೆ ಕಂಡುಕೊಂಡಿರಿ ಎಂಬುದನ್ನು ತೋರಿಸಿ.



   ಗುಲಾಬಿ ಬಳಿ 12 × 3 ದಳಗಳಿವೆ.

   10 ಲಿಲ್ಲಿ ಗಳಲ್ಲಿನ ದಳಗಳು, 10 × 3 = 30 ದಳಗಳು

   2 ಲಿಲ್ಲಿಗಳಲ್ಲಿನ ದಳಗಳು _____

   12 ಲಿಲ್ಲಿಗಳಲ್ಲಿನ ದಳಗಳು _____

ಗುಂಪುಗಳ ಸಂಖ್ಯೆ (ಗುಣಕ)

12 × 3 = 36 (ಗುಣಲಬ್ಧ)

ಗುಂಪಿನ ಗಾತ್ರ (ಗುಣ್ಯ)

ಗುಣಾಕಾರದ ಹೇಳಿಕೆ

2. ದಾಸವಾಳ ಹೂವಿನಲ್ಲಿ 5 ದಳಗಳಿವೆ. ಗುಲಾಬೊ ಎಲ್ಲಾ ದಳಗಳನ್ನು ಎಣಿಸಿ 80 ಇವೆ ಎಂಬುದನ್ನು ಕಂಡುಕೊಂಡಳು. ಅವಳಲ್ಲಿ ಎಷ್ಟು ಹೂಗಳಿವೆ?



ಗುಲಾಬೊ ಬಳಿ, 80 ÷ 5 ಹೂಗಳಿವೆ.
5 ದಳಗಳು, 1 ಹೂ.
10 ದಳಗಳು, 2 ಹೂಗಳು
50 ದಳಗಳು, 10 ಹೂಗಳು
ಆಗ, 80 ದಳಗಳು _____ ಹೂಗಳು.

ಶಿಕ್ಷಕರಿಗೆ ಟಿಪ್ಪಣಿ: ಈ ಅಧ್ಯಾಯದಲ್ಲಿ ನಮ್ಮ ಗಮನ 1, 2 ಮತ್ತು 3 – ಅಂಕಿ ಸಂಖ್ಯೆಗಳನ್ನು, ಗುಂಪಿನ ಗಾತ್ರ 10 ಕ್ಕಿಂತ ಕಡಿಮೆಯಿರುವಂತೆ, 1–ಅಂಕಿಯಿಂದ ಗಣಿಸುವುದು. ಮಕ್ಕಳು 'ಗುಣಕ' (ಗುಂಪುಗಳ ಸಂಖ್ಯೆ)ವನ್ನು 10 ರ ಗುಣಲಬ್ಧಗಳಾಗಿ ವಿಭಾಗಿಸಿ, ಲೆಕ್ಕಾಚಾರಗಳನ್ನು ಸರಳಗೊಳಿಸುವುದಕ್ಕೆ ಪ್ರೋತ್ಸಾಹಿಸುವುದು. ಅವರು ದ್ವಿಗುಣಗೊಳಿಸುವ ಮತ್ತು ಅರ್ಧ ಮಾಡುವ ಮಾರ್ಗೋಪಾಯಗಳನ್ನು ಬಳಸಬಹುದು.




3. ಚಿತ್ರದಲ್ಲಿ ತೋರಿಸಿರುವಂತೆ ಗುಲಾಬೊ ಕೆಲವು ಚೆಂಡು ಹೂವಿನ ಸಸಿಗಳನ್ನು ಒಂದು ಬಾಕ್ಸ್‌ನಲ್ಲಿ ನೆಡುತ್ತಾಳೆ.



ಪ್ರತಿ ಅಡ್ಡಸಾಲಿನಲ್ಲಿ _____ ಸಸಿಗಳಿವೆ.
ಬಾಕ್ಸ್‌ನಲ್ಲಿ _____ ಅಡ್ಡಸಾಲುಗಳಿವೆ.
ಅವಳು ಎಷ್ಟು ಸಸಿಗಳನ್ನು ನೆಟ್ಟಿದ್ದಾಳೆ?
ನೀವು ಅದನ್ನು ಹೇಗೆ ಲೆಕ್ಕ ಮಾಡಿದಿರಿ?
ಗಣಿತದ ಹೇಳಿಕೆ _____


4. "ಡೈಲಿಫ್ರೆಶ್" ಸೂಪರ್ ಮಾರ್ಕೆಟ್‌ನಲ್ಲಿ ಚೆರ್ರಿ ಹಣ್ಣುಗಳನ್ನು ಒಂದು ದೊಡ್ಡ ಟ್ರೇನಲ್ಲಿ ಇಡಲಾಗಿದೆ.




ಸೂಪರ್ ಮಾರ್ಕೆಟ್‌ನಲ್ಲಿ ಚೆರ್ರಿ ಹಣ್ಣುಗಳ ಎಷ್ಟು ಬಾಕ್ಸ್‌ಗಳಿವೆ?
ಅವುಗಳನ್ನು ನೀವು ಹೇಗೆ ಕಂಡುಕೊಂಡಿರಿ ಎಂಬುದನ್ನು ತೋರಿಸಿ.
ಚೆರ್ರಿ ಹಣ್ಣಿನ ಬಾಕ್ಸ್‌ಗಳ _____ ಕಂಬಸಾಲುಗಳಿವೆ.
ಪ್ರತಿ ಕಂಬಸಾಲಿನಲ್ಲಿ _____ ಬಾಕ್ಸ್‌ಗಳಿವೆ.
ಅಲ್ಲಿ ಒಟ್ಟು _____ ಬಾಕ್ಸ್‌ಗಳಿವೆ.
ಗಣಿತದ ಹೇಳಿಕೆ _____

© KTBS TO BE REPUBLISHED

5. ರಾಧ ಬೇಕರಿ ಅಂಗಡಿಯೊಂದನ್ನು ನಡೆಸುತ್ತಿದ್ದಾಳೆ. ಅವಳು 18 ಕಪ್‌ಕೇಕ್‌ಗಳನ್ನು ಮುಂದೆ ತೋರಿಸಿರುವ ಗಾತ್ರದ ಟ್ರೇಯಲ್ಲಿ ತಯಾರಿಸುತ್ತಾಳೆ.



a) ಮುಂದೆ ನೀಡಿರುವ ಎರಡು ಟ್ರೇಗಳಲ್ಲಿ ಕಪ್‌ಕೇಕ್‌ಗಳ ಜೋಡಣೆಯನ್ನು ಪೂರ್ಣಗೊಳಿಸಿ.






b) ತನ್ನಲ್ಲಿರುವ ಓವನ್‌ನಲ್ಲಿ ಅವಳು ಒಂದು ಬಾರಿಗೆ ಎರಡು ಅಂತಹ ಟ್ರೇಗಳನ್ನು ಉಪಯೋಗಿಸಬಹುದು. ಒಂದು ಪ್ರಯತ್ನದಲ್ಲಿ ಅವಳು ಎಷ್ಟು ಕಪ್‌ಕೇಕ್‌ಗಳನ್ನು ಮಾಡಬಹುದು? _____

c) ಈ ದಿನ ಅವಳು ಒಂದು ವಿಶೇಷ ಆರ್ಡರ್ ಪಡೆದಿದ್ದಾಳೆ. ಅವಳು 108 ಕಪ್‌ಕೇಕ್‌ಗಳನ್ನು ಮಾಡಿದ್ದಾಳೆ. ಅವಳು ಎಷ್ಟು ಟ್ರೇಗಳಲ್ಲಿ ಕೇಕ್ ಬೇಯಿಸಿದ್ದಾಳೆ?

d) ಅವಳಲ್ಲಿ ಇನ್ನೊಂದು ಚೌಕಾಕಾರದ ಬೇಯಿಸುವ ಟ್ರೇ ಇದೆ. ಅಂತಹ [illegible] 36 ಮಿನಿ ಕಪ್‌ಕೇಕ್‌ಗಳನ್ನು ಬೇಯಿಸಬಹುದು. ಮುಂದಿನ ಜೋಡಣೆಗಳನ್ನು ಪೂರ್ಣಗೊಳಿಸಿ.



ಕಂಬಸಾಲುಗಳ ಸಂಖ್ಯೆ: _____

ಪ್ರತಿ ಕಂಬಸಾಲಿನಲ್ಲಿನ ಕಪ್‌ಕೇಕ್‌ಗಳ ಸಂಖ್ಯೆ: _____

ಗುಣಾಕಾರದ ಹೇಳಿಕೆ _____

ನಿಮ್ಮ ನೋಟ್ ಪುಸ್ತಕದಲ್ಲಿ, ಮುಂದೆ ನೀಡಿರುವ ಸಂಖ್ಯೆಗಳಷ್ಟು ಕಪ್‌ಕೇಕ್‌ಗಳನ್ನು ಅಡ್ಡಸಾಲು ಮತ್ತು ಕಂಬಸಾಲುಗಳಲ್ಲಿ ಜೋಡಿಸಬಹುದಾದ ವಿವಿಧ ವಿಧಾನಗಳನ್ನು ಕಂಡುಹಿಡಿಯಿರಿ.

36, 8, 12 ಮತ್ತು 24.

ದ್ವಿಗುಣಗೊಳಿಸುವ ಜಾದೂ

ಜಾದೂಗಾರ ಅನ್ವಿ ಒಂದು ದಿನ ಬಂದಳು,
ಗುಲಾಬೊ ಮನೆಗೆ, ಆಡಲು, ಸಿದ್ದಳಾದಳು,
ಅವಳ ಕೋಟ್‌ನಿಂದ, ಒಂದು ದಿವ್ಯವಾದ ಪ್ರದರ್ಶನ,

ಶಿಕ್ಷಕರಿಗೆ ಟಿಪ್ಪಣಿ: ಉತ್ತರವನ್ನು ವಿವಿಧ ರೀತಿಗಳಲ್ಲಿ ಕಂಡುಹಿಡಿಯಲು ಮಕ್ಕಳನ್ನು ಪ್ರೋತ್ಸಾಹಿಸಿ. ಮಕ್ಕಳು ಜಿಗಿತ ಎಣಿಕೆ, ಅಡ್ಡ ಸಾಲು ಮತ್ತು ಕಂಬ ಸಾಲುಗಳಲ್ಲಿನ ಎಣಿಕೆ ಮತ್ತು ಸಮ ಗುಂಪುಗಳಲ್ಲಿ ಯೋಚಿಸಬಹುದು. ಮಕ್ಕಳು ಗುಣಾಕಾರವನ್ನು ಪ್ರತಿನಿಧಿಸುವ ವಿವಿಧ ಜೋಡಣೆಗಳನ್ನು ಗಮನಿಸುವಂತೆ ಮಾಡುವುದು ಇಲ್ಲಿನ ಉದ್ದೇಶವಾಗಿದೆ.



@KTBS NOT TO BE REPUBLISHED

ಅವಳು 23 ಹೂಗಳನ್ನು ಹೊರತೆಗೆದಳು, ಪ್ರಕರ ಹಾಗೂ ಹೊಳೆಯುವ ಹೂಗಳು!



ಅವಳು ನಸುನಗುತ್ತಾ ಹೇಳಿದಳು, "ಈಗ ಗಮನಿಸಿ ಮತ್ತು ನೋಡಿ, ಎಷ್ಟು ಹೂಗಳಿರುತ್ತವೆ"?



ಈಗ ಎಷ್ಟು ಹೂಗಳಿವೆ? _____



What magic did Anvi do?
ಅನ್ವಿ ಮಾಡಿದ ಜಾದೂ ಏನು?

ಜಾದೂಗಿಂತ ಮುಂಚಿನ ಹೂಗಳು	23	10	51	95	150	199	425	500			
ಜಾದೂ ನಂತರದ ಹೂಗಳು	46								222	410	500

a) 32 ರ ಎರಡರಷ್ಟು = _____ b) 14 ರ ಎರಡರಷ್ಟು = _____

c) 26 ರ ಎರಡರಷ್ಟು = _____ d) 17 ರ ಎರಡರಷ್ಟು = _____

e) 39 ರ ಎರಡರಷ್ಟು = _____ f) 45 ರ ಎರಡರಷ್ಟು = _____

1. ಮುಂದಿನ ಸಂಖ್ಯೆಗಳನ್ನು ದ್ವಿಗುಣಗೊಳಿಸಿದಾಗ ಬರುವ ಸಂಖ್ಯೆಯ ಬಿಡಿ ಸ್ಥಾನದ ಅಂಕಿಯನ್ನು ಊಹಿಸಿ.
   ಕೊಟ್ಟಿರುವ ಸ್ಥಳದಲ್ಲಿ ಬಿಡಿ ಸ್ಥಾನದ ಅಂಕಿಯನ್ನು ಬರೆಯಿರಿ.
   a) 28 ____ b) 56 ____ c) 45 ____ d)17 ____

2. ದ್ವಿಗುಣಗೊಳಿಸಿದಾಗ, ಬಿಡಿ ಸ್ಥಾನದಲ್ಲಿ ಮುಂದಿನ ಅಂಕಿಗಳನ್ನು ನೀಡುವ ಸಂಖ್ಯೆಗಳಿಗೆ ಉದಾಹರಣೆಗಳನ್ನು ಬರೆಯಿರಿ.
   a) 0 _____ b) 2 _____
   c) 4 _____ d) 6 _____
   e) 8 _____


ದ್ವಿಗುಣಗೊಳಿಸಿದ ನಂತರ ಬಿಡಿ ಸ್ಥಾನದಲ್ಲಿ 3, 5, 7, 9 ನ್ನು ಪಡೆಯಬಹುದೇ?

ದ್ವಿಗುಣಗೊಳಿಸಿದ ನಂತರ ಪಡೆಯುವ ಸಂಖ್ಯೆಗಳ ಬಗ್ಗೆ ನಾವು ಏನನ್ನು ಗಮನಿಸಿದೆವು? ಸಮ ಸಂಖ್ಯೆ ಅಥವಾ ಬೆಸ ಸಂಖ್ಯೆ?

ಶಿಕ್ಷಕರಿಗೆ ಟಿಪ್ಪಣಿ: ವಿಶೇಷವಾಗಿ ದೊಡ್ಡ ಸಂಖ್ಯೆಗಳನ್ನು ದ್ವಿಗುಣಗೊಳಿಸಲು ಅಥವಾ ಅರ್ಧ ಮಾಡಲು, ಡೀನ್ ಬ್ಲಾಕ್‌ಗಳು ಅಥವಾ ಗಣಿತ ಮೇಳದ ಕಿಟ್‌ನ್ನು ಉಪಯೋಗಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಗುಣಾಕಾರ ಮತ್ತು ಭಾಗಾಕಾರವನ್ನು ಕಲಿಸುವಾಗ, ದ್ವಿಗುಣಗೊಳಿಸುವುದು ಮತ್ತು ಅರ್ಧ ಮಾಡುವುದು ಉಪಯುಕ್ತ ಮಾರ್ಗೋಪಾಯಗಳು. ಶಿಕ್ಷಕರು, ಬೇರೆ ಬೇರೆ ಅಂಕಿಗಳು ಬಿಡಿ ಸ್ಥಾನದಲ್ಲಿ ಬರುವಂತೆ ಕ್ರಮಬದ್ಧವಾಗಿ ಸಂಖ್ಯೆಗಳನ್ನು ಬದಲಾಯಿಸಬಹುದು.

NOT TO BE REPUBLISHED @KTBS

ಅಡ್ಡ ಸಾಲಿನ ಸಂಖ್ಯೆಯನ್ನು ಕಂಬ ಸಾಲಿನ ಸಂಖ್ಯೆಯಿಂದ ಗುಣಿಸಿ ಚಾರ್ಟ್‌ನಲ್ಲಿನ ಪ್ರತಿಯೊಂದು ಚೌಕವನ್ನು ಭರ್ತಿಮಾಡಿ.



@KTBS NOT TO BE REPUBLISHED

ಹಸಿರು ಬಣ್ಣದಿಂದ ಶೇಡ್ ಮಾಡಿರುವ ಸಂಖ್ಯೆಗಳ ಬಗ್ಗೆ ಏನನ್ನು ಗಮನಿಸಿದಿರಿ? ಇದು ಏಕೆ ಆಗುತ್ತಿದೆ?

1. ಕೋಷ್ಟಕದಲ್ಲಿ ನೀವು ಗಮನಿಸಿದ ವಿನ್ಯಾಸವನ್ನು ಹಂಚಿಕೊಳ್ಳಿ.
2. 7 ನೇ ಅಡ್ಡ ಸಾಲಿನಲ್ಲಿರುವ ಸಂಖ್ಯೆಗಳು 7 ನೇ ಕಂಬಸಾಲಿನಲ್ಲಿರುವ ಸಂಖ್ಯೆಗಳು ಒಂದೇ ಆಗಿವೆಯೇ? ಸಾಮಾನ್ಯವಾಗಿ, ಒಂದು ದತ್ತ ಅಡ್ಡಸಾಲಿನಲ್ಲಿನ ಸಂಖ್ಯೆಗಳು, ಅದಕ್ಕೆ ಸಂಬಂಧಿಸಿದ ಕಂಬ ಸಾಲಿನ ಸಂಖ್ಯೆಗಳು ಒಂದೇ ಆಗಿರುತ್ತವೆಯೇ? ಇದು ಏಕೆ ಆಗುತ್ತದೆ?
3. ಎಲ್ಲಾ ಉತ್ತರಗಳು (ಗುಣಲಬ್ಧಗಳು) ಸಮ ಸಂಖ್ಯೆಗಳಾಗಿರುವ ಯಾವುದಾದರೂ ಒಂದು ಅಡ್ಡಸಾಲು ಇದೆಯೇ? ಈ ಗುಣ ಯಾವ ಅಡ್ಡಸಾಲುಗಳಲ್ಲಿವೆ?
4. ಬೆಸ ಸಂಖ್ಯೆಗಳನ್ನೇ ಗುಣಲಬ್ಧವಾಗಿ ಹೊಂದಿರುವ ಯಾವುದಾದರೂ ಅಡ್ಡಸಾಲು ಇದೆಯೇ?
5. ಸಮ ಮತ್ತು ಬೆಸ ಸಂಖ್ಯೆಗಳೆರಡೂ ಇರುವ ಯಾವುದಾದರೂ ಅಡ್ಡಸಾಲುಗಳಿವೆಯೇ? ನೀವು ಏನನ್ನು ಗಮನಿಸಿದಿರಿ? ಇದು ಏಕೆ ಹೀಗೆ?
6. ಕೋಷ್ಟಕದಲ್ಲಿ ಸಮ ಅಥವಾ ಬೆಸ ಸಂಖ್ಯೆಗಳು – ಯಾವುವು ಹೆಚ್ಚಾಗಿವೆ? ನಿಮಗೆ ಹೇಗೆ ತಿಳಿಯಿತು?
7. ಮುಂದಿನ ಸಂಖ್ಯೆಗಳ ಸಾಮಾನ್ಯ ಗುಣಕಗಳಿಗೆ ಬಣ್ಣ ಹಾಕಿ. ಪ್ರತಿಯೊಂದಕ್ಕೂ ಬೇರೆ ಬೇರೆ ಬಣ್ಣವನ್ನು ಉಪಯೋಗಿಸಿ.

a) 2 ಮತ್ತು 3 | b) 4 ಮತ್ತು 8 | c) 7 ಮತ್ತು 9

ಪ್ರತಿ ಸಂದರ್ಭದಲ್ಲೂ ಸಾಮಾನ್ಯ ಗುಣಕಗಳಾಗಿರುವ ಸಂಖ್ಯೆಗಳ ಬಗ್ಗೆ ನಿಮ್ಮ ವೀಕ್ಷಣೆಗಳನ್ನು ಹಂಚಿಕೊಳ್ಳಿ.

8. 5 ನೇ ಅಡ್ಡಸಾಲಿನಲ್ಲಿ ಗುಣಲಬ್ಧಗಳ ಬಿಡಿ ಸ್ಥಾನದಲ್ಲಿರುವ ಅಂಕಿಗಳ ವಿನ್ಯಾಸವನ್ನು ಗಮನಿಸಿ. ಬೇರೆ ಅಡ್ಡಸಾಲುಗಳಲ್ಲಿಯೂ ಗುಣಲಬ್ಧಗಳ ಬಿಡಿ ಸ್ಥಾನದ ಅಂಕಿಯನ್ನು ಗಮನಿಸಿ. ಯಾವ ವಿನ್ಯಾಸಗಳನ್ನು ನೀವು ಗುರುತಿಸಿದಿರಿ?

9. ಚಾರ್ಟ್‌ನ 8ನೇ ಅಡ್ಡಸಾಲು ಇಲ್ಲಿದೆ: 8, 16, 24, 32, 40, 48, 56, 64, 72, 80.

ಗುಣಲಬ್ಧಗಳ ಬಿಡಿ ಸ್ಥಾನದಲ್ಲಿರುವ ಅಂಕಿಗಳು: 8, 6, 4, 2, 0, 8, 6, 4, 5, 0

ಇಲ್ಲಿ ಪುನರಾವರ್ತಿತವಾಗಿರುವ ವಿನ್ಯಾಸವನ್ನು ನೀವು ನೋಡಿದಿರಾ?

ಮುಂದಿನ ಗುಣಲಬ್ಧಗಳಲ್ಲಿನ ಬಿಡಿ ಸ್ಥಾನದ ಅಂಕಿಯನ್ನು ಊಹಿಸಿ. ಗುಣಿಸುವುದರಿಂದ ನಿಮ್ಮ ಉತ್ತರವನ್ನು ಪರಿಶೀಲಿಸಿ. ಕೊಟ್ಟಿರುವ ಸ್ಥಳದಲ್ಲಿ ಅಂಕಿಯನ್ನು ಬರೆಯಿರಿ.

11 × 8 _____ 12 × 8 _____ 13 × 8 _____

10. ಚಾರ್ಟ್‌ನಲ್ಲಿನ 8 ನೇ ಅಡ್ಡಸಾಲಿನಲ್ಲಿ, ಬಿಡಿ ಸ್ಥಾನದ ಅಂಕಿ 1 ಇರುವ ಯಾವುದೇ ಸಂಖ್ಯೆ ಇಲ್ಲ. ಬೇರೆ ಯಾವ ಅಂಕೆಗಳು ಬಿಡಿ ಸ್ಥಾನದಲ್ಲಿ ಬಂದಿಲ್ಲ?

11. ಬಿಡಿ ಸ್ಥಾನದಲ್ಲಿನ ಅಂಕಿಗಳು 0 ಯಿಂದ 9 ರವರೆಗೆ ಇರುವ ಒಂದು ಅಡ್ಡಸಾಲು ಇದೆಯೆ? ಈ ಗುಣ ಯಾವ ಅಡ್ಡಸಾಲುಗಳಲ್ಲಿವೆ?

12. 8 ನೇ ಅಡ್ಡಸಾಲಿನಲ್ಲಿ, 0 ಬಿಡಿ ಸ್ಥಾನದಲ್ಲಿ ಎರಡು ಬಾರಿ ಬಂದಿರುವುದನ್ನು ಕಾಣಬಹುದು.

( ) × 8, ಬಿಡಿಸ್ಥಾನದಲ್ಲಿ 0 ಬರುವುದು


ಈ ಬಾಕ್ಸ್‌ನಲ್ಲಿ ಯಾವ ಸಂಖ್ಯೆಗಳಿರಬಹುದು? ಅಂತಹ ಸಂಖ್ಯೆಗಳ 5 ಉದಾಹರಣೆಗಳನ್ನು ನೀಡಿ.

13. ಬಿಡಿ ಸ್ಥಾನದಲ್ಲಿ ಒಂದು ಬಾರಿ ಮಾತ್ರ 0 ಬಂದಿರುವ ಯಾವುದಾದರೂ ಅಡ್ಡಸಾಲು ಇದೆಯೇ? ಯಾವ ಅಡ್ಡಸಾಲುಗಳಲ್ಲಿ ಈ ಗುಣವಿದೆ?

14. ಪ್ರಶ್ನೆ 11 ಮತ್ತು 13ರ ಉತ್ತರಗಳಲ್ಲಿ ಏನನ್ನು ಗಮನಿಸಿದಿರಿ? ತರಗತಿಯಲ್ಲಿ ಹಂಚಿಕೊಳ್ಳಿ.

10ರ ಗುಣಕಗಳು

1. ತ್ರಿಚಕ್ರ ಬೈಸಿಕಲ್‌ನಲ್ಲಿರುವ ಚಕ್ರಗಳ ಸಂಖ್ಯೆಯನ್ನು ಎಣಿಸೋಣ.



ಪ್ರತಿಯೊಂದರಲ್ಲಿ 3 ಚಕ್ರಗಳಿರುವ 10 ತ್ರಿಚಕ್ರ ಬೈಸಿಕಲ್‌ಗಳಲ್ಲಿರುವ ಚಕ್ರಗಳ ಸಂಖ್ಯೆ 10 × 3 ಚಕ್ರಗಳು = _____ ಚಕ್ರಗಳು

ಪ್ರತಿಯೊಂದರಲ್ಲಿ 3 ಚಕ್ರಗಳಿರುವ ಇನ್ನೂ 10 ಹೆಚ್ಚು ತ್ರಿಚಕ್ರ ಬೈಸಿಕಲ್‌ಗಳಲ್ಲಿರುವ ಚಕ್ರಗಳ ಸಂಖ್ಯೆ 20 × 3 ಚಕ್ರಗಳು = _____ ಚಕ್ರಗಳು

© KTBS NOT TO BE REPUBLISHED

ಪ್ರತಿಯೊಂದರಲ್ಲಿ 3 ಚಕ್ರಗಳಿರುವ 20 ತ್ರಿಚಕ್ರ ಬೈಸಿಕಲ್‌ಗಳಲ್ಲಿರುವ ಚಕ್ರಗಳ ಸಂಖ್ಯೆ 20 × 3 ಚಕ್ರಗಳು = _____ + _____ = _____ ಚಕ್ರಗಳು

10 × 3 = _____
20 × 3 = _____

2. ಕಾರ್‌ಗಳಲ್ಲಿರುವ ಚಕ್ರಗಳ ಸಂಖ್ಯೆಯನ್ನು ಎಣಿಸೋಣ.



ಪ್ರತಿಯೊಂದರಲ್ಲಿ 4 ಚಕ್ರಗಳಿರುವ 10 ಕಾರ್‌ಗಳಲ್ಲಿನ ಚಕ್ರಗಳ ಸಂಖ್ಯೆ 10 × 4 ಚಕ್ರಗಳು = ಚಕ್ರಗಳು.

ಪ್ರತಿಯೊಂದರಲ್ಲಿ 4 ಚಕ್ರಗಳಿರುವ 30 ಕಾರ್‌ಗಳಲ್ಲಿನ ಚಕ್ರಗಳ ಸಂಖ್ಯೆ 30 × 4 ಚಕ್ರಗಳು = _____ + _____ + _____ = _____ ಚಕ್ರಗಳು.

10 × 4 = _____
30 × 4 = _____

ಗುಂಪುಗಳ ಸಂಖ್ಯೆ 10 ರ ಗುಣಕವಾಗಿದ್ದಾಗ ಏನಾಗುತ್ತದೆ?

ಅದೇ ರೀತಿ ಮುಂದಿನವುಗಳನ್ನು ಬಿಡಿಸಿ. ಉತ್ತರಗಳನ್ನು ಹೇಗೆ ಕಂಡುಕೊಂಡಿರಿ ಎಂಬುದನ್ನು ಹಂಚಿಕೊಳ್ಳಿ.

a) 10 × 6 = _____
b) 40 × 6 = _____

c) 10 × 8 = _____
d) 60 × 8 = _____

e) 6 × 8 = _____
f) 60 × 8 = _____

g) 4 × 6 = _____
h) 40 × 8 = _____


© KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: ಮೇಲಿನ ಗುಣಲಬ್ಧಗಳಲ್ಲಿನ ಸಂಬಂಧವನ್ನು ಗುರ್ತಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. 6 × 8 ಮತ್ತು 60 × 8 ಇವುಗಳ ಗುಣಲಬ್ಧಗಳಲ್ಲಿನ ಸಂಬಂಧವನ್ನು ಹತ್ತು–ಬಾರಿ ಎಂದು ಸ್ಪಷ್ಟಪಡಿಸುವುದು ಉತ್ತಮ ಕ್ರಮವಾಗಿದೆ. 10 × 4 ಮತ್ತು 30 × 4ರ ನಡುವಿನ ಸಂಬಂಧವನ್ನು ವಿವರಿಸಲು ಮೂರು–ಬಾರಿ ಎಂಬುದು ಒಂದು ಕ್ರಮವಾಗಬಹುದು.



10 ಗಳನ್ನು ಉಪಯೋಗಿಸಿ ಗುಣಿಸುವುದು

1. 4 ರ ಬಾಕ್ಸ್‌ಗಳಲ್ಲಿ ರಾಧ ಕಪ್‌ಕೇಕ್‌ಗಳನ್ನು ಪ್ಯಾಕ್ ಮಾಡುತ್ತಿದ್ದಾಳೆ. ಅವಳು 18 ಬಾಕ್ಸ್‌ಗಳನ್ನು ಪ್ಯಾಕ್ ಮಾಡಿದ್ದಾಳೆ. ಪ್ಯಾಕ್ ಮಾಡಿರುವ ಬಾಕ್ಸ್‌ಗಳಲ್ಲಿ ಎಷ್ಟು ಕಪ್‌ಕೇಕ್‌ಗಳಿವೆ?



ಪ್ರತಿಯೊಂದರಲ್ಲಿ 4 ಕಪ್‌ಕೇಕ್‌ಗಳಿರುವ 18 ಬಾಕ್ಸ್‌ಗಳಿವೆ.
ಹಾಗಾಗಿ, ಅಲ್ಲಿ 18 × 4 ಕಪ್‌ಕೇಕ್‌ಗಳಿವೆ.

ಪ್ರತಿಯೊಂದರಲ್ಲಿ 4 ಕಪ್‌ಕೇಕ್‌ಗಳಿರುವ 10 ಬಾಕ್ಸ್‌ಗಳಲ್ಲಿ
10 × 4 ಕಪ್‌ಕೇಕ್‌ಗಳು = _____ ಕಪ್‌ಕೇಕ್‌ಗಳಿರುತ್ತವೆ.


ಪ್ರತಿಯೊಂದರಲ್ಲಿ 4 ಕಪ್‌ಕೇಕ್‌ಗಳಿರುವಂತೆ 8 ಬಾಕ್ಸ್‌ಗಳಲ್ಲಿ
8 × 4 ಕಪ್‌ಕೇಕ್‌ಗಳು = _____ ಕಪ್‌ಕೇಕ್‌ಗಳಿರುತ್ತವೆ.


ಪ್ರತಿಯೊಂದರಲ್ಲಿ 4 ಕಪ್‌ಕೇಕ್‌ಗಳಿರುವ 18 ಬಾಕ್ಸ್‌ಗಳಲ್ಲಿ
_____ + _____ ಕಪ್‌ಕೇಕ್‌ಗಳು = _____ ಕಪ್‌ಕೇಕ್‌ಗಳಿರುತ್ತವೆ.



×	4
10	10 × 4 = 40
8	8 × 4 = 32
	72

2. ಒಂದು ಎತ್ತಿನ ಬಂಡಿಯನ್ನು ಮಾಡಲು 8 ಬಿದಿರು ಬೊಂಬುಗಳು ಬೇಕಾಗಿವೆ. 23 ಬಂಡಿಗಳನ್ನು ಮಾಡಲು ಎಷ್ಟು ಬಿದಿರು ಬೊಂಬುಗಳು ಬೇಕಾಗುತ್ತವೆ?





ಒಂದು ಗಾಡಿಯನ್ನು ನಿರ್ಮಿಸಲು 8 ಬೊಂಬುಗಳು ಬೇಕಾಗುತ್ತವೆ. 23 ಗಾಡಿಗಳಿಗೆ 23 × 8 ಬೊಂಬುಗಳು ಬೇಕಾಗುತ್ತವೆ.

ಪ್ರತಿಯೊಂದರಲ್ಲಿ 8 ಬೊಂಬುಗಳು ಇರುವ 20 ಗಾಡಿಗಳಲ್ಲಿ
20 × 8 ಬೊಂಬುಗಳು = _____ ಬೊಂಬುಗಳು.

ಪ್ರತಿಯೊಂದರಲ್ಲಿ 8 ಬೊಂಬುಗಳು ಇರುವ 3 ಗಾಡಿಗಳಲ್ಲಿ
3 × 8 ಬೊಂಬುಗಳು = _____ ಬೊಂಬುಗಳು.

×	8
20	20 × 8 = 160
3	3 × 8 = 24
	184


© KTBS NOT TO BE REPUBLISHED

ನಾವು ಪರಿಹರಿಸೋಣ



1. 25 ಬಾತುಕೋಳಿ ಮತ್ತು 12 ಕುರಿಗಳು ಒಂದು ಕೊಳದ ಸುತ್ತ ನೆರೆದಿವೆ. ಚಿಪ್ಪಿ ಹಲ್ಲಿ ಬಹಳಷ್ಟು ಕಾಲುಗಳನ್ನು ನೋಡುತ್ತದೆ.

   ಅದು ಎಷ್ಟು ಕಾಲುಗಳನ್ನು ನೋಡುತ್ತದೆ?



2. ಸಭಾಂಗಣವೊಂದರಲ್ಲಿ, ಪ್ರತಿ ಅಡ್ಡಸಾಲಿನಲ್ಲಿ 8 ಮಕ್ಕಳು ಕುಳಿತಿದ್ದಾರೆ. ಶಾಲಾ ಸಭಾಂಗಣದಲ್ಲಿ ಅಂತಹ 15 ಅಡ್ಡಸಾಲುಗಳಿವೆ. ಸಭಾಂಗಣದಲ್ಲಿ ಎಷ್ಟು ಮಕ್ಕಳಿದ್ದಾರೆ?

3. ಒಂದು ಪುಸ್ತಕದ ಅಂಗಡಿಯಲ್ಲಿ, ಪ್ರತಿ ರಾಶಿಯಲ್ಲಿ 9 ಪುಸ್ತಕಗಳನ್ನು ಇಡಲಾಗಿದೆ. ಅಂತಹ 14 ರಾಶಿಗಳಿವೆ. ಅಂಗಡಿಯಲ್ಲಿ ಎಷ್ಟು ಪುಸ್ತಕಗಳಿವೆ?

4. ಚಿತ್ರದಲ್ಲಿ ತೋರಿಸಿರುವಂತೆ ಸೂರ್ಯ, ಒಂದು ಪ್ಯಾಚ್‌ವರ್ಕ್ (ತೇಪೆ ಹಾಕುವುದು)ನ್ನು ಎರಡು ಬಣ್ಣಗಳ ಮಣಿಗಳಿಂದ ಮಾಡುತ್ತಿದ್ದಾನೆ. ಅವನು ಎಷ್ಟು ಮಣಿಗಳನ್ನು ಉಪಯೋಗಿಸಿದ್ದಾನೆ? ಈ ಪ್ಯಾಚ್ ವರ್ಕ್ ಮಾಡಲು ಬಂಗಾರ ಬಣ್ಣದ ಮತ್ತು ಬಿಳಿಯ ಬಣ್ಣದ ಎಷ್ಟು ಮಣಿಗಳನ್ನು ಉಪಯೋಗಿಸಿದ್ದಾನೆ?




5. ಮುಂದಿನ ಪ್ರತಿ ಗುಣಾಕಾರದ ಸಮಸ್ಯೆಗೆ, ಮೇಲಿನಂತೆ ನಿಮ್ಮದೇ ಕಥೆಗಳನ್ನು ರೂಪಿಸಿ. ನಂತರ ಗುಣಲಬ್ಧವನ್ನು ಕಂಡುಹಿಡಿಯಿರಿ.

   a) 34 × 3 b) 75 × 5 c) 46 × 6 d) 50 × 9

© KTBS NOT TO BE REPUBLISHED

ಭಾಗಾಕಾರ

1. ಒಂದು ಕಾರ್ಖಾನೆಯು ತಾನು ಉತ್ಪಾದಿಸುವ ಸಣ್ಣ ಟೆಂಪೊಗಳಿಗೆ 58 ಚಕ್ರಗಳಿಗೆ ಆದೇಶವನ್ನು ನೀಡಿದೆ. ಪ್ರತಿ ಟೆಂಪೂ 3 ಚಕ್ರಗಳನ್ನು ಹೊಂದಿದೆ.



ಚಕ್ರಗಳನ್ನು ಅವರು ಎಷ್ಟು ಟೆಂಪೊಗಳಿಗೆ ಹೊಂದಿಸಬಹುದು?

ಪ್ರತಿ ಹಂತದಲ್ಲಿನ ನಿಮ್ಮ ಆಲೋಚನೆಯನ್ನು ಚರ್ಚಿಸಿ.

ಟೆಂಪೊಗಳ ಸಂಖ್ಯೆ 58 ÷ 3

10 ಟೆಂಪೊಗಳಿಗೆ 30 ಚಕ್ರಗಳ ಅಗತ್ಯವಿದೆ. _____ ಚಕ್ರಗಳು ಉಳಿದಿವೆ.

15 ಚಕ್ರಗಳು _____ ಟೆಂಪೊಗಳಿಗೆ ಅಗತ್ಯವಾಗಿವೆ. _____ ಚಕ್ರಗಳು ಉಳಿದಿವೆ.

9 ಚಕ್ರಗಳು _____ ಟೆಂಪೊಗಳಿಗೆ ಅಗತ್ಯವಾಗಿವೆ. _____ ಚಕ್ರಗಳು ಉಳಿದಿವೆ.

_____ ಚಕ್ರಗಳು. _____ ಟೆಂಪೊಗಳಿಗೆ ಅಗತ್ಯವಾಗಿವೆ. _____ ಚಕ್ರಗಳು ಉಳಿದಿವೆ.

```
3) 58 ( 10+5+3+1
  -30
   28
  -15
   13
   -9
    4
   -3
    1
```

ಮತ್ತೊಂದು ಟೆಂಪೊ ಮಾಡಬಹುದೇ?

58 ಚಕ್ರಗಳನ್ನು ಉಪಯೋಗಿಸಿಕೊಂಡು, ಒಟ್ಟಾರೆ ಎಷ್ಟು ಟೆಂಪೊಗಳನ್ನು ಕಾರ್ಖಾನೆಯು ಉತ್ಪಾದಿಸಬಹುದು? _____

58 ಚಕ್ರಗಳೊಂದಿಗೆ, ನಾವು 19 ಟೆಂಪೊಗಳನ್ನು ಮಾಡಬಹುದು. 1 ಚಕ್ರ ಉಳಿಯುತ್ತದೆ.

©KTBS NOT TO BE REPUBLISHED

2. ಒಂದು ಡೈರಿ ಫಾರ್ಮ್‌ನಲ್ಲಿ ಅನೇಕ ಹಸುಗಳಿವೆ. ಚಿಪ್ಪಿ ಹಲ್ಲಿ 88 ಕಾಲುಗಳನ್ನು ನೋಡಿ ಚಕಿತಗೊಂಡಿತು.



ಫಾರ್ಮ್‌ನಲ್ಲಿ ಎಷ್ಟು ಹಸುಗಳಿವೆ? ನಿಮ್ಮ ಆಲೋಚನೆಯನ್ನು ತೋರಿಸಲು, ಮೇಲಿನಂತೆ ಸೂಕ್ತವಾದ ವಾಕ್ಯಗಳನ್ನು ಬರೆಯಿರಿ.

ಒಂದು ಹಸುವಿನಲ್ಲಿರುವ ಕಾಲುಗಳ ಸಂಖ್ಯೆ: _____

ಹಸುಗಳ ಸಂಖ್ಯೆ, 88 ÷ _____

ನಿಮ್ಮ ಕಾರ್ಯವನ್ನು ಮುಂದಿನ ಕೋಷ್ಟಕ ಉಪಯೋಗಿಸಿ ತೋರಿಸಿ.

ಸುಳುಹು: 10ರ ಗುಂಪುಗಳನ್ನು ಹೊರತೆಗೆಯುವುದು ಸುಲಭ.

ಶಿಕ್ಷಕರಿಗೆ ಟಿಪ್ಪಣಿ: ಇಲ್ಲಿ ಮಾಡಿರುವ ಭಾಗಾಕಾರವು ಭಾಗಶಃ ಭಾಗಲಬ್ಧವಿರುವ ವಿಧಾನವಾಗಿದೆ. ಇದನ್ನು 10 ರ, 5 ರ ಅಥವಾ ಯಾವುದೇ ಸುಲಭವಾಗಿ ಮಕ್ಕಳಿಗೆ ಲಭ್ಯವಿರುವ ಸಣ್ಣ ಗುಂಪುಗಳನ್ನು ತೆಗೆದುಕೊಂಡು ಮಾಡಲಾಗುತ್ತದೆ. ಸಮಸ್ಯೆಗಳನ್ನು ಪರಿಹರಿಸಲು ಮಕ್ಕಳು ತಮ್ಮ ಆಯ್ಕೆಯ ಯಾವುದೇ ಗುಣಕಗಳನ್ನು ತೆಗೆದುಕೊಳ್ಳಬಹುದು. ಕ್ರಮೇಣ 10ಗಳು ಮತ್ತು 10ರ ಗುಣಕಗಳನ್ನು ತೆಗೆದುಕೊಳ್ಳುವುದಕ್ಕೆ ಮಕ್ಕಳನ್ನು ಪ್ರೋತ್ಸಾಹಿಸಿ.


ಕಾಲುಗಳ ಸಂಖ್ಯೆ	ಹಸುಗಳ ಸಂಖ್ಯೆ	ಉಳಿದಿರುವ ಕಾಲುಗಳ ಸಂಖ್ಯೆ
		88
40	10	48
_____	_____	_____
_____	_____	_____

4) 88 (10+_
– 40
48
–

ಒಟ್ಟು ಹಸುಗಳ ಸಂಖ್ಯೆ = _____

ನಾವು ಪರಿಹರಿಸೋಣ

1. ಒಂದು ದೊಡ್ಡ ಮೀನುಗಾರದಲ್ಲಿ (ಅಕ್ವೇರಿಯಂ) ಜಾಲಿ ಮೀನು ಅಕ್ಟೊಪಸ್‌ಗಳ 72 ಕಾಲುಗಳನ್ನು ನೋಡಿತು. ಮೀನುಗಾರದಲ್ಲಿ ಎಷ್ಟು ಅಕ್ಟೊಪಸ್‌ಗಳಿವೆ?



2. ಕ್ರೀಡಾ ಅಂಗಡಿಯೊಂದರಲ್ಲಿ, ಒಂದು ದೊಡ್ಡ ಬಾಕ್ಸ್‌ನಲ್ಲಿ 4 ಶಟಲ್‌ಕಾಕ್‌ಗಳನ್ನು ಜೋಡಿಸಿದೆ. ಅವರಲ್ಲಿ 50 ಶಟಲ್‌ಕಾಕ್‌ಗಳಿವೆ. ಅವುಗಳೆಲ್ಲವನ್ನು ಪ್ಯಾಕ್ ಮಾಡಲು ಎಷ್ಟು ಬಾಕ್ಸ್‌ಗಳ ಅಗತ್ಯವಿದೆ? ಬಾಕ್ಸ್‌ಗಳಲ್ಲಿ ಎಲ್ಲಾ ಶಟಲ್‌ಕಾಕ್‌ಗಳನ್ನು ತುಂಬಬಹುದೇ? ಎಷ್ಟು ಉಳಿಯುತ್ತವೆ?

3. ಮುಂಬರುವ ಹಬ್ಬದ ಸಂದರ್ಭಕ್ಕಾಗಿ, ರಾಕುಲ್ ಚಿಕ್ಕಮ್ಮ ತನ್ನ ತೋಟದ ಒಂದು ಭಾಗವನ್ನು ಹೂ ಗಿಡಗಳನ್ನು ನೆಡಲು ಉಪಯೋಗಿಸುತ್ತಾರೆ. ಅವರು 75 ಗುಲಾಬಿ ಸಸಿಗಳನ್ನು ನೆಟ್ಟಿದ್ದಾರೆ. ಪ್ರತಿ ಅಡ್ಡಸಾಲಿನಲ್ಲಿ 5 ಸಸಿಗಳಿವೆ. ಅವರು ಎಷ್ಟು ಅಡ್ಡಸಾಲುಗಳಲ್ಲಿ ಸಸಿಗಳನ್ನು ನೆಟ್ಟಿದ್ದಾರೆ?

4. ಮುಂದಿನ ಸಮಸ್ಯೆಗಳಿಗೆ ಕಥೆಗಳನ್ನು ಮಾಡಿ ಮತ್ತು ಪರಿಹರಿಸಿ.

a) 70 ÷ 5

b) 84 ÷ 7


c) 69 ÷ 3

d) 93 ÷ 6

©KTBS NOT TO BE REPUBLISHED

100ರ ಗುಣಕಗಳು

ಪ್ರತಿ ಬೈಕ್‌ನಲ್ಲಿ 2 ಜನರು



ಪ್ರತಿ ಬೈಕ್‌ನಲ್ಲಿ 2 ಜನರಂತೆ 100 ಬೈಕ್‌ಗಳಲ್ಲಿ 100 × 2 ಜನರು = _____ ಜನರಿರುತ್ತಾರೆ.


ಪ್ರತಿ ಬೈಕ್‌ನಲ್ಲಿ 2 ಜನರಂತೆ 200 ಬೈಕ್‌ಗಳಲ್ಲಿ _____ ಜನರಿರುತ್ತಾರೆ.

ನೀವು ಹೇಗೆ ಕಂಡುಕೊಂಡಿರಿ?

ಪ್ರತಿಯೊಂದರಲ್ಲಿ 4 ಜನರಂತೆ, 100 ಕಾರ್‌ಗಳಲ್ಲಿ 100 × 4 ಜನರು = _____ ಜನರಿರುತ್ತಾರೆ.

ಪ್ರತಿಯೊಂದರಲ್ಲಿ 4 ಜನರಂತೆ, 500 ಕಾರ್‌ಗಳಲ್ಲಿ _____ ಜನರಿರುತ್ತಾರೆ.

ನೀವು ಹೇಗೆ ಕಂಡುಕೊಂಡಿರಿ?



ಪ್ರತಿ ಕಾರ್‌ನಲ್ಲಿ 4 ಜನರು

© KSTBS NOT TO BE REPUBLISHED

500 × 4 = _____
100 × 4 = _____

5 × 4 = _____
50 × 4 = _____

100ರ ಗುಣಕಗಳಿಂದ ಗುಣಿಸುವುದರ ಬಗ್ಗೆ ನೀವು ಏನನ್ನು ಗಮನಿಸಿದಿರಿ?

ಶಿಕ್ಷಕರಿಗೆ ಟಿಪ್ಪಣಿ: ವಿಭಿನ್ನ ಕ್ರಮಗಳಲ್ಲಿ ಉತ್ತರಗಳನ್ನು ಕಂಡುಕೊಳ್ಳಲು ಮಕ್ಕಳನ್ನು ಪ್ರೋತ್ಸಾಹಿಸಿ. ಹಾಗೂ ಒಂದೇ ಗಾತ್ರದ ಗುಂಪಿನಲ್ಲಿನ, ಒಂದು ಅಂಕಿಯ ಗುಣಾಕಾರ ಮತ್ತು 100 ರ ಗುಣಕಗಳಲ್ಲಿನ ಸಂಬಂಧವನ್ನು ಗಮನಿಸಲು ಮಕ್ಕಳಿಗೆ ಸಹಾಯ ಮಾಡಿ. ಸಂಬಂಧವನ್ನು "ನೂರು–ಬಾರಿ" ಎಂದು ವ್ಯಕ್ತಪಡಿಸುವುದು ಸೂಕ್ತವಾಗಿದೆ.

ವಿನ್ಯಾಸವನ್ನು ಗಮನಿಸಿ ಮತ್ತು ಉತ್ತರಗಳನ್ನು ಪೂರ್ಣಗೊಳಿಸಿ.

$1 \times 3 =$	$2 \times 3 =$	$4 \times 3 =$
$10 \times 3 =$	$20 \times 3 =$	$40 \times 3 =$
$100 \times 3 =$	$200 \times 3 =$	$400 \times 3 =$

$2 \times 4 =$	$4 \times 2 =$	$8 \times 1 =$
$20 \times 4 =$	$40 \times 2 =$	$80 \times 1 =$
$200 \times 4 =$	$400 \times 2 =$	$800 \times 1 =$

$3 \times 4 =$	$3 \times 5 =$	$3 \times 9 =$
$30 \times 4 =$	$30 \times 5 =$	$30 \times 9 =$
$300 \times 4 =$	$300 \times 5 =$	$300 \times 9 =$

@KTBS NOT TO BE REPUBLISHED

ಇನ್ನೂ ಹೆಚ್ಚಿನ ಗುಣಾಕಾರ

1. ದೊಡ್ಡ ವಿದ್ಯುತ್ ಆಟೋರಿಕ್ಷಾಗಳು ಭಾರತದ ಸಣ್ಣ ಪಟ್ಟಣಗಳಲ್ಲಿ ಸಂಚರಿಸುತ್ತವೆ ಮತ್ತು 8 ಪ್ರಯಾಣಿಕರನ್ನು ಸಾಗಿಸುತ್ತವೆ. ಒಂದು ಸುತ್ತಿನಲ್ಲಿ ಅಂತಹ 125 ಆಟೋರಿಕ್ಷಾಗಳಲ್ಲಿ ಎಷ್ಟು ಜನರು ಸಂಚರಿಸಬಹುದು?



8	8	8	8	8	8	8	8	8	8
8	8	8	8	8	8	8	8	8	8
8	8	8	8	8	8	8	8	8	8
8	8	8	8	8	8	8	8	8	8
8	8	8	8	8	8	8	8	8	8
8	8	8	8	8	8	8	8	8	8
8	8	8	8	8	8	8	8	8	8
8	8	8	8	8	8	8	8	8	8
8	8	8	8	8	8	8	8	8	8
8	8	8	8	8	8	8	8	8	8

ಪ್ರತಿಯೊಂದರಲ್ಲಿ 8 ಪ್ರಯಾಣಿಕರಿರುವ 100 ಆಟೋರಿಕ್ಷಾಗಳು

8	8	8	8	8	8	8	8	8	8
8	8	8	8	8	8	8	8	8	8

ಪ್ರತಿಯೊಂದರಲ್ಲಿ 8 ಪ್ರಯಾಣಿಕರಿರುವ 20 ಆಟೋರಿಕ್ಷಾಗಳು

8	8	8	8	8

ಪ್ರತಿಯೊಂದರಲ್ಲಿ 8 ಪ್ರಯಾಣಿಕರಿರುವ 20 ಆಟೋರಿಕ್ಷಾಗಳು

ಒಟ್ಟು ಪ್ರಯಾಣಿಕರ ಸಂಖ್ಯೆ 125 × 8.

ಪ್ರತಿಯೊಂದರಲ್ಲಿ 8 ಪ್ರಯಾಣಿಕರಿರುವ 100 ಆಟೋರಿಕ್ಷಾಗಳಲ್ಲಿ 100 × 8 ಪ್ರಯಾಣಿಕರು = _____ ಪ್ರಯಾಣಿಕರು ಇರುತ್ತಾರೆ.

ಪ್ರತಿಯೊಂದರಲ್ಲಿ 8 ಪ್ರಯಾಣಿಕರಿರುವ 20 ಆಟೋರಿಕ್ಷಾಗಳಲ್ಲಿ 20 × 8 ಪ್ರಯಾಣಿಕರು = _____ ಪ್ರಯಾಣಿಕರು ಇರುತ್ತಾರೆ.

ಪ್ರತಿಯೊಂದರಲ್ಲಿ 8 ಪ್ರಯಾಣಿಕರಿರುವ 5 ಆಟೋರಿಕ್ಷಾಗಳಲ್ಲಿ 5 × 8 ಪ್ರಯಾಣಿಕರು = _____ ಪ್ರಯಾಣಿಕರು ಇರುತ್ತಾರೆ.

ಪ್ರತಿಯೊಂದರಲ್ಲಿ 8 ಪ್ರಯಾಣಿಕರಿರುವ 125 ಆಟೋರಿಕ್ಷಾಗಳಲ್ಲಿ _____ + _____ + _____ = _____ ಪ್ರಯಾಣಿಕರು ಇರುತ್ತಾರೆ.

×	8
100	100 × 8 = 800
20	20 × 8 = 160
5	5 × 8 = 40
	1000

© KTBS NOT TO BE REPUBLISHED

2. ಕಹ್ಲು ಮತ್ತು ರಬಿಯಾ ಕುಂಬಾರರಾಗಿದ್ದು, ರೈಲುಗಳಿಗಾಗಿ ಮಣ್ಣಿನ ಕುಡಿಕೆಗಳನ್ನು ಮಾಡುತ್ತಾರೆ.



ಅವರು 6 ಕುಡಿಕೆಗಳನ್ನು ಒಂದು ಬಾಕ್ಸ್‌ನಲ್ಲಿ ಪ್ಯಾಕ್ ಮಾಡುತ್ತಾರೆ ಮತ್ತು ಬಟವಾಡೆಗಾಗಿ 174 ಬಾಕ್ಸ್‌ಗಳನ್ನು ಮಾಡಿದ್ದಾರೆ.


ಅವರು ಎಷ್ಟು ಕುಡಿಕೆಗಳನ್ನು ಮಾಡಿದ್ದಾರೆ?

ಕುಡಿಕೆಗಳ ಒಟ್ಟು ಸಂಖ್ಯೆ _____

ಪ್ರತಿಯೊಂದರಲ್ಲಿ 6 ಕುಡಿಕೆಗಳಿರುವ 100 ಬಾಕ್ಸ್‌ಗಳು

ಪ್ರತಿಯೊಂದರಲ್ಲಿ 6 ಕುಡಿಕೆಗಳಿರುವ 70 ಬಾಕ್ಸ್‌ಗಳು

ಪ್ರತಿಯೊಂದರಲ್ಲಿ 6 ಕುಡಿಕೆಗಳಿರುವ 4 ಬಾಕ್ಸ್‌ಗಳು



174

×	6
100	100 × 6 = ____
70	70 × 6 = ____
4	4 ×6 = ____

NOT TO BE REPUBLISHED © KTBS

ನಾವು ಪರಿಹರಿಸೋಣ

1. BP ಬಾಲಕಿಯರ ಶಾಲೆಯು ತನ್ನ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲೆಯ ಮೊದಲ ದಿನ ಎರಡು ಪೆನ್ಸಿಲ್‌ಗಳನ್ನು ನೀಡಲು ನಿರ್ಧರಿಸಿತು.
   ಶಾಲೆಯು ಎಷ್ಟು ಪೆನ್ಸಿಲ್‌ಗಳನ್ನು ಖರೀದಿಸಬೇಕು?
2. 234 ಮಕ್ಕಳಿರುವ ಶಾಲೆಯೊಂದು ಶಾಲಾ ಮೇಳವನ್ನು ಆಯೋಜಿಸಲು ನಿರ್ಧರಿಸಿತು. ಮೇಳವನ್ನು ಆಯೋಜಿಸಲು ಪ್ರತಿ ಮಗು ₹ 5 ಕಾಣಿಕೆ ನೀಡುತ್ತದೆ.
   ಅವರು ಎಷ್ಟು ಹಣವನ್ನು ಸಂಗ್ರಹಿಸಿದರು?
3. ಮುಂದಿನ ಸಮಸ್ಯೆಗಳಿಗೆ ಕಥೆಗಳನ್ನು ಮಾಡಿ ಹಾಗೂ ಅವುಗಳನ್ನು ಪರಿಹರಿಸಿ.
   a) 439 × 4 b) 514 × 8 c) 356 × 5 d) 623 × 7

ಇನ್ನೂ ಹೆಚ್ಚಿನ ಭಾಗಾಕಾರ

ಕಾವೇರಿ ನದಿಯ ದಡದ ಉದ್ದಕ್ಕೂ ಕಾದಿರುವ 108 ಜನರನ್ನು 9 ಹಡಗುಗಳು ಸಾಗಿಸಬೇಕಾಗಿದೆ. ಪ್ರತಿ ಹಡಗು ಒಂದೇ ಸಂಖ್ಯೆಯ ಜನರನ್ನು ಸಾಗಿಸುತ್ತದೆ. ಪ್ರತಿ ಹಡಗಿನಲ್ಲಿ ಎಷ್ಟು ಜನರನ್ನು ಸಾಗಿಸಬೇಕು?

9 ಹಡಗುಗಳಲ್ಲಿ 108 ಜನರನ್ನು ಸಾಗಿಸಬಹುದು.

1 ಹಡಗಿನಲ್ಲಿ, ಸಾಗಿಸಬೇಕಾದ ಜನರ ಸಂಖ್ಯೆ 108 ÷ 9.

ಪ್ರತಿ ಹಡಗಿನಲ್ಲಿ 5 ಜನರು ಕುಳಿತು ಕೊಳ್ಳ–ಬಹುದಾದರೆ, 45 ಜನರನ್ನು 9 ಹಡಗುಗಳಲ್ಲಿ ಸಾಗಿಸಬಹುದು.

ಅವರೊಂದಿಗೆ ಇನ್ನೂ 5 ಜನರು ಪ್ರತಿ ಹಡಗಿನಲ್ಲಿ ಕುಳಿತರೆ (ಒಟ್ಟು 10) ಆಗ 90 ಜನರನ್ನು 9 ಹಡಗುಗಳಲ್ಲಿ ಸಾಗಿಸಬಹುದು.

ಉಳಿದ 18 ಜನರನ್ನು 9 ಹಡಗುಗಳಲ್ಲಿ ಹೊಂದಿಸಬೇಕಾಗಿದೆ. ಪ್ರತಿ ಹಡಗಿನಲ್ಲಿ ಇನ್ನೂ 2 ಜನರು ಕುಳಿತುಕೊಳ್ಳಬೇಕಾಗುತ್ತದೆ.

ಹಾಗಾಗಿ, 9 ಹಡಗುಗಳು ಪ್ರತಿಯೊಂದರಲ್ಲಿ 12 ಜನರನ್ನು ಸಾಗಿಸಬೇಕಾಗುತ್ತದೆ.

$$
\begin{array}{r|l}
9\overline{)\,108\,} & 5+5+2 \\
-\,45 & \\
\hline
\quad 63 & \\
-\,45 & \\
\hline
\quad 18 & \\
-\,18 & \\
\hline
\quad 0 &
\end{array}
$$


12 ಜನರನ್ನು ಕರೆದೊಯ್ಯಲು 9 ದೋಣಿಗಳು ಬೇಕಾಗುತ್ತವೆ.

ಶಿಕ್ಷಕರಿಗೆ ಟಿಪ್ಪಣಿ: ಭಾಗಾಕಾರ ಲೆಕ್ಕಗಳಲ್ಲಿ 2 ವಿಧಗಳಿವೆ – ಹಂಚಿಕೆ ಮತ್ತು ಅಳತೆ. ಹಂಚಿಕೆಯ ಸಮಸ್ಯೆಗಳಲ್ಲಿ, ಸಮ ಗುಂಪುಗಳನ್ನು ನೀಡಲಾಗಿರುತ್ತದೆ (ಅಂದರೆ ಗುಣಕ), ಇದು ವಸ್ತುಗಳನ್ನು ಸಮನಾಗಿ ಹಂಚಲು ಮುನ್ನಡೆಸುತ್ತದೆ. ಮೇಲಿನ ಉದಾಹರಣೆ ಹಂಚಿಕೆ ಸಮಸ್ಯೆ. ಅಳತೆಯ ಸಮಸ್ಯೆಗಳಲ್ಲಿ, ಗುಂಪಿನ ಗಾತ್ರವನ್ನು ನೀಡಲಾಗಿರುತ್ತದೆ (ಅಂದರೆ ಗುಣ್ಯ), ಇದು ಹೇಗೆಂದರೆ, 60 ಕಾಲುಗಳಿದ್ದಲ್ಲಿ ಎಷ್ಟು ಇರುವೆಗಳಿರುತ್ತವೆ ಎಂಬ ಸಮಸ್ಯೆಯಲ್ಲಿ ಕೇಳಿದಂತೆ. ಇವೆರಡೂ ರೀತಿಯ ಸಮಸ್ಯೆಗಳನ್ನು ಒಳಗೊಳ್ಳುವುದು ಮಕ್ಕಳಿಗೆ ಸಹಾಯಕ.

ಗುಣಾಕಾರದಲ್ಲಿ ವಿನ್ಯಾಸಗಳು

ಪ್ರತಿಯೊಬ್ಬರೂ ಎಷ್ಟು ಹಣ ಪಡೆಯುತ್ತಾರೆ? ಪ್ರಶ್ನೆಗಳಿಗೆ ಉತ್ತರಿಸಲು ಹಣ ಮತ್ತು ಮಕ್ಕಳನ್ನು ಕೂಡಿಸುವ ಬಾಣಗಳನ್ನು ಎಳೆಯಿರಿ.

1. _____ ₹ 30 ನ್ನು 3 ಮಕ್ಕಳಲ್ಲಿ ಸಮವಾಗಿ ಹಂಚಿದೆ
2. _____ ₹ 900 ನ್ನು 3 ಮಕ್ಕಳಲ್ಲಿ ಸಮವಾಗಿ ಹಂಚಿದೆ



ಮೇಲಿನ ರೀತಿಯ ಆಲೋಚನೆಯನ್ನು ಉಪಯೋಗಿಸಿಕೊಂಡು, ಮುಂದಿನ ಸಮಸ್ಯೆಗಳನ್ನು ಪರಿಹರಿಸಿ. ಮುಂದೆ ನೀವು ಗಮನಿಸುವ ವಿನ್ಯಾಸಗಳನ್ನು ವಿವರಿಸಿ.

© KTBS NOT TO BE REPUBLISHED

A	B	C
3 ÷ 3 = _____	9 ÷ 3 = _____	15 ÷ 3 = _____
30 ÷ 3 = _____	90 ÷ 3 = ____	150 ÷ 3 = ____
300 ÷ 3 = ____	900 ÷ 3 = ___	300 ÷ 3 = _____
5 ÷ 5 = _____	8 ÷ 4 = _____	4 ÷ 2 = _____
50 ÷ 5 = ____	80 ÷ 4 = _____	20 ÷ 2 = _____
500 ÷ 5 = ____	800 ÷ 4 = ____	100 ÷ 2 = ____

1. ಭಾರವನ್ನು ಸಾಗಿಸುವ ಟ್ರಕ್‌ನಲ್ಲಿ 6 ಚಕ್ರಗಳಿವೆ. ಚಿಪ್ಪಿ ಹಲ್ಲಿ 60 ಚಕ್ರಗಳನ್ನು ನೋಡುತ್ತದೆ. ಅಲ್ಲಿ ಎಷ್ಟು ಟ್ರಕ್‌ಗಳಿವೆ?
2. ಕಾರ್ ನಿಲುಗಡೆಯ ಸ್ಥಳದಲ್ಲಿ ಚಿಪ್ಪಿ 80 ಚಕ್ರಗಳನ್ನು ನೋಡುತ್ತದೆ. ನಿಲುಗಡೆಯ ಪ್ರದೇಶದಲ್ಲಿ ಎಷ್ಟು ಕಾರ್‌ಗಳು ನಿಂತಿವೆ?
3. ಇರುವೆ ಗೂಡಿನ ಕಡೆಗೆ ಸಾಗುತ್ತಿರುವ ಇರುವೆಗಳ 600 ಕಾಲುಗಳನ್ನು ಚಿಪ್ಪಿ ನೋಡುತ್ತದೆ. ಎಷ್ಟು ಇರುವೆಗಳಿವೆ?
4. ಒಂದು ಫ್ಯಾನ್ಸಿ ಅಂಗಡಿಯಲ್ಲಿ 800 ರಬ್ಬರ್ ಬ್ಯಾಂಡ್‌ಗಳನ್ನು ಹಲವಾರು ಪಟ್ಟಣಗಳಲ್ಲಿ ಪ್ಯಾಕ್ ಮಾಡಲಾಗಿದೆ. ಪ್ರತಿ ಪೊಟ್ಟಣದಲ್ಲಿ 4 ರಬ್ಬರ್ ಬ್ಯಾಂಡ್‌ಗಳಿವೆ.
   ಅಂಗಡಿಯಲ್ಲಿ ರಬ್ಬರ್ ಬ್ಯಾಂಡ್‌ಗಳ ಎಷ್ಟು ಪ್ಯಾಕೆಟ್‌ಗಳಿವೆ?

@KTBS NOT TO BE REPUBLISHED

ನಾವು ಪರಿಹರಿಸೋಣ

1. ಒಂದು ಶಾಲೆ 245 ಮಕ್ಕಳನ್ನು ಸಾರಿಗೆ ಸಂಗ್ರಹಾಲಯಕ್ಕೆ ಕರೆದುಕೊಂಡು ಹೋಗಲು 7 ಬಸ್‌ಗಳನ್ನು ಬಾಡಿಗೆಗೆ ಪಡೆಯುತ್ತದೆ. ಪ್ರತಿ ಬಸ್ ಒಂದೇ ಸಂಖ್ಯೆಯ ಮಕ್ಕಳನ್ನು ಕರೆದುಕೊಂಡು ಹೋಗುತ್ತದೆ. ಪ್ರತಿ ಬಸ್‌ನಲ್ಲಿ ಎಷ್ಟು ಮಕ್ಕಳು ಪ್ರಯಾಣಿಸುತ್ತಿದ್ದಾರೆ?
2. ಡಾರ್ಜಿಲಿಂಗ್ ಹಿಮಾಲಯನ್ ರೈಲ್ವೆಯನ್ನು ತಮಾಷೆಯಿಂದ "ಆಟಿಕೆ ರೈಲು" ಎಂದು ಕರೆಯುತ್ತಾರೆ. ಈ ಆಟಿಕೆ ರೈಲಿನ ಸವಾರಿಯು ಯುನೆಸ್ಕೊದ ವಿಶ್ವ ಪಾರಂಪರಿಕ ತಾಣವಾಗಿದೆ.
   ಈ ಅದ್ಭುತ ರೈಲು ಹೊಸ ಜಲ್‌ಪಾಯ್‌ಗುರಿ ಮತ್ತು ಡಾರ್ಜಿಲಿಂಗ್ ನಡುವೆ ಸಂಚರಿಸುತ್ತದೆ ಹಾಗೂ ಗುಹಂ ಎಂದು ಕರೆಯುವ ಪ್ರಪಂಚದ ಅತೀ ದೊಡ್ಡ ಸ್ಟೇಷನ್ ಮೂಲಕ ಹಾದು ಹೋಗುತ್ತದೆ. ಇದು ಪ್ರತಿ ದಿನ 88 ಕಿಲೋಮೀಟರ್ ಸಂಚರಿಸುತ್ತದೆ. ಇದು ಒಂದು ವಾರದಲ್ಲಿ ಎಷ್ಟು ದೂರ ಸಂಚರಿಸುತ್ತದೆ?
3. ಗಂಗಾ ನದಿಯಲ್ಲಿ ಶಿವ್‌ಪುರಿಯಿಂದ ಋಷಿಕೇಶ್ ವರೆಗಿನ 16 Km ರಾಫ್ಟಿಂಗ್ ಅತ್ಯಂತ ಆಸಕ್ತಿದಾಯಕ ರಾಫ್ಟಿಂಗ್ ಅನುಭವವನ್ನು ನೀಡುತ್ತದೆ. ಬೇಸಿಗೆಯ ತಿಂಗಳುಗಳಲ್ಲಿ ವೆಂಚರ್ ಔಟ್ ಕಂಪನಿಯು ರಾಫ್ಟಿಂಗ್‌ಗೆ 259 ಜನರನ್ನು ಕರೆದೊಯ್ಯಿತು. ಪ್ರತಿ ರಾಫ್ಟ್‌ನಲ್ಲಿ 7 ಜನರು ಹೋಗಬಹುದು. ಅದು ಎಷ್ಟು ರಾಫ್ಟಿಂಗ್‌ಗಳನ್ನು ತೆಗೆದುಕೊಂಡಿತು?

4. ಅನು ಪ್ರತಿ ತಿಂಗಳು ₹ 45 ನ್ನು ತನ್ನ ಪಿಗ್ಗಿ ಬ್ಯಾಂಕ್‌ನಲ್ಲಿ ಹಾಕುತ್ತಾಳೆ.
   a) 6 ತಿಂಗಳಲ್ಲಿ ಅನು ಎಷ್ಟು ಹಣ ಉಳಿತಾಯ ಮಾಡುತ್ತಾಳೆ?
   b) 6 ತಿಂಗಳ ನಂತರ ಅವಳು ತಾನು ಉಳಿಸಿದ ಹಣವನ್ನು ತನ್ನ 6 ಗೆಳತಿಯರಿಗೆ ಹಂಚುತ್ತಾಳೆ. ಪ್ರತಿ ಗೆಳತಿ ಎಷ್ಟು ಪಡೆಯುತ್ತಾಳೆ?
   c) 6 ತಿಂಗಳ ನಂತರ ಅವಳು ತಾನು ಉಳಿಸಿದ ಹಣವನ್ನು ತನ್ನ 3 ಗೆಳತಿಯರಿಗೆ ಹಂಚಲು ನಿರ್ಧರಿಸಿದರೆ, ಪ್ರತಿಯೊಬ್ಬರಿಗೂ ಎಷ್ಟು ಸಿಗುತ್ತದೆ?

5. ರಾಜು ತನ್ನ ಹಳ್ಳಿಯಲ್ಲಿ ಒಂದು ಆಟೋ ಓಡಿಸುತ್ತಾನೆ ಮತ್ತು ಜನರನ್ನು ಬಸ್ ನಿಲ್ದಾಣಕ್ಕೆ ತಲುಪಿಸುತ್ತಾನೆ. ಒಂದು ದಿನದಲ್ಲಿ 8 ಟ್ರಿಪ್‌ಗಳನ್ನು ಮಾಡುತ್ತಾನೆ. ಮೇಲಿನ ಹೇಳಿಕೆಯಿಂದ ಮುಂದಿನ ಯಾವ ಪ್ರಶ್ನೆಗಳನ್ನು ನಿಖರವಾಗಿ ಲೆಕ್ಕ ಮಾಡಬಹುದು?
   a) ಒಂದು ದಿನದಲ್ಲಿ ಅವನು ಎಷ್ಟು ಹಣ ಸಂಪಾದಿಸುತ್ತಾನೆ?
   b) 7 ದಿನಗಳಲ್ಲಿ ಅವನು ಎಷ್ಟು ಟ್ರಿಪ್‌ಗಳನ್ನು ಮಾಡುತ್ತಾನೆ?
   c) ಒಂದು ಟ್ರಿಪ್ ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ?
   d) 4 ವಾರಗಳಲ್ಲಿ ಅವನು ಎಷ್ಟು ಟ್ರಿಪ್‌ಗಳನ್ನು ಮಾಡುತ್ತಾನೆ?

6. ಬಿಡಿಸಿ.

a) 45 × 9	b) 507 × 7	c) 94 ÷ 4	d) 778 ÷ 6
e) 94 × 5	f) 396 × 4	g) 83 ÷ 3	h) 635 ÷ 5

7. ಗಣಿತದಲ್ಲಿ ಕೆಲವು ಹೇಳಿಕೆಗಳು ಯಾವಾಗಲೂ ಸತ್ಯ, ಕೆಲವು ಕೆಲವೊಮ್ಮೆ ಸತ್ಯ ಮತ್ತು ಕೆಲವು ಯಾವಾಗಲೂ ಸತ್ಯವಲ್ಲ.

@KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: ಭಾಜ್ಯ, ಭಾಜಕ ಮತ್ತು ಭಾಗಲಬ್ಧಗಳ ಸಂಬಂಧಗಳನ್ನು ವೀಕ್ಷಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಭಾಜಕವನ್ನು ಭಾಗಲಬ್ಧಗಳನ್ನು 5 ಬಾರಿ / 10 ಬಾರಿ ಬದಲಾಯಿಸಿದಾಗ, ಭಾಗಲಬ್ಧಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲಿ ಹಾಗೂ ಗುಣಾಕಾರ ಮತ್ತು ಭಾಗಾಕಾರದ ಸಂಬಂಧವನ್ನೂ ಅರ್ಥಮಾಡಿಕೊಳ್ಳಲಿ.



ಸೂಕ್ತವಾದ ಕಂಬಸಾಲಿನಲ್ಲಿ ಟಿಕ್ (✓) ಮಾಡಿ.

	ಹೇಳಿಕೆ	ಯಾವಾಗಲೂ ಸತ್ಯ	ಯಾವಾಗಲೂ ಸತ್ಯವಲ್ಲ	ಕೆಲವೊಮ್ಮೆ ಸತ್ಯ
a)	10 ರಿಂದ ಗುಣಿಸಿದಾಗ, ಬಿಡಿ ಸ್ಥಾನದಲ್ಲಿ 0 ಬರುತ್ತದೆ.			
b)	ಒಂದು ಸಂಖ್ಯೆಯನ್ನು 2 ರಿಂದ ಗುಣಿಸುವುದರಿಂದ ಬೆಸ ಸಂಖ್ಯೆಯನ್ನು ನೀಡುತ್ತದೆ.			
c)	ಒಂದು ಸಂಖ್ಯೆಯನ್ನು 5 ರಿಂದ ಗುಣಿಸುವುದರಿಂದ, ಬಿಡಿ ಸ್ಥಾನದಲ್ಲಿ 5 ನ್ನು ನೀಡುತ್ತದೆ.			
d)	ಬೆಸ ಸಂಖ್ಯೆಯ ತಕ್ಷಣದ ಮುಂದಿನ ಸಂಖ್ಯೆ ಸಮ ಸಂಖ್ಯೆಯಾಗಿರುತ್ತದೆ.			
e)	ಯಾವುದೇ ಸಂಖ್ಯೆಯನ್ನು ಅರ್ಧ ಮಾಡುವುದು ಸಮ ಸಂಖ್ಯೆಯನ್ನು ನೀಡುತ್ತದೆ.			
f)	ಒಂದು ಸಂಖ್ಯೆಗೆ 0 ನ್ನು ಕೂಡಿದಾಗ ಸಂಖ್ಯೆಯನ್ನು 1 ಹೆಚ್ಚಿಸುತ್ತದೆ.			

@KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: "ಯಾವಾಗಲೂ ಸತ್ಯ, ಯಾವಾಗಲೂ ಸತ್ಯವಲ್ಲ ಅಥವಾ ಕೆಲವೊಮ್ಮೆ ಸತ್ಯ" ಇಂತಹ ಪ್ರಶ್ನೆಗಳನ್ನು, ಬೇರೆ ಬೇರೆ ಸಂದರ್ಭಗಳಲ್ಲಿ ಗಣಿತದ ಹೇಳಿಕೆಗಳ ಸಮಂಜಸತೆಯನ್ನು ಅರ್ಥ ಮಾಡಿಕೊಳ್ಳಲು ಮತ್ತು ಮೌಲ್ಯಮಾಪನ ಮಾಡಲು ಮಕ್ಕಳಿಗೆ ಸಹಾಯವಾಗುವಂತೆ ವಿನ್ಯಾಸ ಮಾಡಲಾಗುತ್ತದೆ. ಇವುಗಳು ವಿಮರ್ಶಾತ್ಮಕ ಚಿಂತನೆ, ಪರಿಕಲ್ಪನಾತ್ಮಕ ಗ್ರಹಿಕೆಯನ್ನು ಪರೀಕ್ಷಿಸುವುದು ಮತ್ತು ವಿದ್ಯಾರ್ಥಿಗಳು ತರ್ಕಬದ್ಧವಾಗಿ ಆಲೋಚಿಸುವುದನ್ನು ಸೂಕ್ತ ಉದಾಹರಣೆಗಳೊಂದಿಗೆ ಪ್ರೋತ್ಸಾಹಿಸುತ್ತವೆ. ಇವುಗಳು ಕಂಠಪಾಠದಿಂದ ಹೊರಬಂದು, ಗಣಿತೀಯ ತತ್ವಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತವೆ.



ಅಧ್ಯಾಯ
10

ಆನೆಗಳು, ಹುಲಿಗಳು ಮತ್ತು ಜಿರಳೆಗಳು

H5G7J6




NIM ಆಟ (2 ಆಟಗಾರರ ಆಟ)

ಈ ಆಟದ ಒಂದು ರೂಪಾಂತರವನ್ನು ನೀವು 3ನೇ ತರಗತಿಯ 'ನನ್ನ ಅಜ್ಜಿಯೊಂದಿಗಿನ ರಜೆ' ಈ ಅಧ್ಯಾಯದಲ್ಲಿ ಆಡಿರುವಿರಿ. ಗುರಿ ಸಂಖ್ಯೆ 10 ನ್ನು ತಲುಪಲು ನಾವು ಪ್ರತಿ ಬಾರಿ 1 ಅಥವಾ 2 ನ್ನು ಕೂಡುತ್ತೇವೆ.

ಹೇಗೆ ಆಡುವುದು?

1. ಮೊದಲ ಆಟಗಾರ, 1 ಅಥವಾ 2 ನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಆರಂಭಿಸುತ್ತಾನೆ.
2. ಎರಡನೇ ಆಟಗಾರನೂ ಸಹ 1 ಅಥವಾ 2 ನ್ನು ಆಯ್ಕೆ ಮಾಡಿಕೊಂಡು, ಮೊದಲ ಆಟಗಾರ ಆಯ್ಕೆ ಮಾಡಿಕೊಂಡಿದ್ದ ಸಂಖ್ಯೆಗೆ ಕೂಡುತ್ತಾನೆ.
3. ಇಬ್ಬರೂ ಆಟಗಾರರು 1 ಅಥವಾ 2 ನ್ನು ಆಯ್ಕೆ ಮಾಡಿಕೊಂಡು ಅದನ್ನು ಹಿಂದಿನ ಮೊತ್ತಕ್ಕೆ ಕೂಡುವುದರೊಂದಿಗೆ ಆಟವನ್ನು ಮುಂದುವರೆಸುತ್ತಾರೆ.
4. ಯಾರು ಮೊದಲು 10 ತಲುಪುವರೋ ಅವರೇ ಜಯಶಾಲಿ.
5. ಕೆಲವು ಸುತ್ತುಗಳು ಆಡಿ.



ನೀವು ಈ ಆಟವನ್ನು ಗೆಲ್ಲಬಲ್ಲಿರಾ?

a) ಬೇರೆ ಆಟಗಾರ ಮೊತ್ತ 6 ನ್ನು ತಲುಪಿದ್ದು ನಂತರ ನಿಮ್ಮ ಸರದಿ ಆದರೆ

b) ಬೇರೆ ಆಟಗಾರ ಮೊತ್ತ 7 ನ್ನು ತಲುಪಿದ್ದು ನಂತರ ನಿಮ್ಮ ಸರದಿ ಆದರೆ

c) ಬೇರೆ ಆಟಗಾರ ಮೊತ್ತ 8 ನ್ನು ತಲುಪಿದ್ದು ನಂತರ ನಿಮ್ಮ ಸರದಿ ಆದರೆ

ಶಿಕ್ಷಕರಿಗೆ ಟಿಪ್ಪಣಿ: ಬೇರೆ ಬೇರೆ ಗುರಿ ಸಂಖ್ಯೆಗಳೊಂದಿಗೆ ಈ ಆಟವನ್ನು ಆಡಲು ಕಲಿಕಾರ್ಥಿಗಳನ್ನು ಪ್ರೋತ್ಸಾಹಿಸಿ. ನೀವು ಮೊತ್ತಗಳನ್ನು ಗುರ್ತು ಮಾಡಿಕೊಂಡು ಮತ್ತು ಕಲಿಕಾರ್ಥಿಗಳು ಫಲಿತಾಂಶವನ್ನು ವಿಶ್ಲೇಷಣೆ ಮಾಡಲೂ ಸಹಾಯ ಮಾಡಬಹುದು.

© KTBS NOT TO BE REPUBLISHED

1 ಅಥವಾ 2 ನ್ನು ಪ್ರತಿ ಬಾರಿ ಕೂಡುವುದರಿಂದ ಬೇರೆ ಗುರಿ ಸಂಖ್ಯೆಗಳನ್ನು (10, 11, 12) ತಲುಪಲು ಆಟವನ್ನು ಆಡಿರಿ.

ಪ್ರತಿ ಸಂದರ್ಭದಲ್ಲೂ ನೀವು ವಿಜೇತರಾಗುವುದನ್ನು ಖಚಿತಪಡಿಸಲು ಒಂದು ಸಂಖ್ಯೆಯನ್ನು ಕಂಡುಹಿಡಿಯಬಲ್ಲಿರಾ?

ಸಂಕಲನದ ಚಾರ್ಟ್

ಮುಂದೆ ಕೊಟ್ಟಿರುವ ಕೋಷ್ಟಕವನ್ನು ಗಮನಿಸಿ ಮತ್ತು ಕೋಷ್ಟಕವನ್ನು ಹೇಗೆ ಮಾಡಲಾಗಿದೆ ಎಂಬುದನ್ನು ಚರ್ಚಿಸಿ.

+	0	1	2	3	4	5	6	7	8	9	10	11	12
0	0	1	2	3	4	5	6	7	8	9	10	11	12
1	1	2	3	4	5	6	7	8	9	10	11	12	13
2	2	3	4	5	6	7	8	9	10	11	12	13	14
3	3	4	5	6	7	8	9	10	11	12	13	14	15
4	4	5	6	7	8	9	10	11	12	13	14	15	16
5	5	6	7	8	9	10	11	12	13	14	15	16	17
6	6	7	8	9	10	11	12	13	14	15	16	17	18
7	7	8	9	10	11	12	13	14	15	16	17	18	19
8	8	9	10	11	12	13	14	15	16	17	18	19	20
9	9	10	11	12	13	14	15	16	17	18	19	20	21
10	10	11	12	13	14	15	16	17	18	19	20	21	22
11	11	12	13	14	15	16	17	18	19	20	21	22	23
12	12	13	14	15	16	17	18	19	20	21	22	23	24

© KTBS NOT TO BE REPUBLISHED

1. ಕೋಷ್ಟಕದಲ್ಲಿನ ಕೆಲವು ವಿನ್ಯಾಸಗಳನ್ನು ಗುರ್ತಿಸಿ.
2. ಕೋಷ್ಟಕದಲ್ಲಿ ಸಂಖ್ಯೆ 9 ಬರುವ ಕೋಶಗಳನ್ನು ಗಮನಿಸಿ. ಸಂಖ್ಯೆ 9 ನ್ನು ಎಷ್ಟು ಬಾರಿ ಗಮನಿಸುವಿರಿ? ಬೇರೆ ಸಂಖ್ಯೆಗಳ ಬಗ್ಗೆ ಹೇಗೆ?
3. ಸಮ ಸಂಖ್ಯೆಗಳು ಅಥವಾ ಬೆಸ ಸಂಖ್ಯೆಗಳು ಮಾತ್ರ ಇರುವ ಯಾವುದಾದರೂ ಅಡ್ಡಸಾಲುಗಳು ಅಥವಾ ಕಂಬಸಾಲುಗಳಿವೆಯೇ? ನಿಮ್ಮ ವೀಕ್ಷಣೆಯನ್ನು ವಿವರಿಸಿ.

4. ಕೋಷ್ಟಕದಲ್ಲಿ ಪ್ರಮುಖವಾಗಿ ಕೆಂಪು ಬಣ್ಣದಿಂದ ಗುರ್ತಿಸಿರುವ ಚೌಕಟ್ಟನ್ನು ಗಮನಿಸಿ.
   a) ಪ್ರತಿ ಅಡ್ಡಸಾಲಿನಲ್ಲಿರುವ ಎರಡು ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಿರಿ.
   b) ಪ್ರತಿ ಕಂಬಸಾಲಿನಲ್ಲಿರುವ ಎರಡು ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಿರಿ. ಏನನ್ನು ಗಮನಿಸಿದಿರಿ?
   c) ಈಗ, ಬಾಣದಿಂದ ಗುರುತಿಸಿರುವ ಎರಡೂ ಕರ್ಣಗಳಲ್ಲಿನ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಿರಿ. ಏನನ್ನು ಗಮನಿಸಿದಿರಿ?
   d) ಈಗ ಕೆಂಪು ಬಣ್ಣದ ಚೌಕಟ್ಟನ್ನು ಬೇರೆ ಸ್ಥಳಗಳಲ್ಲಿ ಇರಿಸಿ ಮತ್ತು ಮೇಲಿನಂತೆ ಮೊತ್ತವನ್ನು ಕಂಡುಹಿಡಿಯಿರಿ. ಏನನ್ನು ಗಮನಿಸಿದಿರಿ?
5. ನೀಲಿ ಚೌಕಟ್ಟಿನಲ್ಲಿರುವ ಸಂಖ್ಯೆಗಳ ಕೆಲವು ವಿನ್ಯಾಸಗಳು ಮತ್ತು ಅವುಗಳಿಗಿರುವ ಸಂಬಂಧಗಳನ್ನು ಗುರ್ತಿಸಿ.

ಹಿಂದೆ ಮುಂದೆ ಮಾಡಿ ಮತ್ತು ಕೂಡಿ

a) ಒಂದು 2–ಅಂಕಿ ಸಂಖ್ಯೆ ಉದಾಹರಣೆಗೆ 27 ನ್ನು ತೆಗೆದುಕೊಳ್ಳಿ. ಅದರ ಅಂಕಿಗಳನ್ನು ಹಿಂದೆ ಮುಂದೆ ಮಾಡಿ (72). ಅವುಗಳನ್ನು ಕೂಡಿ (99). ಬೇರೆ ಬೇರೆ 2–ಅಂಕಿ ಸಂಖ್ಯೆಗಳಿಗೆ ಪುನರಾವರ್ತಿಸಿ.

b) 2–ಅಂಕಿ ಸಂಖ್ಯೆ ಮತ್ತು ಆ ಸಂಖ್ಯೆಯ ಅಂಕಿಗಳನ್ನು ಹಿಂದೆ ಮುಂದೆ ಮಾಡಿ ಕೂಡಿದಾಗ ಯಾವ ಮೊತ್ತವನ್ನು ಪಡೆದೆವು?

c) ಸಂಖ್ಯೆ ಮತ್ತು ಆ ಸಂಖ್ಯೆಯ ಅಂಕಿಗಳನ್ನು ಹಿಂದೆ ಮುಂದೆ ಮಾಡಿ ಕೂಡಿದಾಗ ಮುಂದಿನಂತೆ ಮೊತ್ತವನ್ನು ಕೊಡುವ ಎಲ್ಲಾ ಸಂಖ್ಯೆಗಳನ್ನು ಪಟ್ಟಿಮಾಡಿ.
   i) 55 ii) 88

d) 3–ಅಂಕಿ ಮೊತ್ತವನ್ನು ಪಡೆಯಬಹುದೇ? ನಾವು ಪಡೆಯಬಹುದಾದ ಅತೀ ಕನಿಷ್ಟ 3 – ಅಂಕಿ ಮೊತ್ತ ಎಷ್ಟು?

ಖಾಲಿ ಸ್ಥಳಗಳನ್ನು ಸೂಕ್ತವಾದ ಸಂಖ್ಯೆಗಳಿಂದ ಭರ್ತಿಮಾಡಿ


a)



b)



c)



© KSTBS NOT TO BE REPUBLISHED

ಎಷ್ಟು ಪ್ರಾಣಿಗಳು




ಭಾರತವು ಜೀವವೈವಿಧ್ಯತೆಯಿಂದ ಸಂಪದ್ಭರಿತವಾಗಿದೆ. ಅಪಾಯದ ಅಂಚಿನಲ್ಲಿನ ಕೆಲವು ಕಾಡುಪ್ರಾಣಿಗಳಾದ ಆನೆಗಳು, ಹುಲಿಗಳು ಮತ್ತು ಚಿರತೆಗಳಿಗೆ ಭಾರತವು ವಾಸಸ್ಥಳವಾಗಿದೆ.

ಪ್ರಪಂಚದ ಹುಲಿಗಳ ಸಂತತಿಯ $\frac{3}{4}$ ರಷ್ಟು ಮತ್ತು ಏಷ್ಯಾದ ಆನೆಗಳ ಸಂತತಿಯ $\frac{3}{5}$ ರಷ್ಟು ಭಾರತದಲ್ಲಿದೆ.

1. ಆನೆಗಳ ಸಂತತಿ ಕರ್ನಾಟಕದಲ್ಲಿ 6049 ಮತ್ತು ಕೇರಳದಲ್ಲಿ 3054 ಇದೆ. ಈ ಎರಡೂ ರಾಜ್ಯಗಳಲ್ಲಿ ಒಟ್ಟು ಎಷ್ಟು ಆನೆಗಳಿವೆ?

ಉತ್ತರವನ್ನು ಅಂದಾಜಿಸಿ
_____

6049 + 3054



© KTBS NOT TO BE REPUBLISHED

9 ಸಾವಿರ + 9 ಹತ್ತು + 13 ಒಂದುಗಳು
= 9 ಸಾವಿರ + 1 ನೂರು + 0 ಹತ್ತು + 3 ಒಂದುಗಳು
= 9103
ಕರ್ನಾಟಕ ಮತ್ತು ಕೇರಳದಲ್ಲಿ 9103 ಆನೆಗಳಿವೆ.


	ಸಾವಿರ	ನೂರು	ಹತ್ತು	ಒಂದು
		1	1	
	6	0	4	9
+	3	0	5	4
	9	1	10	13
	9	1	0	3

2. ಮೂರು ರಾಜ್ಯಗಳಲ್ಲಿ ಅತೀ ಹೆಚ್ಚು ಸಂಖ್ಯೆಯ ಚಿರತೆಗಳಿವೆ. ಗುಜರಾತ್‌ನಲ್ಲಿ 1355, ಕರ್ನಾಟಕದಲ್ಲಿ 1131 ಮತ್ತು ಮಧ್ಯಪ್ರದೇಶದಲ್ಲಿ 1817 ಚಿರತೆಗಳಿವೆ. ಈ ರಾಜ್ಯಗಳಲ್ಲಿ ಒಟ್ಟು ಎಷ್ಟು ಚಿರತೆಗಳಿವೆ?

ಉತ್ತರವನ್ನು ಅಂದಾಜಿಸಿ

_____

1355 + 1131 + 1817



© KTBS NOT TO BE REPUBLISHED

3 ಸಾವಿರ + 12 ನೂರು + 9 ಹತ್ತು + 13 ಒಂದುಗಳು

4 ಸಾವಿರ + 2 ನೂರು + 10 ಹತ್ತು + 3 ಒಂದುಗಳು

= 4 Th + 3 H + 0 T + 3 O

4 ಸಾವಿರ + 3 ನೂರು 0 ಹತ್ತು + 3 ಒಂದುಗಳು

= 4303


ಈ ಮೂರೂ ರಾಜ್ಯಗಳಲ್ಲಿ 4303 ಚಿರತೆಗಳಿವೆ.

	ಸಾ	ನೂ	ಹ	ಬಿ
	1	1	1	
	1	3	5	5
	1	1	3	1
+	1	8	1	7
	4	13	10	13
	4	3	0	3


3. ಮಹಾರಾಷ್ಟ್ರದಲ್ಲಿ 444 ಹುಲಿಗಳಿವೆ. ಮಧ್ಯಪ್ರದೇಶದಲ್ಲಿ ಮಹಾರಾಷ್ಟ್ರದಲ್ಲಿರುವ ಹುಲಿಗಳಿಗಿಂತ 341 ಹೆಚ್ಚು ಹುಲಿಗಳಿವೆ. ಉತ್ತರಾಖಂಡದಲ್ಲಿ ಮಹಾರಾಷ್ಟ್ರಕ್ಕಿಂತ 116 ಹೆಚ್ಚು ಹುಲಿಗಳಿವೆ.

ನೆನಪಿನಲ್ಲಿಡಿ
10 ಒಂದುಗಳು = 1 ಹತ್ತು
10 ಹತ್ತುಗಳು = 1 ನೂರು
10 ನೂರುಗಳು = 1 ಸಾವಿರ


a) ಮಧ್ಯ ಪ್ರದೇಶದಲ್ಲಿ ಎಷ್ಟು ಹುಲಿಗಳಿವೆ?




b) ಉತ್ತರಾಖಂಡ್‌ನಲ್ಲಿ ಎಷ್ಟು ಹುಲಿಗಳಿವೆ?



c) ಮಧ್ಯಪ್ರದೇಶ ಮತ್ತು ಉತ್ತರಾಖಂಡ್‌ನಲ್ಲಿ ಎಷ್ಟು ಹುಲಿಗಳಿವೆ?



d) ಮೂರೂ ರಾಜ್ಯಗಳಲ್ಲಿ ಒಟ್ಟು ಎಷ್ಟು ಹುಲಿಗಳಿವೆ?



© KTBS NOT TO BE REPUBLISHED


ಶಿಕ್ಷಕರಿಗೆ ಟಿಪ್ಪಣಿ: ಟೋಕನ್‌ಗಳನ್ನು ಉಪಯೋಗಿಸಿಕೊಂಡು, ಬಹಳಷ್ಟು ಉದಾಹರಣೆಗಳ ಮೂಲಕ ವಿಭಿನ್ನ ರೀತಿಯ ಸಮಸ್ಯೆಗಳನ್ನು ಸಾಮಗ್ರಿಗಳನ್ನು ಉಪಯೋಗಿಸದೆ ಸ್ವತಂತ್ರವಾಗಿ ಪರಿಹರಿಸುವವರೆಗೂ ವಿದ್ಯಾರ್ಥಿಗಳನ್ನು ಬೆಂಬಲಿಸಿ. ಹಿಂದಿನ ಅಧ್ಯಾಯದಲ್ಲಿ ಸೂಚಿಸಿರುವಂತೆ, ವಾಕ್ಯರೂಪದ ಸಮಸ್ಯೆಗಳನ್ನು ಪರಿಹರಿಸಲು ಬಾಕ್ಸ್ ಚಿತ್ರಗಳನ್ನು ನೀವು ಬೆಂಬಲಿಸಬಹುದು.



ಹೆಚ್ಚು ಅಥವಾ ಕಡಿಮೆ?

1. ಅಸ್ಸಾಂನಲ್ಲಿ 5719 ಆನೆಗಳಿವೆ. ಅಲ್ಲಿ ಮೇಘಾಲಯದಲ್ಲಿರುವುದಕ್ಕಿಂತ 3965 ಆನೆಗಳು ಹೆಚ್ಚಾಗಿವೆ. ಮೇಘಾಲಯದಲ್ಲಿ ಒಟ್ಟು ಎಷ್ಟು ಆನೆಗಳಿವೆ?

ಉತ್ತರವನ್ನು ಅಂದಾಜಿಸಿ.
_____



	ಸಾವಿರ	ನೂರು	ಹತ್ತು	ಒಂದು
	4	16	11	
–	5	7	1	9
	3	9	6	5
	2	1	5	4


ಮೇಘಾಲಯದಲ್ಲಿ 1754 ಆನೆಗಳಿವೆ.


@KTBS NOT TO BE REPUBLISHED

2. ಭಾರತದ ಮಧ್ಯಭಾಗ ಮತ್ತು ಪೂರ್ವ ಘಟ್ಟಗಳಲ್ಲಿ 2022 ರ ಗಣತಿಯ ಪ್ರಕಾರ ಚಿರತೆಗಳ ಸಂತತಿ 8820 ಇತ್ತು. ಅದೇ ಪ್ರಾಂತ್ಯದಲ್ಲಿ 2018ರ ಗಣತಿಗೆ ಹೋಲಿಸಿದಂತೆ ಚಿರತೆಗಳ ಸಂತತಿ 749 ಹೆಚ್ಚಾಗಿತ್ತು. 2018 ರಲ್ಲಿ ಎಷ್ಟು ಚಿರತೆಗಳಿದ್ದವು?

ಉತ್ತರವನ್ನು ಅಂದಾಜಿಸಿ.

_____





_____ ಚಿರತೆಗಳು 2018 ರಲ್ಲಿದ್ದವು.

ಹಿಂದಿನ ಪುಟಗಳಲ್ಲಿನ ಸಮಸ್ಯೆಗಳಲ್ಲಿನ ದತ್ತಾಂಶವನ್ನು ಆಧರಿಸಿ ಪ್ರಾಣಿಗಳ ಸಂಖ್ಯೆಯನ್ನು ಈ ಭೂಪಟದ ಮೇಲೆ ಬರೆಯಿರಿ.

@KTBS
NOT TO BE REPUBLISHED



© KTBS NOT TO BE REPUBLISHED

ನಾವು ಮಾಡೋಣ

1. ಕಾಯ್ಕಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿನ ಟಿಕೆಟ್ ಕಛೇರಿಯಲ್ಲಿನ ಫಲಕವು ಮುಂದಿನವುಗಳನ್ನು ಸೂಚಿಸುತ್ತದೆ.

ಕಾಝಿರಂಗ ರಾಷ್ಟ್ರೀಯ ಉದ್ಯಾನವನಕ್ಕೆ ಸ್ವಾಗತ	
ತಿಂಗಳು	ಪ್ರವಾಸಿಗರ ಸಂಖ್ಯೆ
ಡಿಸೆಂಬರ್	8591
ನವೆಂಬರ್	6415
ಅಕ್ಟೋಬರ್	?

a) ನವೆಂಬರ್‌ಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ಎಷ್ಟು ಮಂದಿ ಪ್ರವಾಸಿಗರು ಹೆಚ್ಚು ಬಂದಿದ್ದಾರೆ?

b) ಅಕ್ಟೋಬರ್‌ಗಿಂತ ನವೆಂಬರ್‌ನಲ್ಲಿ 1587 ಪ್ರವಾಸಿಗರು ಹೆಚ್ಚಾಗಿದ್ದಾರೆ. ಅಕ್ಟೋಬರ್‌ನಲ್ಲಿ ಎಷ್ಟು ಪ್ರವಾಸಿಗರಿದ್ದರು?

2. ಹಣ್ಣಿನ ರಸವನ್ನು ಮಾಡುವ ಕಾರ್ಖಾನೆಯೊಂದರಲ್ಲಿ ಮಹಿಳೆಯರು ಮುಂದೆ ನೀಡಿರುವಂತೆ ವಿವಿಧ ಹಣ್ಣಿನ ರಸಗಳನ್ನು ಮಾಡುತ್ತಾರೆ.



ಹಣ್ಣಿನ ರಸದ ವಿಧ	ಒಂದು ತಿಂಗಳಲ್ಲಿ ಪ್ಯಾಕ್ ಮಾಡಲಾದ ಬಾಟಲ್‌ಗಳ ಸಂಖ್ಯೆ
ಪೈನಾಪಲ್	1348
ಪೇರಳೆ	
ಕಿತ್ತಳೆ	
ಪ್ಯಾಶನ್ ಹಣ್ಣು	4781

© KTBS NOT TO BE REPUBLISHED

a) ಪೇರಳೆ ಹಣ್ಣಿನ ರಸ, ಪೈನಾಪಲ್ ಹಣ್ಣಿನ ರಸದ ಬಾಟಲ್‌ಗಳಿಗಿಂತ 759 ಹೆಚ್ಚಾಗಿದೆ. ಪೇರಳೆ ಹಣ್ಣಿನ ರಸದ ಬಾಟಲ್‌ಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

b) ಕಿತ್ತಳೆ ಹಣ್ಣಿನ ರಸದ ಬಾಟಲ್‌ಗಳ ಸಂಖ್ಯೆ, ಪೇರಳೆ ಹಣ್ಣಿನ ರಸದ ಬಾಟಲ್‌ಗಳ ಸಂಖ್ಯೆಗಿಂತ 1257 ಹೆಚ್ಚಾಗಿದೆ ಮತ್ತು ಪ್ಯಾಶನ್ ಹಣ್ಣಿನ ರಸದ ಬಾಟಲ್‌ಗಳ ಸಂಖ್ಯೆಗಿಂತ 1417 ಕಡಿಮೆಯಿದೆ. ಒಂದು ತಿಂಗಳಿನಲ್ಲಿ ಎಷ್ಟು ಬಾಟಲ್ ಕಿತ್ತಳೆ ಹಣ್ಣಿನ ರಸವನ್ನು ತಯಾರಿಸಲಾಗಿದೆ?

c) ಪೇರಳೆ ಹಣ್ಣಿನ ರಸ ಮತ್ತು ಕಿತ್ತಳೆ ಹಣ್ಣಿನ ರಸದ ಒಟ್ಟು ಬಾಟಲ್‌ಗಳ ಸಂಖ್ಯೆಯು ಹೆಚ್ಚು ಕಡಿಮೆ ಪ್ಯಾಶನ್ ಹಣ್ಣಿನ ಬಾಟಲ್‌ಗಳ ಸಂಖ್ಯೆಯಷ್ಟೇ ಇದೆಯೇ? ಎಷ್ಟು ಹೆಚ್ಚು ಅಥವಾ ಕಡಿಮೆ ಇದೆ?


3. ಒಂದು ಪುಟ್ಟ ಪಟ್ಟಣದಲ್ಲಿ 2022 ರಲ್ಲಿ ಮುಂದಿನಂತೆ ವಾಹನಗಳನ್ನು ನೋಂದಾಯಿಸಲಾಯಿತು. ಕೊಟ್ಟಿರುವ ನಿಬಂಧನೆಗಳಂತೆ ವಾಹನಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

a) ಬಸ್‌ಗಳ ಸಂಖ್ಯೆ, ಜೀಪ್‌ಗಳ ಸಂಖ್ಯೆಗಿಂತ 253 ಹೆಚ್ಚಾಗಿದೆ. ಪಟ್ಟಣದಲ್ಲಿ ಎಷ್ಟು ಬಸ್‌ಗಳಿವೆ?

b) ಟ್ರಾಕ್ಟರ್‌ಗಳ ಸಂಖ್ಯೆ ಬಸ್‌ಗಳ ಸಂಖ್ಯೆಗಿಂತ 5247 ಕಡಿಮೆಯಿದೆ. ಪಟ್ಟಣದಲ್ಲಿ ಎಷ್ಟು ಟ್ರಾಕ್ಟರ್‌ಗಳಿವೆ?

c) ಟ್ಯಾಕ್ಸಿಗಳ ಸಂಖ್ಯೆ, ಟ್ರಾಕ್ಟರ್‌ಗಳ ಸಂಖ್ಯೆಗಿಂತ 1579 ಹೆಚ್ಚಾಗಿದೆ. ಎಷ್ಟು ಟ್ಯಾಕ್ಸಿಗಳಿವೆ?

d) ಪ್ರತಿ ವಿಧದ ವಾಹನಗಳನ್ನು ಅವುಗಳ ಸಂಖ್ಯೆಗೆ ಅನುಸಾರವಾಗಿ ಕಡಿಮೆಯಿಂದ ಹೆಚ್ಚಿನವರೆಗೆ ಜೋಡಿಸಿ.



©KSEEBS NOT TO BE REPUBLISHED

4. ಬಿಡಿಸಿ

a) 1459 + 476

b) 3863 + 4188

c) 5017 + 899

d) 4285 + 2132

e) 3158 + 1052

f) 7293 - 2819

g) 3105 - 1223

h) 8006 - 5567

i) 5000 - 4124

j) 9018 - 487

5. ಚಿತ್ತೂರ್‌ನಲ್ಲಿನ ಶಾಲೆಯೊಂದರ ಮಕ್ಕಳು ಬಾಲ ಮೇಳವನ್ನು ತಮ್ಮ ಶಾಲೆಯಲ್ಲಿ ಆಯೋಜಿಸಲು ಯೋಜಿಸುತ್ತಿದ್ದಾರೆ.

ರಾಜು, ರಾಣಿ ಮತ್ತು ರೋಜ ಮೇಳದ ಸಿದ್ಧತೆಗಳಿಗಾಗಿ ಸ್ವಲ್ಪ ಹಣವನ್ನು ಸಂಗ್ರಹಿಸಲು ನಿರ್ಧರಿಸಿದರು. ಹಣವು 500, 100, 50 ಮತ್ತು 10 ರ ನೋಟ್‌ಗಳಲ್ಲಿ ಮತ್ತು 5, 2 ಮತ್ತು 1 ರ ನಾಣ್ಯಗಳಲ್ಲಿ ಲಭ್ಯವಿದೆ. ಅವರು ಶಾಲೆಯ ಪಂಚಾಯತ್ ಬ್ಯಾಂಕ್‌ನಲ್ಲಿ ಹಣವನ್ನು ಇಡಲು ನಿರ್ಧರಿಸಿದರು.

ರಾಜು



₹ 2045

ರಾಣಿ



₹ 3578

ರೋಜ



₹ 1240

ಮುಂದೆ ಕೊಟ್ಟಿರುವ ಠೇವಣಿ ಹಾಳೆಯನ್ನು ತುಂಬಲು ಪ್ರತಿ ಮಗುವಿಗೆ ಸಹಾಯ ಮಾಡಿ.

ನೋಟ್‌ಗಳ ವಿವಿಧ ಮುಖಬೆಲೆಗಳು ಒಂದೇ ಮೊತ್ತವನ್ನು ನೀಡಬಹುದು. ಅವರಲ್ಲಿರಬಹುದಾದ ನೋಟ್‌ಗಳ ಸಂಭವನೀಯ ಸಂಯೋಜನೆಯನ್ನು ನೀವು ಊಹಿಸಬಲ್ಲಿರಾ? ಮೊತ್ತಗಳನ್ನು ಸೂಕ್ತವಾಗಿ ಭರ್ತಿಮಾಡಿ.

@KTBS NOT TO BE REPUBLISHED

ಠೇವಣಿ ಹಾಳೆ

SPB

ದಿನಾಂಕ 2025

ಖಾತೆ ಸಂಖ್ಯೆ: _____ ಹೆಸರು: ರಾಜು_____

ಮೊತ್ತ (ಸಂಖ್ಯೆಗಳಲ್ಲಿ) ₹2045

ಒಟ್ಟು ಮೊತ್ತ (ಪದಗಳಲ್ಲಿ)

_____

_____

_____

ಠೇವಣಿದಾರರ ಸಹಿ:

Raju

ನೋಟ್/ನಾಣ್ಯದ ವಿಧ	ನೋಟ್/ನಾಣ್ಯಗಳ ಸಂಖ್ಯೆ	ಮೊತ್ತ
500	3	1500
100	3	300
50	2	_____
10	14	_____
5	1	_____
2	0	_____
1	0	_____
ಒಟ್ಟು	_____	_____

ಠೇವಣಿ ಹಾಳೆ

SPB

ದಿನಾಂಕ D D M M Y Y Y Y

ಖಾತೆ ಸಂಖ್ಯೆ . _____ ಹೆಸರು: ರಾಣಿ _____

ಮೊತ್ತ (ಸಂಖ್ಯೆಗಳಲ್ಲಿ) :

ಒಟ್ಟು ಮೊತ್ತ (ಪದಗಳಲ್ಲಿ)

_____

_____

_____

ಠೇವಣಿದಾರರ ಸಹಿ:

ನೋಟ್/ನಾಣ್ಯದ ವಿಧ	ನೋಟ್/ನಾಣ್ಯಗಳ ಸಂಖ್ಯೆ	ಮೊತ್ತ
500		
100		
50		
10		
5		
2		
1		
ಒಟ್ಟು		

@KTBS NOT TO BE REPUBLISHED

ಠೇವಣಿ ಹಾಳೆ

SPB

ದಿನಾಂಕ D D M M Y Y Y Y

Account no. ಖಾತೆ ಸಂಖ್ಯೆ _____ ಹೆಸರು: ರೋಜ_

ಮೊತ್ತ (ಸಂಖ್ಯೆಗಳಲ್ಲಿ)

ಒಟ್ಟು ಮೊತ್ತ (ಪದಗಳಲ್ಲಿ)

_____

_____

_____

ಠೇವಣಿದಾರರ ಸಹಿ:

ನೋಟ್/ನಾಣ್ಯದ ವಿಧ	ನೋಟ್/ನಾಣ್ಯಗಳ ಸಂಖ್ಯೆ	ಮೊತ್ತ
500		
100		
50		
10		
5		
2		
1		
ಒಟ್ಟು		

ನಾವು ಬಿಡಿಸೋಣ

1. ಬಿಡಿಸಿ

a)

ಸಾ	ನೂ	ಹ	ಬಿ
3	6	9	5
+ 4	2	0	8

b)

ಸಾ	ನೂ	ಹ	ಬಿ
2	5	0	7
+ 6	8	4	7

c)

ಸಾ	ನೂ	ಹ	ಬಿ
6	3	5	2
− 3	5	2	1

d)

ಸಾ	ನೂ	ಹ	ಬಿ
8	8	0	3
− 5	7	2	6

2. ಮುಂದಿನವುಗಳನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಕಂಬಸಾಲುಗಳಲ್ಲಿ ಜೋಡಿಸಿ, ಪರಿಹರಿಸಿ.

a) 3683 – 971
b) 8432 – 46
c) 4011 – 3666
d) 5203 – 2745

e) 1465 + 632
f) 3567 + 77
g) 8263 + 3737
h) 5429 + 3287

@KTBS NOT TO BE REPUBLISHED

ನಾವು ಬಿಡಿಸೋಣ

1. ಮುಂದೆ ಕೊಟ್ಟಿರುವ ಸಮಸ್ಯೆಗಳನ್ನು ಪರಿಹರಿಸಲು ಸುಲಭವಾದ ವಿಧಾನಗಳನ್ನು ಕಂಡುಹಿಡಿಯಿರಿ. ಕೊಟ್ಟಿರುವ ಜಾಗದಲ್ಲಿ ಉತ್ತರಗಳನ್ನು ಬರೆಯಿರಿ. ನಿಮ್ಮ ಆಲೋಚನೆಯನ್ನು ತರಗತಿಯಲ್ಲಿ ಹಂಚಿಕೊಳ್ಳಿ.

a) 8787 – 99 = _____
100ನ್ನು ಕಳೆಯಿರಿ, ನಂತರ 1 ಕೂಡಿ

b) 4596 + 104 = _____

c) 3459 + 21 = _____

d) 5010 + 95 = _____

(e) 4990 + 310 = _____

(f) 7844 – 15 = _____

(g) 260 + 240 = _____

(h) 1575 – 125 = _____

(i) 3999 + 290 = _____

2. <, =, > ಚಿಹ್ನೆಗಳನ್ನು ಸೂಕ್ತವಾಗಿ ಬಳಸಿ, ಮುಂದಿನವುಗಳನ್ನು ಲೆಕ್ಕಚಾರ ಮಾಡದೆ ಹೋಲಿಸಿ. ಅವುಗಳಿಗೆ ಕಾರಣವನ್ನು ಕಂಡುಕೊಳ್ಳಲು ಪ್ರಯತ್ನಿಸಿ ಮತ್ತು ಅದನ್ನು ತರಗತಿಯಲ್ಲಿ ಹಂಚಿಕೊಳ್ಳಿ.

54 + 97 ☐ 54 + 90

84-68 ☐ 90-68

76 + 85 ☐ 80 + 86

73 -54 ☐ 73 -56

ಅದೇ ಸಂಖ್ಯೆ

ಎಡ ಮತ್ತು ಬಲದಲ್ಲಿ ಏನನ್ನು ಕಳೆದಿದೆ ಎಂಬುದನ್ನು ಗಮನಿಸಿ

@KTBS NOT TO BE REPUBLISHED

3. ಕೊಟ್ಟಿರುವ ಮಾಹಿತಿಯನ್ನು ಉಪಯೋಗಿಸಿ, ಬೆಲೆಗಳನ್ನು ಕಂಡುಹಿಡಿಯಿರಿ. ನಿಮ್ಮ ಆಲೋಚನೆಯನ್ನು ತರಗತಿಯಲ್ಲಿ ಹಂಚಿಕೊಳ್ಳಿ.

139 + 175 = 314
314 – 175 = _____

845 – 394 = 451
845 – 395 = _____

354 + 167 = 521
354 + 168 = _____

456 + 209 = 665
446 + 219 = _____

ಶಿಕ್ಷಕರಿಗೆ ಟಿಪ್ಪಣಿ: ಅಲ್ಗಾರಿಥಂ ಇಲ್ಲದೆ ಸಮಸ್ಯೆಗಳನ್ನು ಪರಿಹರಿಸುವ ಬೇರೆ ವಿಧಾನಗಳನ್ನು ಗುರ್ತಿಸಿ ಈ ಸಮಸ್ಯೆಗಳನ್ನು ಪರಿಹರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ. ಸಂಖ್ಯೆಗಳು ಎರಡೂ ಬದಿಗಳಲ್ಲಿ ಹೆಚ್ಚಾಗುವ ಮತ್ತು ಕಡಿಮೆಯಾಗುವ ಅಂತೆಯೇ ಫಲಿತಾಂಶವೂ ಬದಲಾಗುವ ವಿಧಗಳನ್ನು ಗಮನಿಸಿ. ನೀವು ಕೆಲವು ವಸ್ತುಗಳಾದ – ಡೀನ್ ಬ್ಲಾಕ್ ಅಥವಾ ಟೋಕನ್‌ಗಳನ್ನು ಬಳಸಬಹುದು. ನೀವು ಅಂತಹ ಹೆಚ್ಚಿನ ಸಮಸ್ಯೆಗಳನ್ನು ಮಕ್ಕಳಿಗೆ ನೀಡಬಹುದು



1. ಕೂಡಿ

a) 2783 + 378
b) 8948 + 97
c) 7006 + 367
d) 8009 + 485
e) 6062 + 3809
f) 3792 + 2688
g) 4999 + 3888
h) 5005 + 4895
i) 5768 + 4053
j) 3480 + 479

2. ಕಳೆಯಿರಿ


a) 4456 - 2768
b) 5300 - 467
c) 8067 - 4546
d) 5302 - 1034
e) 8004 - 3107
f) 3400 - 897
g) 9382 - 4857
h) 7561 - 2933
i) 6478 - 5986
j) 3444 - 2555

@KTBS NOT TO BE REPUBLISHED

3. 1 ರಿಂದ 9 ರವರೆಗಿನ ಸಂಖ್ಯೆಗಳನ್ನು ಉಪಯೋಗಿಸಿ ಚೌಕಗಳನ್ನು ಭರ್ತಿಮಾಡಿ. ಯಾವುದೇ ಎರಡು ಅಕ್ಕಪಕ್ಕದ (ಗೆರೆಯಿಂದ ಹೊಂದಿಕೊಂಡಿರುವ) ಚೌಕಗಳಲ್ಲಿನ ವ್ಯತ್ಯಾಸ ಬೆಸ ಸಂಖ್ಯೆ ಆಗಿರಬೇಕು.

ಚೌಕಗಳನ್ನು ಭರ್ತಿಮಾಡಲು ಬೇರೆ ವಿಧಾನಗಳನ್ನು ನೀವು ಕಂಡುಕೊಂಡಿರಾ?

ಯಾವುದೇ ಎರಡು ಅಕ್ಕಪಕ್ಕದ ಚೌಕಗಳ ವ್ಯತ್ಯಾಸ ಸಮ ಸಂಖ್ಯೆ ಆಗುವಂತೆ ಅದೇ ರೀತಿ ಮಾಡಬಲ್ಲಿರಾ?



ಅಧ್ಯಾಯ

11 ಸಮಮಿತಿಯೊಂದಿಗೆ ವಿನೋದ

A9H8M4




ಹಿಂದಿನ ತರಗತಿಗಳಲ್ಲಿ, ನಾವು ರಂಗೋಲಿಗಳು, ಮುಖವಾಡಗಳು, ಮಣಿ ಹಾರಗಳು ಮತ್ತು ಕಟ್ಟಡಗಳಲ್ಲಿನ ಸಮಮಿತಿಯನ್ನು ಅನ್ವೇಷಿಸಿದ್ದೇವೆ.


ಸಮಮಿತಿಯ ಬಗ್ಗೆ ಮತ್ತಷ್ಟು ಅನ್ವೇಷಿಸೋಣ.

ನಾವು ಮಾಡೋಣ

1. ಶಾಯಿ ವಿನ್ಯಾಸ


ಹಂತ 1: ಒಂದು ಹಾಳೆಯನ್ನು ತೆಗೆದುಕೊಂಡು ಅದನ್ನು ಅರ್ಧಕ್ಕೆ ಮಡಚಿ.






ಹಂತ 2: ಅದನ್ನು ತೆರೆಯಿರಿ, ಮಡಿಕೆಯ ಮಧ್ಯಭಾಗದಲ್ಲಿ ಕೆಲವು ಬಣ್ಣದ ನೀರಿನ ಹನಿಗಳನ್ನು ಚಿಮುಕಿಸಿ.

ಹಂತ 3: ಬಣ್ಣ ಸಮವಾಗಿ ಹರಡಲು ಅದನ್ನು ಅದುಮಿ.





ಹಂತ 4: ನೀವು ಮಾಡಿದುದನ್ನು ನೋಡಿ.

ಇದು ಒಂದು ಸಮಮಿತಿಯ ವಿನ್ಯಾಸವೇ?

ವಿನ್ಯಾಸವು ಎರಡು ಸಮ ಅರ್ಧಗಳಾಗುವಂತೆ ನೀವು ಗೆರೆಯನ್ನು ಎಲ್ಲಿ ಎಳೆಯುವಿರಿ?




ಈ ಗೆರೆಯನ್ನು ಸಮಮಿತಿಯ ರೇಖೆ ಎಂದು ಕರೆಯುವುದಿಲ್ಲವೆ? ನಾನು ಇದನ್ನು 3ನೇ ತರಗತಿಯಲ್ಲಿ ಮುಖವಾಡಗಳು ಮತ್ತು ರಂಗೋಲಿಗಳನ್ನು ಮಾಡುವಾಗ ಮಾಡಿದ್ದೇನೆ.


@KTBS NOT TO BE REPUBLISHED

2. ಪೇಪರ್ ವಿಮಾನವನ್ನು ಮಾಡುವುದು

ಮುಂದಿನ ಹಂತಗಳನ್ನು ಅನುಸರಿಸಿ.



© NCERT NOT TO BE REPUBLISHED



a) ಚಿತ್ರ 3, ಚಿತ್ರ 4 ಮತ್ತು ಚಿತ್ರ 5 ರಲ್ಲಿ ಸಮಮಿತಿಯ ರೇಖೆಗಳನ್ನು ಗುರ್ತಿಸಿ.

b) ಚಿತ್ರ 8 ರಲ್ಲಿ ಎಷ್ಟು ಸಮಮಿತಿಯ ರೇಖೆಗಳನ್ನು ನೀವು ಗಮನಿಸುವಿರಿ?

c) ಚಿತ್ರ 8 ರ ಬಲಭಾಗದ ಅರ್ಧದ ಪ್ರತಿಬಿಂಬವನ್ನು ನೋಡಲು ಕನ್ನಡಿಯನ್ನು ಎಲ್ಲಿ ಇರಿಸುವಿರಿ? ಅದು ಎಡಭಾಗದ ಅರ್ಧದಂತೆಯೇ ಕಾಣುತ್ತದೆಯೇ?

d) ವಿಮಾನವನ್ನು ಹಾರಿಸಿ.

e) ಸಮಮಿತಿಯ ರೇಖೆ ಇಲ್ಲದಿದ್ದಲ್ಲಿ ವಿಮಾನ ಹಾರುವುದೇ?


f) ಅಸಮಮಿತಿಯ ವಿಮಾನವನ್ನು ಮಾಡಲು ಪ್ರಯತ್ನಿಸಿ.


g) ಎರಡೂ ವಿಮಾನಗಳನ್ನು ಹಾರಿಸಿ ಮತ್ತು ಯಾವುದು ಹೆಚ್ಚು ಸಮಯ ಹಾರುತ್ತದೆ ಎಂಬುದನ್ನು ಗಮನಿಸಿ.

h) ನಿಮ್ಮ ವೀಕ್ಷಣೆಗಳನ್ನು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ.

3. ರಂಧ್ರಗಳು ಮತ್ತು ಕಟ್‌ಗಳು (ಕತ್ತರಿಸವುದು)


ಕಾಗದವನ್ನು ಮಡಚುವುದು ಮತ್ತು ಕತ್ತರಿಸುವುದರ ಮೂಲಕ ಮಿನಿ ಈ ವಿನ್ಯಾಸವನ್ನು ಮಾಡಿದ್ದಾಳೆ.







ಈಗ ನಿಮ್ಮ ಸರದಿ! ಒಂದು ಚೌಕಾಕಾರದ ಕಾಗದವನ್ನು ತೆಗೆದುಕೊಳ್ಳಿ. ಮುಂದೆ ನೀಡಿರುವ ಸೂಚನೆಗಳಂತೆ ಮಾಡಿ.

ರಾಣಿ ಏನು ಮಾಡುತ್ತಿದ್ದಾಳೆ ನೋಡೋಣ. ರಾಣಿ ಒಂದು ಕಾಗದದ ತುಂಡನ್ನು ತೆಗೆದುಕೊಂಡು ಅದನ್ನು ಎರಡು ಬಾರಿ ಮಡಚಿದ್ದಾಳೆ.







ಚಿತ್ರದಲ್ಲಿ ತೋರಿಸಿರುವಂತೆ ಅವಳು ಮೂಲೆಯಲ್ಲಿ ನೇರವಾಗಿ ಕತ್ತರಿಸಿದ್ದಾಳೆ ಮತ್ತು ಎರಡು ಬದಿಗಳಲ್ಲಿ ಎರಡು ಚೌಕಗಳನ್ನು ಕತ್ತರಿಸಿದ್ದಾಳೆ.



ಸವಾಲು 1: ಕಾಗದವನ್ನು ತೆರೆದಾಗ ಕತ್ತರಿಸಿರುವುದು ಮತ್ತು ರಂಧ್ರ ಎಲ್ಲಿ ಕಾಣುತ್ತದೆ?



ಸವಾಲು 2: ಕಾಗದವನ್ನು ಒಮ್ಮೆ ಮಡಚಿ; ಮಧ್ಯದಲ್ಲಿ ಎರಡು ಕಟ್‌ಗಳನ್ನು ಚಿತ್ರದಲ್ಲಿ ತೋರಿಸಿರುವಂತೆ ಮಾಡಿ. ನೀವು ಮಡಚಿದ ಕಾಗದವನ್ನು ತೆರೆದಾಗ ಈ ಆಕೃತಿಗೆ ಎಷ್ಟು ಬಾಹುಗಳಿರುತ್ತವೆ?




ಸವಾಲು 3: ಕಾಗದವನ್ನು ಎರಡು ಬಾರಿ ಮಡಚಿ. ಕಾಗದದ ಮಧ್ಯಭಾಗದಲ್ಲಿ ಚೌಕಾಕಾರದ ರಂಧ್ರವನ್ನು ಮಾಡಲು ನೀವು ಎಲ್ಲಿ ಕತ್ತರಿಸುವಿರಿ? ಎಷ್ಟು ಬಾರಿ ಕತ್ತರಿಸಬೇಕಾಗುತ್ತದೆ?



@KTBS NOT TO BE REPUBLISHED


4. ಮುಂದಿನ ವಿನ್ಯಾಸಗಳನ್ನು ಪೂರ್ಣಗೊಳಿಸಿ.





ನಾವು ಮಾಡೋಣ

ಆಕಾರಗಳಲ್ಲಿ ಸಮಮಿತಿ

1. ಅಂಚಿನ ಉದ್ದಕ್ಕೂ ನೀಡಿರುವ ಆಕೃತಿಗಳನ್ನು ಗಮನಿಸಿ. ಚುಕ್ಕೆ ಗ್ರಿಡ್‌ನಲ್ಲಿ ಈ ಆಕೃತಿಗಳನ್ನು ರಚಿಸಿ. ಯಾವ ಆಕೃತಿಗಳು ಸಮಮಿತೀಯವಾಗಿವೆ? ಸಮಮಿತಿಯ ರೇಖೆಗಳನ್ನು ಎಳೆಯಿರಿ.












@KTBS NOT TO BE REPUBLISHED


2. ಕನ್ನಡಿಯೊಂದಿಗೆ ಆಟಗಳು

a) ಮುಂದಿನ ಆಕಾರಗಳನ್ನು ಪಡೆಯಲು ಆಕಾರ A ನಲ್ಲಿ ಕನ್ನಡಿಯನ್ನು ಎಲ್ಲಿ ಇರಿಸಬೇಕು?





b) ಸಂಖ್ಯೆಯಂತೆಯೇ ಕನ್ನಡಿ ಬಿಂಬಗಳನ್ನು ಹೊಂದಿರುವ ಸಂಖ್ಯೆಗಳಿಗೆ ವೃತ್ತವನ್ನು ಹಾಕಿ.



@KTBS
NOT TO BE REPUBLISHED


0 ಯಿಂದ 9 ರವರೆಗಿನ ಯಾವ ಅಂಕಿಗಳು ಅದೇ ರೀತಿಯ ಕನ್ನಡಿ ಬಿಂಬವನ್ನು ಹೊಂದಿವೆ?

_____

ಸಂಖ್ಯೆಯಂತೆಯೇ ಕನ್ನಡಿ ಬಿಂಬಗಳಿರುವಂತೆ ಕೆಲವು 4–ಅಂಕಿಯ ಸಂಖ್ಯೆಗಳನ್ನು ಮಾಡಿ. ಪ್ರತಿ ಸಂದರ್ಭದಲ್ಲಿ ಕನ್ನಡಿಯನ್ನು ಎಲ್ಲಿ ಇರಿಸುವಿರಿ? ಅಂತಹ ಎಷ್ಟು ಸಂಖ್ಯೆಗಳನ್ನು ನೀವು ಮಾಡಬಹುದು?

_____

_____




c) ಅಂತಹುದೇ ಪ್ರಶ್ನೆಗಳನ್ನು ಮಾಡಿ, ನಿಮ್ಮ ಸ್ನೇಹಿತರಿಗೆ ಸಂಖ್ಯೆಗಳನ್ನು ಊಹಿಸಲು ತಿಳಿಸಿ.

3. ಆಂಬುಲೆನ್ಸ್ ಮೇಲೆ ಬರೆದಿರುವ ಅಕ್ಷರಗಳ ಬಗ್ಗೆ ನೀವೇನು ಗಮನಿಸುವಿರಿ? ಅವುಗಳನ್ನು ಈ ರೀತಿ ಏಕೆ ಬರೆಯಲಾಗಿದೆ? ಚರ್ಚಿಸಿ.



CAT






ಮುಂದಿನ ಅಕ್ಷರಗಳನ್ನು ಗುರ್ತಿಸಬಲ್ಲರಾ? ಮುಂದಿನ ಪದಗಳನ್ನು ಸರಿಯಾಗಿ ಓದಲು ಕನ್ನಡಿಯನ್ನು ಎಲ್ಲಿ ಇಡುವಿರಿ?

ϤAT CAN WOW HEN

ಈಗ, ಈ ರೀತಿ ಕೆಲವು ಪದಗಳು / ಹೆಸರುಗಳನ್ನು ಬರೆಯಲು ಪ್ರಯತ್ನಿಸಿ ಮತ್ತು ಅವುಗಳನ್ನು ಊಹಿಸಲು ನಿಮ್ಮ ಸ್ನೇಹಿತರಿಗೆ ಸವಾಲು ನೀಡಿ.


ನಿಮ್ಮದೇ ಭಾಷೆಯ ಲಿಪಿಯೊಂದಿಗೆ ನೀವು ಇದನ್ನು ಮಾಡಲು ಪ್ರಯತ್ನಿಸಬಹುದೇ?

4. ಸಮಮಿತಿ ಆಕಾರಗಳು ಉಂಟಾಗುವಂತೆ ಮುಂದಿನವುಗಳನ್ನು ಪೂರ್ಣಗೊಳಿಸಿ.




@KTBS NOT TO BE REPUBLISHED


5. ಆಕೃತಿಗಳನ್ನು ಗಮನಿಸಿ. ಪ್ರತಿ ಆಕೃತಿಯು ಎಷ್ಟು ಬಾಹುಗಳನ್ನು ಹೊಂದಿದೆ?
ಪ್ರತಿ ಆಕೃತಿಯಲ್ಲಿ ಎಷ್ಟು ಸಮಮಿತಿಯ ರೇಖೆಗಳಿವೆ? ನೀವು ಈ ಆಕೃತಿಗಳನ್ನು ಟ್ರೇಸ್ ಮಾಡಿ ಮತ್ತು ಆಕೃತಿಗಳನ್ನು ಮಡಚುವುದರಿಂದ ಸಮಮಿತಿಯ ರೇಖೆಗಳನ್ನು ಪರಿಶೀಲಿಸಬಹುದು.



ಟೈಲ್ಸ್ ಹಾಸುವುದು

ಟೈಲ್‌ಗಳೊಂದಿಗಿನ ಕೆಲವು ವಿನ್ಯಾಸಗಳು ಇಲ್ಲಿವೆ. ಪುನರಾವರ್ತನೆಯಾಗುತ್ತಿರುವ ಘಟಕ (ಟೈಲ್)ವನ್ನು ಗುರ್ತಿಸಿ ಮತ್ತು ವಿನ್ಯಾಸವನ್ನು ಮುಂದುವರೆಸಿ.






@KTBS NOT TO BE REPUBLISHED


ಶಿಕ್ಷಕರಿಗೆ ಟಿಪ್ಪಣಿ: ಕೇವಲ ಸ್ಥಾನ ಮತ್ತು ಬಣ್ಣವನ್ನು ಬದಲಾಯಿಸುವುದರಿಂದ ವಿಭಿನ್ನ ಟೈಲ್‌ಗಳನ್ನು ಸೃಜಿಸಬಹುದು ಎಂಬುದನ್ನು ವಿದ್ಯಾರ್ಥಿಗಳು ಮನದಟ್ಟು ಮಾಡಿಕೊಳ್ಳಲಿ. ಇಲ್ಲಿ ವಿದ್ಯಾರ್ಥಿಗಳು ಬೇರೆ ಬೇರೆ ಪುನರಾವರ್ತಿತವಾಗುತ್ತಿರುವ ಘಟಕಗಳನ್ನು ಟೈಲ್‌ಗಳೆಂದು ಗುರ್ತಿಸಬಹುದು. ವಿದ್ಯಾರ್ಥಿಗಳು ಜಾರುವುದು, ಮಗುಚುವುದು, ತಿರುಗುವುದು, ನಿಲ್ಲುವುದು, ಮಲಗುವುದು ಇತ್ಯಾದಿ ಪದಗಳನ್ನು ಬಳಸಲಿ. ವಿದ್ಯಾರ್ಥಿಗಳು 8 ಆಯತಗಳ ಒಂದು ಗುಂಪು ಪುನರಾವರ್ತಿತವಾಗುತ್ತಿರುವುದನ್ನು ಸಹ ಗಮನಿಸಬಹುದು.



ಟೈಲ್ ಅಂಗಡಿಯಲ್ಲಿನ ಟೈಲ್ಸ್


ಬಾಬ್ಲು ಚಾಚ, ಮುಂದೆ ತೋರಿಸಿರುವಂತೆ ವಿಧವಿಧವಾದ ಸುಂದರವಾದ ಟೈಲ್‌ಗಳನ್ನು ಮಾಡುತ್ತಾರೆ. ಮುಂದೆ ಕೊಟ್ಟಿರುವ ಸ್ಥಳದಲ್ಲಿ ನಿಮ್ಮದೇ ಆದ ಕ್ರಿಯಾಶೀಲ ಟೈಲ್‌ಗಳ ವಿನ್ಯಾಸಗಳನ್ನು ಮಾಡಿ. ನೀವು ರಂಗೊಮೆಟ್ರಿ ಕಿಟ್ ಅಥವಾ ಆಕಾರಗಳ ಕತ್ತರಿಸಿದ ತುಂಡುಗಳನ್ನು ಉಪಯೋಗಿಸಬಹುದು.





@KTBS NOT TO BE REPUBLISHED


1. ಈ ಟೈಲ್‌ಗಳನ್ನು ಮಾಡಲು ನೀವು ಯಾವ ಆಕಾರಗಳನ್ನು ಉಪಯೋಗಿಸಿರುವಿರಿ?
2. ಯಾವ ಟೈಲ್‌ಗಳು ಸಮಮಿತಿಯನ್ನು ಹೊಂದಿವೆ? ಸಮಮಿತಿಯ ರೇಖೆಗಳನ್ನು (ಇದ್ದಲ್ಲಿ) ಎಳೆಯಿರಿ.
3. ಎರಡು ಅಥವಾ ಹೆಚ್ಚಿನ ಆಕಾರಗಳನ್ನು ಜೋಡಿಸುವುದರಿಂದ ಇನ್ನೂ ಹೆಚ್ಚಿನ ಟೈಲ್‌ಗಳನ್ನು ಮಾಡಿ. ಪಥಗಳನ್ನು ಸೃಜಿಸಲು ಅವುಗಳನ್ನು ಖಾಲಿ ಜಾಗಗಳಿಲ್ಲದೆ ಅಥವಾ ಒಂದರ ಮೇಲೊಂದು ಬರದಂತೆ ನಿಮ್ಮ ನೋಟ್ ಪುಸ್ತಕದಲ್ಲಿ ಟ್ರೇಸ್ ಮಾಡಿ.
4. ಮುಂದಿನ ಆಕೃತಿಗಳನ್ನು ಗಮನಿಸಿ. ಏನನ್ನು ಗಮನಿಸಿದಿರಿ? ಚರ್ಚಿಸಿ.



ನಾವು ಮಾಡೋಣ

1. ನಿಮ್ಮ ಟೈಲ್‌ನಿಂದ ನೆಲ ವಿನ್ಯಾಸಗಳನ್ನು ಮಾಡಿ. ಮಿನಿ ಮುಂದೆ ತೋರಿಸಿರುವಂತೆ ನೆಲ ವಿನ್ಯಾಸವನ್ನು ಮಾಡಿದ್ದಾಳೆ.
   ಒಂದರ ಮೇಲೊಂದು ಬರಬಾರದು ಮತ್ತು ಖಾಲಿ ಜಾಗಗಳಿರಬಾರದು ಎಂಬುದನ್ನು ನೆನಪಿನಲ್ಲಿಡಿ.






@KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: ಎರಡು ವಿನ್ಯಾಸಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ. ಉದಾಹರಣೆಗೆ, ಎಷ್ಟು ಆಕಾರಗಳನ್ನು ಉಪಯೋಗಿಸಲಾಗಿದೆ, ಒಂದೇ ಒಂದು ಬಣ್ಣವನ್ನು ಉಪಯೋಗಿಸಿದರೆ ವಿನ್ಯಾಸವು ಅದೇ ರೀತಿ ಕಾಣುತ್ತದೆಯೇ? ಬೇರೆ ಬೇರೆ ಬಣ್ಣದ ಅದೇ ಆಕಾರಗಳಿಂದ ವಿಭಿನ್ನ ವಿನ್ಯಾಸಗಳನ್ನು ಸೃಜಿಸಲು ಮಕ್ಕಳನ್ನು ಪ್ರೋತ್ಸಾಹಿಸಿ.




2. ಬೆಕ್ಕಿನ ಗೋಡೆಯನ್ನು ಮಾಡುವುದು!


ಹಂತ 1: ಚೌಕಾಕಾರದ ಹಾಳೆಯನ್ನು ತೆಗೆದುಕೊಳ್ಳಿ. ಬೆಕ್ಕಿನ ತಲೆ ಮತ್ತು ಕಿವಿಗಳನ್ನು ಮಾಡಲು ಮುಂದೆ ತೋರಿಸಿರುವಂತೆ ಗುರುತು ಮಾಡಿ.




ಹಂತ 2: ಈಗ ಹೊರಗಿನ ಗೆರೆಯ ಉದ್ದಕ್ಕೂ ಕತ್ತರಿಸಿ. ಮೇಲಿನ ಭಾಗವನ್ನು, ದೊಡ್ಡ ಭಾಗದೊಂದಿಗೆ ಹೊಂದಿಕೊಳ್ಳುವಂತೆ ಕೆಳಗೆ ಸರಿಸಿ.



ಹಂತ 3: ಭಾಗಗಳನ್ನು ಟೇಪ್ ಬಳಸಿ ಅಂಟಿಸಿ.




ಹಂತ 4: ಈಗ ನಿಜವಾದ ಮಜ ಆರಂಭವಾಗುತ್ತದೆ! ಬೆಕ್ಕಿನ ವಿನ್ಯಾಸದ ಹೊರ ಗೆರೆಯನ್ನು ಒಂದು ದೊಡ್ಡ ಕಾಗದದ ಮೇಲೆ ಟ್ರೇಸ್ ಮಾಡಿ, ಅದರ ಮುಖವನ್ನು ಮಾಡಿ.




@KTBS NOT TO BE REPUBLISHED

ನಿಮ್ಮ ಗೋಡೆ ಸಿದ್ಧವಾಯಿತು.




ಇಂತಹ ಇನ್ನೂ ಹೆಚ್ಚಿನ ಟೈಲ್‌ಗಳನ್ನು ಸೃಜಿಸಿ. ಕ್ರಿಯಾಶೀಲ ಗೋಡೆಯ ವಿನ್ಯಾಸಗಳನ್ನು ಮಾಡಲು ಕೆಲವನ್ನು ಮುಂದೆ ಕೊಟ್ಟಿದೆ.



ಇದು ವಿನೋದವಾಗಿದೆಯಲ್ಲವೆ? ಕೇವಲ ಕತ್ತರಿಸಿ, ಸರಿಸಿ ಮತ್ತು ಅಂಟಿಸಿ. ಒಂದು ಸೃಜನಾತ್ಮಕ ಗೋಡೆಯನ್ನು ಮಾಡಲು ನಿಮ್ಮ ಟೈಲ್ ಸಿದ್ಧವಾಯಿತು.



3. ಪ್ರಕೃತಿಯಲ್ಲಿ ನಡಿಗೆ ಹೋಗೋಣ (ಯೋಜನಾ ಸಮಯ)



ನಿಮ್ಮ ಶಿಕ್ಷಕರು ಅಥವಾ ಪೋಷಕರೊಂದಿಗೆ ನಿಮಗೆ ಹತ್ತಿರವಿರುವ ಒಂದು ಪಾರ್ಕ್ ಅಥವಾ ಶಾಲೆಯ ಸುತ್ತಲೂ ಪ್ರಕೃತಿಯಲ್ಲಿ ಒಂದು ನಡಿಗೆ ಹೋಗಿ. ನಿಮ್ಮ ಸುತ್ತಲೂ ಕಾಣುವ ವಿನ್ಯಾಸಗಳು. ರಚನೆಗಳು ಅಥವಾ ಸಮಮಿತಿಗಳನ್ನು ಸೂಕ್ಷ್ಮವಾಗಿ ಗಮನಿಸಿ. ನೆಲದ ಮೇಲೆ ಬಿದ್ದಿರುವ ಎಲೆಗಳು, ದಳಗಳು ಮತ್ತು ಹೂಗಳನ್ನು ಸಂಗ್ರಹಿಸಿ.

ನಿಮ್ಮ ಯೋಜನಾ ಕಾರ್ಯದ ಕಡತದಲ್ಲಿ:

- ಎಲೆಗಳನ್ನು ಸಮಮಿತಿ ಇರುವ ಸಮಮಿತಿ ಇಲ್ಲದವುಗಳಾಗಿ ವರ್ಗೀಕರಿಸಿ.
- ಎಲೆಗಳು ಮತ್ತು ಹೂಗಳಿಂದ ವಿವಿಧ ರಚನೆಗಳು ಮತ್ತು ವಿನ್ಯಾಸಗಳನ್ನು ಮಾಡಿ.
- ಎಲೆಗಳು ಅಥವಾ ಒಣಗಿದ ಹೂಗಳ ವಿವಿಧ ಗುರುತುಗಳಿಂದ ಒಂದು ಗ್ರೀಟಿಂಗ್ ಕಾರ್ಡ್ ಮಾಡಿ.
- ಎಲೆಗಳು ಮತ್ತು ಹೂಗಳನ್ನು ಉಪಯೋಗಿಸಿ ಪ್ರಾಣಿಗಳು ಅಥವಾ ವಿನ್ಯಾಸಗಳನ್ನು ಸೃಜಿಸಿ.

© NCERT NOT TO BE REPUBLISHED

ಅಧ್ಯಾಯ
12

ಟಕ್‌ಟಕ್ ಗಡಿಯಾರ ಮತ್ತು ಕ್ಯಾಲೆಂಡರ್

Z6W2T8



ಪರ್ವ್ ಅವನ ಸ್ನೇಹಿತರೊಂದಿಗೆ ತನ್ನ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದಾನೆ. ನಾವು ಅವರೊಂದಿಗೆ ಸೇರೋಣ.



ನಾನು ಫೆಬ್ರವರಿ 29, 2016 ರಂದು ಜನಿಸಿದ್ದೇನೆ. 29 ಫೆಬ್ರವರಿ ದಿನಾಂಕವಿರುವ ವರ್ಷಗಳನ್ನು ಅಧಿಕ ವರ್ಷಗಳು ಎಂದು ಕರೆಯಲಾಗುತ್ತದೆ. ಅಂತಹ ವರ್ಷಗಳಲ್ಲಿ ಒಂದು ದಿನ ಹೆಚ್ಚಾಗಿ ಇರುತ್ತದೆ. ಅದು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಬರುತ್ತದೆ.

@KTBS NOT TO BE REPUBLISHED

ನಾವು ಮಾಡೋಣ

1. 2024 ಮತ್ತು 2025ರ ಫೆಬ್ರವರಿ ತಿಂಗಳಲ್ಲಿ ದಿನಗಳ ಸಂಖ್ಯೆಯನ್ನು ಗಮನಿಸಿ.

ಫೆಬ್ರವರಿ 2024						
ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29		

ಫೆಬ್ರವರಿ 2025						
ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
						1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	

ಫೆಬ್ರವರಿ 2024ರಲ್ಲಿರುವ ದಿನಗಳ ಸಂಖ್ಯೆ = _____

ಫೆಬ್ರವರಿ 2025ರಲ್ಲಿರುವ ದಿನಗಳ ಸಂಖ್ಯೆ = _____

2. 2024ರ ಹಿಂದಿನ ಮತ್ತು ಮುಂದಿನ ಕ್ರಮಾನುಗತ ಅಧಿಕ ವರ್ಷಗಳನ್ನು ಖಾಲಿ ಬಿಟ್ಟ ಸ್ಥಳಗಳಲ್ಲಿ ತುಂಬಿ.

_____, _____, 2024, _____, _____, _____

3. ನಮಗೆ ತಿಳಿದಿರುವಂತೆ ಬಹುತೇಕ ವರ್ಷಗಳಲ್ಲಿ 365 ದಿನಗಳಿರುತ್ತವೆ. ಅಧಿಕ ವರ್ಷದಲ್ಲಿ ಎಷ್ಟು ದಿನಗಳಿರುತ್ತವೆ?

4. ನೀವು ನಿಮ್ಮ ಅಚ್ಚು ಮೆಚ್ಚಿನ ಹಬ್ಬಗಳನ್ನು ಆಚರಿಸುವ ತಿಂಗಳ ಹೆಸರುಗಳನ್ನು ಬರೆಯಿರಿ.

ಹಬ್ಬದ ಹೆಸರು	ತಿಂಗಳ ಹೆಸರು

5. ಮುಂದಿನ ಪ್ರಶ್ನೆಗಳಿಗೆ ವಾರದ ಸರಿಯಾದ ದಿನಗಳನ್ನು ಬರೆಯುವ ಮೂಲಕ ಉತ್ತರಿಸಿ.

a) ಈ ದಿನ: _____

b) ನಿನ್ನೆ: _____

c) ನಾಳೆ: _____

d) ನಾಳಿದ್ದು: _____

e) ಮೊನ್ನೆ: _____

6. ಜುಲೈ 1 ಸೋಮವಾರವಾಗಿದೆ. ಮುಂದಿನ ಎರಡು ಸೋಮವಾರಗಳ ದಿನಾಂಕಗಳನ್ನು ಬರೆಯಿರಿ.

_____

7. ಲಾಲಿ ದಿನಾಂಕ 04/07/2014 ರಂದು ಹಾಗೂ ಚೋಟು 04/12/2019 ರಂದು ಜನಿಸಿದ್ದಾರೆ. ಇಬ್ಬರಲ್ಲಿ ಯಾರು ಹಿರಿಯರು ಮತ್ತು ಎಷ್ಟು ವರ್ಷ?

_____ ರಂದು ಲಾಲಿ 5 ವರ್ಷದವಳಾಗುವಳು.

_____ ರಂದು ಚೋಟುನ 10ನೇ ವರ್ಷದ ಹುಟ್ಟು ಹಬ್ಬವನ್ನು ಆಚರಿಸಲಾಗುವುದು.

8. ಒಂದು ಬಿಸ್ಕತ್ ಪೊಟ್ಟಣದ ಮೇಲಿನ ಉತ್ಪಾದಿಸಿದ ದಿನಾಂಕ ಮತ್ತು ಅವಧಿ ಮುಗಿಯುವ ದಿನಾಂಕಗಳನ್ನು ಪರಿಶೀಲಿಸಿ.

a) ಬಿಸ್ಕತ್ ಪೊಟ್ಟಣ ಎಷ್ಟು ಹಳೆಯದು?

ಉತ್ತರ: ____ ತಿಂಗಳು ____ ದಿನಗಳು

ನಿಮಗಿದು ತಿಳಿದಿದೆಯೆ?

ದಿನಾಂಕ 04/07/2024 ದಿನಾಂಕ/ತಿಂಗಳು/ವರ್ಷದ ರೂಪದಲ್ಲಿದೆ. ಇದನ್ನು 4ನೇ ಜುಲೈ 2024 ಅಥವಾ ಜುಲೈ 4, 2024 ಎಂದು ಓದಲಾಗುತ್ತದೆ.

@KTBS NOT TO BE REPUBLISHED

b) ಬಿಸ್ಕತ್ತುಗಳು ಎಷ್ಟು ದಿನಗಳವರೆಗೆ ತಿನ್ನಲು ಸುರಕ್ಷಿತವಾಗಿರುತ್ತವೆ?

ಉತ್ತರ: _____ ತಿಂಗಳು _____ ದಿನಗಳು

9. ನಿಮ್ಮ ಕ್ಯಾಲೆಂಡರ್‌ನಲ್ಲಿ ಜುಲೈ 15 ಬರುವ ದಿನಾಂಕವನ್ನು ಗಮನಿಸಿ. ಈಗ ಆಗಸ್ಟ್ 15 ಯಾವ ದಿನ ಕಂಡುಹಿಡಿಯಿರಿ. ಸೆಪ್ಟೆಂಬರ್ 15? ಅಕ್ಟೋಬರ್ 15? ಯಾವ ದಿನಗಳೆಂದು ಕಂಡುಹಿಡಿಯಿರಿ. ಇದರಲ್ಲಿ ನೀವು ಯಾವ ವಿನ್ಯಾಸವನ್ನು ಗಮನಿಸುವಿರಿ? ತರಗತಿಯಲ್ಲಿ ಹಂಚಿಕೊಳ್ಳಿ.
ಈಗ ಒಂದು ದಿನಾಂಕವನ್ನು ಆಯ್ಕೆ ಮಾಡಿ ಮತ್ತು ಅದು ಯಾವ ದಿನ ಬರುತ್ತದೆ ಎಂದು ನೋಡಿ. ಅದೇ ದಿನಾಂಕವು ಮುಂದಿನ ತಿಂಗಳು ಯಾವ ದಿನ ಬರುತ್ತದೆ ಎಂದು ಊಹಿಸಲು ನಿಮ್ಮ ಸ್ನೇಹಿತರಿಗೆ ಸವಾಲು ಹಾಕಿ.

ನಾವು ಅನ್ವೇಷಿಸೋಣ

ನಿಮ್ಮ ಪೋಷಕರು ಮತ್ತು ಶಿಕ್ಷಕರ ಸಹಾಯದಿಂದ ಹಿಂದೂ / ಇಸ್ಲಾಮಿಕ್ / ಸಿಖ್ ಅಥವಾ ಯಾವುದೇ ಇತರೆ ಸಮುದಾಯದ ಕ್ಯಾಲೆಂಡರ್‌ನಲ್ಲಿರುವ ತಿಂಗಳ ಹೆಸರುಗಳನ್ನು ಅನ್ವೇಷಿಸಿ.

1. ಈ ಕ್ಯಾಲೆಂಡರ್‌ಗಳಲ್ಲಿ ವರ್ಷವು ಯಾವಾಗ ಆರಂಭವಾಗುತ್ತದೆ ಎಂಬುದನ್ನು ಕಂಡುಹಿಡಿಯಿರಿ.
2. ಈ ಕ್ಯಾಲೆಂಡರ್‌ಗಳಲ್ಲಿನ ತಿಂಗಳ ಹೆಸರುಗಳು ಇಂಗ್ಲೀಷ್ ಕ್ಯಾಲೆಂಡರ್ ತಿಂಗಳುಗಳಿಗೆ ಹೇಗೆ ಹೊಂದಿಕೊಳ್ಳುತ್ತವೆ ಎಂದು ಪರಿಶೀಲಿಸಿ.
3. ಹಿಂದೂ / ಇಸ್ಲಾಮಿಕ್ / ಸಿಖ್ ಅಥವಾ ಇತರೆ ಕ್ಯಾಲೆಂಡರ್‌ನಲ್ಲಿ ಸಮುದಾಯದ ಕೆಲವು ಪ್ರಮುಖ ಹಬ್ಬಗಳು ಬರುವ ತಿಂಗಳುಗಳನ್ನು ಗುರುತಿಸಿ.
4. ನಿಮ್ಮ ಸಮುದಾಯದ ಕ್ಯಾಲೆಂಡರ್‌ನಲ್ಲಿ ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಾಂಕಗಳನ್ನು ಗುರ್ತಿಸಿ. ಯಾವುದೇ ವಿನ್ಯಾಸವನ್ನು ಗಮನಿಸಿದಿರಾ?
5. ನಿಮ್ಮ ಸಮುದಾಯದ ಕ್ಯಾಲೆಂಡರ್‌ನಲ್ಲಿ ಹುಣ್ಣಿಮೆ ಅಥವಾ ಅಮಾವಾಸ್ಯೆ ದಿನಗಳಿಗೆ ಯಾವ ಹೆಸರುಗಳನ್ನು ಇಡಲಾಗಿದೆ?


ಶಿಕ್ಷಕರಿಗೆ ಟಿಪ್ಪಣಿ: ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಸ್ತುಗಳ ರಾಪರ್‌ಗಳನ್ನು ಸಂಗ್ರಹಿಸಲು ಹಾಗೂ ಅವುಗಳ ಅವಧಿ ಮುಗಿಯುವ ದಿನಾಂಕಗಳ ಪಟ್ಟಿಯನ್ನು ತಯಾರಿಸಲು ಹೇಳುವುದು.



ಒಂದು ದಿನದಲ್ಲಿ ಎಷ್ಟು ಗಂಟೆಗಳಿವೆ?

ಮುಂದಿನ ಚಿತ್ರವನ್ನು ನೋಡಿ. ಇದು ಒಬ್ಬ ಡಾಕ್ಟರ್ ವಿಭಿನ್ನ ಚಟುವಟಿಕೆಗಳಿಗೆ ವಿನಿಯೋಗಿಸಿದ ಸಮಯವನ್ನು ತೋರಿಸುತ್ತದೆ. ಪ್ರತಿ ಚಟುವಟಿಕೆಗೆ ತೆಗೆದುಕೊಂಡ ಗಂಟೆಗಳ ಸಂಖ್ಯೆಯನ್ನು ನೀಡಲಾದ ಸ್ಥಳಗಳಲ್ಲಿ ಬರೆಯಿರಿ. ನಂತರ ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮತ್ತು ಮುಂದಿನ ದಿನದ ಬೆಳಿಗ್ಗೆ 6 ಗಂಟೆಯವರೆಗೆ ಒಟ್ಟು ಗಂಟೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

© KTBS NOT TO BE REPUBLISHED



ಒಟ್ಟು ಗಂಟೆಗಳು _____.

ಶಿಕ್ಷಕರಿಗೆ ಟಿಪ್ಪಣಿ: ಮೇಲಿನ ಚಿತ್ರದಲ್ಲಿ ನೀಡಿರುವ ಚಟುವಟಿಕೆಗಳ ಅವಧಿಯನ್ನು ಮಕ್ಕಳು ಎಣಿಸಲು ಸಹಾಯಮಾಡಿ ಮತ್ತು ಒಂದು ದಿನದ ಒಟ್ಟು ಗಂಟೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.





© KSSB PUBLISHED NOT TO BE REPUBLISHED

ಎರಡೂ ಚಿತ್ರಗಳಲ್ಲಿ ನಾವು ಗಡಿಯಾರದ ಸಮಯ 8:00 ಎಂದು ನೋಡುತ್ತೇವೆ. ಆದರೆ ಒಂದು ಬೆಳಿಗ್ಗೆ ಹಾಗೂ ಮತ್ತೊಂದು ರಾತ್ರಿ ಸಮಯ. ಈ ವ್ಯತ್ಯಾಸವನ್ನು ತೋರಿಸಲು ನಾವು AM ಮತ್ತು PM ನ್ನು ಸೇರಿಸುತ್ತೇವೆ.

8:00 AM

8:00 PM

ಡಿಜಿಟಲ್ ಗಡಿಯಾರಗಳು ನಮಗೆ ಸಮಯವನ್ನು ಹೆಚ್ಚು ಸ್ಪಷ್ಟವಾಗಿ ಓದಲು ಸಹಾಯಕವಾಗಿವೆ.





ಮುಂದಿನ ಪಟ್ಟಿಯನ್ನು ಓದಿ ನಾವು AM/PM ಮತ್ತು ಡಿಜಿಟಲ್ ಗಡಿಯಾರವನ್ನು ಬಳಸಿಕೊಂಡು ಸಮಯವನ್ನು ಹೇಗೆ ಓದುತ್ತೇವೆ ಹಾಗೂ ಬರೆಯುತ್ತೇವೆ ಎಂದು ನೋಡಿ. ಈ ಎರಡು ವಿಭಿನ್ನ ವಿಧಾನಗಳ ಬಗ್ಗೆ ನೀವು ಗಮನಿಸುವುದನ್ನು ಚರ್ಚಿಸಿ.

© KSCERT NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: ಮಕ್ಕಳಿಗೆ AM ಮತ್ತು PM ನಡುವಿನ ವ್ಯತ್ಯಾಸವನ್ನು ಗ್ರಹಿಸಲು ಸಹಾಯಮಾಡಿ ಹಾಗೂ ಇದು ಜನರಿಗೆ ಸಮಯದ ಬಗೆಗಿನ ಸಂವಹನವನ್ನು ಹೇಗೆ ಸುಲಭಗೊಳಿಸುತ್ತದೆ ಎಂಬುದನ್ನು ವಿವರಿಸಿ. ಮಕ್ಕಳ ದಿನನಿತ್ಯದ ಅನುಭವಗಳನ್ನು ಕೇಳಿ ಮತ್ತು ಅವನ್ನು AM ಮತ್ತು PM ಗೆ ಸಂಬಂಧಿಸಿ. 24 ಗಂಟೆಗಳ ಗಡಿಯಾರದೆಡೆಗೆ ಅವರ ಗಮನ ಸೆಳೆದು ಅದು ಸಮಯವನ್ನು ಹೇಗೆ ತೋರಿಸುತ್ತದೆ ಎಂಬುದನ್ನು ತಿಳಿಸಿ ಹಾಗೂ ಮಕ್ಕಳು ಅದನ್ನು ಓದಲು ಮತ್ತು ಬರೆಯಲು ಅಭ್ಯಾಸ ಮಾಡುವಂತೆ ಮಾಡಿ.



ಸೂಕ್ತ ರೀತಿಯಲ್ಲಿ ಸಮಯವನ್ನು ಬರೆದು ಖಾಲಿ ಜಾಗಗಳನ್ನು ತುಂಬಿ.

AM/PM ಗಳಲ್ಲಿ ಸಮಯ 	ಡಿಜಿಟಲ್ ಗಡಿಯಾರದಲ್ಲಿ ಸಮಯ 
12:00 AM	00:00 ಗಂಟೆಗಳು
1:00 AM	1:00 ಗಂಟೆಗಳು
3:00 AM	3:00 ಗಂಟೆಗಳು
7:15 AM	7:15 ಗಂಟೆಗಳು
9:45 AM	_____ ಗಂಟೆಗಳು
_____	11:20 ಗಂಟೆಗಳು

AM/PM ಗಳಲ್ಲಿ ಸಮಯ 	ಡಿಜಿಟಲ್ ಗಡಿಯಾರದಲ್ಲಿ ಸಮಯ 
12:00 PM	12:00 ಗಂಟೆಗಳು
1:00 PM	13:00 ಗಂಟೆಗಳು
3:00 PM	_____ ಗಂಟೆಗಳು
5:20 PM	_____ ಗಂಟೆಗಳು
_____	20:00 ಗಂಟೆಗಳು
11:45 PM	23:45 ಗಂಟೆಗಳು

ಗಂಟೆಗಳು ಮತ್ತು ನಿಮಿಷಗಳು

ರಾಘವ್ ಪ್ರತಿ ಬೆಳಿಗ್ಗೆ ಮಾರ್ಕೆಟ್‌ನಿಂದ ಹಾಲನ್ನು ತರುತ್ತಾನೆ.



8:20




8:35



ರಾಘವ್ 8:20 AM ಗೆ ಮನೆ ಬಿಡುತ್ತಾನೆ ಮತ್ತು 8:35 AM ಗೆ ಹಿಂದಿರುಗುತ್ತಾನೆ.
ಅವನು ತೆಗೆದುಕೊಂಡ ಸಮಯವೆಷ್ಟು? _____


ನಾವು ಮಾಡೋಣ

1. ಸೂಚನೆಗಳ ಪ್ರಕಾರ ಸೂಕ್ತವಾದ ಸಮಯಗಳನ್ನು ಗಡಿಯಾರದಲ್ಲಿ ತೋರಿಸಿ.
   a) ರಾಘವ್ 10:20 AM ಗೆ ತನ್ನ ಹೋಮ್‌ವರ್ಕ್ (ಗೃಹಕಾರ್ಯ) ಮಾಡಲು ಆರಂಭಿಸಿದನು. ಅವನಿಗೆ ಅದನ್ನು ಮುಗಿಸಲು 25 ನಿಮಿಷಗಳು ಬೇಕಾಯಿತು ಅವನು ಹೋಮ್‌ವರ್ಕ್‌ನ್ನು ಮುಗಿಸಿದ ಸಮಯವನ್ನು ತೋರಿಸಿ.


	25 ನಿಮಿಷಗಳ ನಂತರದ ಸಮಯ	


@KTBS NOT TO BE REPUBLISHED

b) ಮುನೀರಾ 4:15PM ಗೆ ಕಥೆ ಓದುವುದನ್ನು ಪ್ರಾರಂಭಿಸುತ್ತಾಳೆ. ಆಕೆ 45 ನಿಮಿಷಗಳಲ್ಲಿ ಕಥೆ ಓದುವುದನ್ನು ಮುಗಿಸುತ್ತಾಳೆ. ಆಕೆ ಕಥೆ ಓದುವುದನ್ನು ಮುಗಿಸಿದ ಸಮಯವನ್ನು ತೋರಿಸಿ.



c) ಅಕಿರ 8:00 AM ಗೆ ಶಾಲೆಗೆ ಹೊರಡುತ್ತಾಳೆ. ಅವಳು 15 ನಿಮಿಷಗಳಲ್ಲಿ ಶಾಲೆಯನ್ನು ತಲುಪುತ್ತಾಳೆ.






© KTBS NOT TO BE REPUBLISHED

ನಿನ್ನ ಅನಿಸಿಕೆಯಲ್ಲಿ ಯಾರು ಸರಿಯಿದ್ದಾರೆ? 1 ಗಂಟೆ ಮತ್ತು 60 ನಿಮಿಷಗಳ ನಡುವೆ ಯಾವುದಾದರೂ ಸಂಬಂಧವಿದೆಯೇ?

ಶೇಡ್ ಮಾಡಿರುವ ಭಾಗಗಳನ್ನು ಗಮನಿಸಿ.



ಒಂದು ಗಂಟೆ (1 ಗಂಟೆ) = 60 ನಿಮಿಷಗಳು

ಅರ್ಧಗಂಟೆ = ____ ನಿಮಿಷಗಳು

ಕಾಲು ಗಂಟೆ ಅಥವಾ $\frac{1}{4}$ ಗಂಟೆ = 15 ನಿಮಿಷಗಳು

ಮುಕ್ಕಾಲು ಗಂಟೆ ಅಥವಾ $\frac{3}{4}$ ಗಂಟೆ = ____ ನಿಮಿಷಗಳು

ಮುಂದಿನವುಗಳಿಗೆ ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ?

a) ಹಾಲು ಕಾಯಿಸಲು

b) ನಲ್ಲಿಯ ನೀರಿನಿಂದ ಬಕೆಟ್ ತುಂಬಿಸಲು

5 ನಿಮಿಷಗಳಲ್ಲಿ ಯಾವ ಚಟುವಟಿಕೆಗಳನ್ನು ನೀವು ಮಾಡಬಲ್ಲಿರಿ?

ನಾವು ಪರಿಶೀಲಿಸೋಣ.

ಮೂರು ಸ್ನೇಹಿತರು ಗಡಿಯಾರದಿಂದ ಸಮಯವನ್ನು ಓದಿದರು. ಯಾರು ಸರಿ? ದೋಷವನ್ನು ಚರ್ಚಿಸಿ ಹಾಗೂ ಗಡಿಯಾರವನ್ನು ಸರಿಯಾಗಿ ಹೇಗೆ ಓದುವುದು? ವಿವರಿಸಿ.

	ರಘು	ರಾಘವ್	ರಾಣಿ
	12:04	12:20	04:00
	07:07	07:25	05:35
	03:07	03:35	07:15

@KTBS NOT TO BE REPUBLISHED

ಶಿಕ್ಷಕರ ಟಿಪ್ಪಣಿ: ಮಕ್ಕಳು ಅರ್ಧಗಂಟೆ, ಕಾಲುಗಂಟೆ, 30 ನಿಮಿಷಗಳು ಮತ್ತು 15 ನಿಮಿಷಗಳ ನಡುವಿನ ಸಂಬಂಧವನ್ನು ತಿಳಿದು ಕೊಳ್ಳಲು ಸಹಾಯ ಮಾಡಿ.

ಅಧ್ಯಾಯ
13

ಸಾರಿಗೆ ಸಂಗ್ರಹಾಲಯ

D9F3Y1



ನಿಗೂಢ ಮಾತೃಕೆ (ಸಂಖ್ಯಾಯುತ)

ಬಿಳಿ ಬಾಕ್ಸ್‌ಗಳಲ್ಲಿ ನೀಡಿರುವ ಗುಣಲಬ್ಧಗಳನ್ನು ಪಡೆಯಲು, ಹಳದಿ ಬಾಕ್ಸ್‌ಗಳನ್ನು 1–ಅಂಕಿಯ ಸಂಖ್ಯೆಗಳಿಂದ (ಗುಣ್ಯ ಮತ್ತು ಗುಣಕ) ಭರ್ತಿಮಾಡಿ.

ಉಳಿದಿರುವ ಬಿಳಿ ಬಾಕ್ಸ್‌ಗಳನ್ನು ಸೂಕ್ತವಾದ ಗುಣಲಬ್ಧಗಳಿಂದ ಭರ್ತಿಮಾಡಿ.

×				
	32			
			42	
		45		
			21	

ಪ್ರತಿ ಅಡ್ಡಸಾಲಿನ ಸಂಖ್ಯೆಗಳ ಗುಣಲಬ್ಧವನ್ನು ಕಿತ್ತಲೆ ಬಾಕ್ಸ್‌ಗಳಲ್ಲಿ ನೀಡಿದೆ. ಪ್ರತಿ ಕಂಬಸಾಲಿನ ಸಂಖ್ಯೆಗಳ ಗುಣಲಬ್ಧವನ್ನು ನೀಲಿ ಬಾಕ್ಸ್‌ಗಳಲ್ಲಿ ನೀಡಿದೆ. ಖಾಲಿಯಿರುವ ಬಾಕ್ಸ್‌ಗಳನ್ನು ಭರ್ತಿಮಾಡಲು ಸೂಕ್ತವಾದ ಸಂಖ್ಯೆಗಳನ್ನು ಗುರ್ತಿಸಿ.

		56
		54
63	48	

		42
		50
60	35	

©KTBS NOT TO BE REPUBLISHED


10 – ಬಾರಿ


ಪ್ರತಿ ಸಮಸ್ಯೆಯನ್ನು ಚಿತ್ರದಲ್ಲಿ ಪ್ರತಿನಿಧಿಸಿರುವುದರೊಂದಿಗೆ ಸೂಕ್ತವಾಗಿ ಹೊಂದಿಸಿ ಮತ್ತು ಉತ್ತರವನ್ನು ಬರೆಯಿರಿ.

2 × 10 = 2 ಹತ್ತುಗಳು = _____

5 × 10 = _____ ಹತ್ತುಗಳು = _____

8 × 10 = _____ ಹತ್ತುಗಳು = _____





10 ಹತ್ತುಗಳು

10 ಹತ್ತುಗಳು

1 ನೂರು = 100

10 × 10 ಏಷ್ಟು = ____ ಹತ್ತುಗಳು = _____

ಮಗ್ಗಿಗಳನ್ನು ರಚಿಸುವುದು

@KTBS NOT TO BE REPUBLISHED


ಈ ಜೋಡಣೆಯಲ್ಲಿ ಎಷ್ಟು ಸಣ್ಣ ಸಣ್ಣ ಕಲ್ಲುಗಳಿವೆ?

_____

15



15




ಇದು 5 × 15 ಜೋಡಣೆ. ಈ ಜೋಡಣೆಯನ್ನು ವಿಭಜಿಸಿ ಗುಣಲಬ್ಧವನ್ನು, ಕಂಡುಹಿಡಿಯುವ ಒಂದು ಸುಲಭ ವಿಧಾನವಿದೆ.

5 × 15 = 5 × 10 ಮತ್ತು 5 × 5

= _____ + _____ = _____

3 ನೇ ತರಗತಿಯಲ್ಲಿ ಸೃಜಿಸಿರುವ ಮಗ್ಗಿಗಳನ್ನು ನೆನಪಿಸಿಕೊಳ್ಳಿ. ಈಗ 15 ರ ಮಗ್ಗಿಯನ್ನು ರಚಿಸಿ. ಮುಂದೆ ಕೊಟ್ಟಿರುವ ಜೋಡಣೆಯನ್ನು ಉಪಯೋಗಿಸಬಹುದು ಹಾಗೂ ಸುಲಭವಾಗಿ ಎಣಿಸಲು ಸಾಧ್ಯವಾಗುವಂತೆ ಹಿಂದಿನ ಪುಟದಲ್ಲಿ ತೋರಿಸಿರುವಂತೆ ಕಂಬಸಾಲುಗಳನ್ನು 10 ಮತ್ತು 5 ಇರುವಂತೆ ವಿಭಜಿಸಬಹುದು.

1×15, 2×15,
ಇವುಗಳನ್ನು ಇದರಿಂದ ನಾವು ಹೇಗೆ ಕಂಡುಕೊಳ್ಳಬಹುದು?



1 × 15 = ___	6 × 15 = ___
2 × 15 = ___	7 × 15 = ___
3 × 15 = ___	8 × 15 = ___
4 × 15 = ___	9 × 15 = ___
5 × 15 = ___	10 × 15 = ___

1. ಈ ಕೋಷ್ಟಕದಲ್ಲಿ ಯಾವ ವಿನ್ಯಾಸಗಳನ್ನು ನೀವು ಗಮನಿಸುವಿರಿ?
2. 15 ರ ಮಗ್ಗಿಯನ್ನು 5 ರ ಮಗ್ಗಿಯೊಂದಿಗೆ ಹೋಲಿಸಿ. ಯಾವ ಸಾಮ್ಯತೆ ಮತ್ತು ಭಿನ್ನತೆಗಳನ್ನು ನೀವು ಗಮನಿಸಿದಿರಿ?

ಇದು ಯಾವ ಮಗ್ಗಿ? ____
ಇದನ್ನು ಹೇಗೆ ಪಡೆದೆವು?

©KTBS NOT TO BE REPUBLISHED

Times - 5 ರಷ್ಟು	Times - 15 ರಷ್ಟು
1 × 5 = 5	1 × 15 = 15
2 × 5 = 10	2 × 15 = 30
3 × 5 = 15	3 × 15 = 45
4 × 5 = ___	4 × 15 = ___
5 × 5 = ___	5 × 15 = ___
6 × 5 = ___	6 × 15 = ___
7 × 5 = ___	7 × 15 = ___
8 × 5 = ___	8 × 15 = ___
9 × 5 = ___	9 × 15 = ___
10 × 5 = ___	10 × 15 = ___


15 - 5 = 10
30 - 10 = 20
45 - 15 = 30

3. ನೀವು 15 ರ ಮಗ್ಗಿಯನ್ನು ಮಾಡಿದಂತೆ, 11 ರಿಂದ 20 ರವರೆಗಿನ ಬೇರೆ ಬೇರೆ ಮಗ್ಗಿಗಳನ್ನು ರಚಿಸಿ.

4. 5 ರ ಮಗ್ಗಿಯನ್ನು 15 ರ ಮಗ್ಗಿಯೊಂದಿಗೆ ಹೋಲಿಸಿದಂತೆ, 1 ರ ಮಗ್ಗಿಯನ್ನು 11 ರ ಮಗ್ಗಿಯೊಂದಿಗೆ, 2 ರ ಮಗ್ಗಿಯನ್ನು 12 ರ ಮಗ್ಗಿಯೊಂದಿಗೆ ಇತ್ಯಾದಿಗಳನ್ನು ಹೋಲಿಸಿ. ನಿಮ್ಮ ವೀಕ್ಷಣೆಗಳನ್ನು ಹಂಚಿಕೊಳ್ಳಿ.

ಸಮ ಗುಂಪುಗಳಾಗಿ ವಿಭಜಿಸುವುದರಿಂದ ಮಗ್ಗಿಗಳನ್ನು ಮಾಡುವುದು

ಚಕ್ರಗಳ ಜೋಡಣೆಯೊಂದು ಇಲ್ಲಿದೆ. ಒಟ್ಟು ಚಕ್ರಗಳ ಸಂಖ್ಯೆಯನ್ನು ಎಣಿಸಲು, ತಾರಾ ಅವುಗಳನ್ನು ಎರಡು ಸಮ ಗುಂಪುಗಳಾಗಿ ವಿಭಾಗಿಸುತ್ತಾಳೆ.




3×14 = 3×7 ಮತ್ತು 3×7

= $21 + 21$ = 21 ರ ಎರಡರಷ್ಟು = 42

ಅದೇ ರೀತಿ, ಜೋಡಣೆಯನ್ನು ಎರಡು ಸಮ ಗುಂಪುಗಳಾಗಿ ವಿಭಾಗಿಸುವುದರಿಂದ 6×14 ನ್ನು ಪಡೆಯಬಹುದು.

6 × 14 = 6 × 7 ರ ಎರಡರಷ್ಟು ಏಕೆ?



6×14 = 6×7 ಮತ್ತು 6×7


= $42 + 42$ = 42 ರ ಎರಡರಷ್ಟು = 84

© KTBS NOT TO BE REPUBLISHED

ವಿಭಾಗಿಸುವುದು ಮತ್ತು ದ್ವಿಗುಣಗೊಳಿಸುವುದರಿಂದ 3 × 14 ಮತ್ತು 4 × 14 ನ್ನು ಹೇಗೆ ಲೆಕ್ಕ ಮಾಡುವುದು ಎಂಬುದನ್ನು ನೋಡಿದ್ದೇವೆ. ವಿಭಾಗಿಸುವುದು ಮತ್ತು ದ್ವಿಗುಣಗೊಳಿಸುವುದರಿಂದ 14 ರ ಮಗ್ಗಿಯನ್ನು ರಚಿಸಬಹುದೇ? ಪ್ರಯತ್ನಿಸಿ!

ಸಮವಾಗಿ ವಿಭಾಗಿಸುವುದು ಮತ್ತು ದ್ವಿಗುಣಗೊಳಿಸುವುದರಿಂದ ಬೇರೆ ಯಾವ ಮಗ್ಗಿಗಳನ್ನು ರಚಿಸಬಹುದು? ಉದಾಹರಣೆಗಳನ್ನು ನೀಡಿ.

10 ರ ಗುಣಕಗಳು



14 × 10 = 14 ಹತ್ತುಗಳು
= 10 ಹತ್ತುಗಳು + 4 ಹತ್ತುಗಳು
= 100 + 40
= 140

© KTBS NOT TO BE REPUBLISHED

ಮುಂದಿನವುಗಳಿಗೆ ಉತ್ತರಗಳನ್ನು ಕಂಡುಹಿಡಿಯಿರಿ:

a) 15 × 10 = _____ ಹತ್ತುಗಳು = _____

b) 16 × 10 = _____ ಹತ್ತುಗಳು = _____

c) 19 × 10 = _____ ಹತ್ತುಗಳು = _____

d) 20 × 10 = _____ ಹತ್ತುಗಳು = _____

10 × 10 = _____
10 × 10 ರ ಎರಡು ಬಾರಿ (ಎರಡರಷ್ಟು) = _____

10ರ ಹಲವಾರು ಗುಂಪುಗಳನ್ನು ತೆಗೆದುಕೊಂಡಾಗ ಏನಾಗುತ್ತದೆ ಎಂಬುದನ್ನು ತರಗತಿಯಲ್ಲಿ ಚರ್ಚಿಸಿ.

ಶಿಕ್ಷಕರಿಗೆ ಟಿಪ್ಪಣಿ: ಗುಂಪಿನ ಗಾತ್ರ 10 ರ ಗುಣಕವಾಗಿದ್ದಾಗ ಗುಣಾಕಾರವನ್ನು ಅರ್ಥಮಾಡಿಕೊಳ್ಳಲು ಕಲಿಕಾರ್ಥಿಗಳನ್ನು ಬೆಂಬಲಿಸಿ. ಇದರ ಬಗ್ಗೆ ಯೋಚಿಸಲು 'ಹತ್ತರ' ಭಾಷೆ ಉಪಯುಕ್ತ.

ಉದಾಹರಣೆಗೆ: 16 × 10 = 16 ಹತ್ತುಗಳು ಅಂದರೆ 160

16 × 20 = 16 × 2 ಹತ್ತುಗಳು = 32 ಹತ್ತುಗಳು = 320



ಈಗ ಯೋಚಿಸಿ ಮತ್ತು ಮುಂದಿನ ಸಮಸ್ಯೆಗಳಿಗೆ ಉತ್ತರಿಸಿ.

30 × 10 = _____ 40 × 10 = _____ 70 × 10 = _____

50 × 10 = _____ 60 × 10 = _____ 80 × 10 = _____

26 ಟೆಂಪೋ ಟ್ರಾವಲರ್‌ಗಳಲ್ಲಿ ಪ್ರಯಾಣಿಸಬಹುದಾದ ಜನರ ಸಂಖ್ಯೆಯನ್ನು ಕಂಡುಹಿಡಿಯೋಣ.

26 × 10 = _____ ಪ್ರಯಾಣಿಕರು.

26 × 10 = 26 ಹತ್ತುಗಳು = 20 ಹತ್ತುಗಳು + 6 ಹತ್ತುಗಳು = 200 + 60 = 260

ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

a) 21 × 10 = _____

b) 42 × 10 = _____


c) 65 × 10 = _____

d) 38 × 10 = _____

e) 53 × 10 = _____

f) 87 × 10 = _____

ಒಂದು ಚಿಕ್ಕ ಬಸ್‌ನಲ್ಲಿ 20 ಜನರು ಕೂರಬಹುದು. 12 ಬಸ್‌ಗಳಲ್ಲಿ ಎಷ್ಟು ಜನರು ಕೂರಬಹುದು? ಈಗ 12 × 20 ಮಾಡೋಣ.



@KTBS NOT TO BE REPUBLISHED

ಮುಂದಿನ ಸಮಸ್ಯೆಗಳನ್ನು ಬಿಡಿಸಿ. ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

$24 \times 40 =$ _____

$50 \times 60 =$ _____

$13 \times 30 =$ _____

$43 \times 60 =$ _____

$70 \times 80 =$ _____

ಸಾರಿಗೆ ಸಂಗ್ರಹಾಲಯದಲ್ಲಿ ಒಂದು ದಿನ




ಅಮಲ, ರಾಹಿ ಮತ್ತು ಫರ್ಜಾನ್ "ಸಾರಿಗೆ ಸಂಗ್ರಹಾಲಯ"ಕ್ಕೆ ಭೇಟಿ ನೀಡುತ್ತಿದ್ದಾರೆ.

ಈ ಸಂಗ್ರಹಾಲಯದಲ್ಲಿ ಭಾರತದ ಜನರು ಉಪಯೋಗಿಸಿದ ವಿವಿಧ ಸಾರಿಗೆ ವಿಧಾನದ ಮಾದರಿಗಳ ಸಂಗ್ರಹವಿದೆ. ಹಳೆಯ ಕಾಲದ ಹಲವಾರು ವಾಹನಗಳೂ ಇವೆ.

ರಾಹಿ ಆಟಿಕೆ ಟ್ರೇನ್ ಗುರ್ತಿಸುತ್ತಾಳೆ. ಅವಳು ಪ್ರತಿ ಬೋಗಿಯಲ್ಲಿ 14 ಮಕ್ಕಳು ಕೂರಬಹುದೆಂದು ಲೆಕ್ಕ ಮಾಡುತ್ತಾಳೆ. ಆಟಿಕೆ ಟ್ರೇನ್‌ನಲ್ಲಿ 15 ಬೋಗಿಗಳಿವೆ.

ಆಟಿಕೆ ಟ್ರೇನ್‌ನಲ್ಲಿ ಎಷ್ಟು ಮಕ್ಕಳು ಕೂರಬಹುದು?

ನಾವು 15×14 ನ್ನು ಕಂಡುಹಿಡಿಯಬೇಕು.



©KTBS NOT TO BE REPUBLISHED



×	10	4
10	10 × 10 = 100	10 × 4 = 40
5	5 × 10 = 50	5 × 4 = 20
	150	60
		210

15 × 14 = 100 + 40 + 50 + 20
= 210

15 ಬೋಗಿಗಳಲ್ಲಿ 210 ಮಕ್ಕಳು ಕೂರಬಹುದು.

©KTBS NOT TO BE REPUBLISHED

ತನ್ನ ಶಾಲೆಯ 324 ಮಕ್ಕಳಿಗೆ ಎಷ್ಟು ಬೋಗಿಗಳು ಬೇಕಾಗಬಹುದು ಎಂಬುದನ್ನು ಅವಳು ಆಲೋಚಿಸಿದಳು. ಪ್ರತಿ ಬೋಗಿಯಲ್ಲಿ 14 ಮಕ್ಕಳು ಕೂರಬಹುದು ಎಂಬುದನ್ನು ನೆನಪಿಸಿಕೊಳ್ಳಿ.

ನಾವು **324 ÷ 14** ಕಂಡುಹಿಡಿಯಬೇಕು.

ಮಕ್ಕಳ ಸಂಖ್ಯೆ	ಅಗತ್ಯ ವಿರುವ ಬೋಗಿಗಳು	ಉಳಿವ ಮಕ್ಕಳ ಸಂಖ್ಯೆ
		324
140	10	324 - 140 = 184
140	10	184 - 140 = 44
14	1	44 - 14 = 30
28	2	2

14) 324 (10+10+1+2
−140
184
−140
44
−14
30
−28
2

ಒಟ್ಟು ಬೋಗಿಗಳ ಸಂಖ್ಯೆ = ___

ಉಳಿದಿರುವ 2 ಮಕ್ಕಳಿಗೆ ಏನು ಮಾಡಬಹುದು? ತರಗತಿಯಲ್ಲಿ ಚರ್ಚಿಸಿ.

ಅಂತಹ ಉಳಿಕೆ ಸಂಖ್ಯೆಯನ್ನು ಭಾಗಾಕಾರ ಸಮಸ್ಯೆಯಲ್ಲಿ 'ಶೇಷ' ಎಂದು ಕರೆಯುತ್ತಾರೆ.

ನಾವು ಬಿಡಿಸೋಣ

ಭಾಗಾಕಾರ ಸಮಸ್ಯೆಗಳಲ್ಲಿ ಶೇಷವನ್ನು (ಇದ್ದಲ್ಲಿ) ಸಹ ಗುರ್ತಿಸಿ.

a) 25 × 34

b) 16 × 43

c) 68 × 12

d) 39 × 13]

e) 125 ÷ 15

f) 94 ÷ 11

g) 440 ÷ 22

h) 508 ÷ 18

100 ರ ಗುಣಕಗಳು


2 × 100 = 2 ನೂರುಗಳು = 200

3 × 100 = ____ ನೂರುಗಳು = ____

5 × 100 = _____ = _____

8 × 100 = _____ = _____

10 × 100 = 10 ನೂರುಗಳು = 1000



10 ನೂರುಗಳನ್ನು ಒಟ್ಟಿಗೆ ಇಟ್ಟಾಗ ಏನಾಗುತ್ತದೆ?

100	100	100	100	100	100	100	100	100	100

11 × 100 = 11 ನೂರುಗಳು
= 10 ನೂರುಗಳು + 1 ನೂರುಗಳು
= 1000 + 100 = 1100

12 × 100 = _____

15 × 100 = _____

20 × 100 = 20 ನೂರುಗಳು = 2000

27 × 100 = _____

70 × 100 = _____


@KTBS NOT TO BE REPUBLISHED

20 × 100
10 × 100 ಮತ್ತು 10 × 100



10 × 100, 1000 ಆಗುತ್ತದೆ
ಹಾಗಾಗಿ 20 × 100 ಇದು
2 × 1000 = 2000





@KTBS NOT TO BE REPUBLISHED

ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

30 × 100 = _____
50 × 100 = _____
53 × 100 = _____


40 × 100 = _____
24 × 100 = _____
19 × 100 = _____

ನಮಗೆ ತಿಳಿದಿದೆ
80 × 100 = 8000

ಕಂಡುಹಿಡಿಯಿರಿ
80 × 50 = _____

40 × 50 = _____

11 × 200 ನ್ನು ಕಂಡುಹಿಡಿಯೋಣ.





11 × 200 = 10 × 200 ಮತ್ತು 1 × 200
= 2000 + 200 = 2200



11 × 200 = 11 × 100 ಮತ್ತು 11 × 100
= 1100 + 1100
= 2200



11 × 200 = 11 × 2 ನೂರುಗಳು
= 22 ನೂರುಗಳು
= 2200

ಈ ಸಮಸ್ಯೆಗಳ ಉತ್ತರಗಳ ಬಗ್ಗೆ ನೀವೇನು ಗಮನಿಸಿದಿರಿ ಎಂಬುದನ್ನು ಹಂಚಿಕೊಳ್ಳಿ.

ಯಾವುದೇ ಸಂಖ್ಯೆಯ 100 ರಷ್ಟರ ಬಗ್ಗೆ ಏನನ್ನು ಗಮನಿಸಿದಿರಿ?

11 × 100 = _____ 22 × 100 = _____

11 × 200 = _____ 22 × 200 = _____

ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

18 × 100 = _____ 5 × 500 = _____

15 × 200 = _____ 14 × 300 = _____

23 × 200 = _____ 7 × 800 = _____

ಶಿಕ್ಷಕರಿಗೆ ಟಿಪ್ಪಣಿ: ಒಂದು ಸಂಖ್ಯೆಯನ್ನು 100ರ ಗುಣಕಗಳಿಂದ ಗುಣಿಸುವುದನ್ನು ಸೂಕ್ತವಾದ ವಿಧಾನಗಳಲ್ಲಿ ಗುಂಪುಗಳಾಗಿ ವಿಭಾಗಿಸುವುದನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ. ಉದಾಹರಣೆಗೆ, 18 × 100 = 18 ನೂರುಗಳು = 10 ನೂರುಗಳು ಮತ್ತು 8 ನೂರುಗಳು ಅಂದರೆ 1800. ಎರಡು ವಿಭಿನ್ನ ಗುಣಾಕಾರ ಸಮಸ್ಯೆಗಳಲ್ಲಿನ ಉತ್ತರಗಳಿಗೆ ಇರುವ ಸಂಬಂಧವನ್ನು ಮೇಲಿನವುಗಳಲ್ಲಿರುವಂತೆ ಗಮನಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು. ಉದಾಹರಣೆಗೆ, ಗುಂಪಿನ ಗಾತ್ರವನ್ನು 100 ರಿಂದ 200 ಅಥವಾ ಗುಂಪುಗಳ ಸಂಖ್ಯೆಯನ್ನು 11 ರಿಂದ 22ಕ್ಕೆ ಬದಲಾಯಿಸುವುದರಿಂದ.

@KTBS NOT TO BE REPUBLISHED

ಸೆಟ್ A ನಲ್ಲಿರುವ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಹಿಡಿಯಿರಿ. ಸೆಟ್ A ನಲ್ಲಿನ ಸಮಸ್ಯೆಗಳು ಮತ್ತು ಉತ್ತರಗಳಿಗೆ ಇರುವ ಸಂಬಂಧವನ್ನು ಗಮನವಿಟ್ಟು ಪರಿಶೀಲಿಸಿ. ನಂತರ ಈ ತಿಳಿವಳಿಕೆಯನ್ನು ಸೆಟ್ B ನಲ್ಲಿರುವ ಸಮಸ್ಯೆಗಳಿಗೆ ಉತ್ತರವನ್ನು ಕಂಡುಹಿಡಿಯಲು ಉಪಯೋಗಿಸಿ.

A

14 × 100 = ____	14 × 10 = ____	14 × 1 = ____
14 × 500 = ____	14 × 50 = ____	14 × 5 = ____
7 × 500 = _____	7 × 50 = _____	7 × 5 = _____
7 × 250 = _____	7 × 25 = _____	7 × 10 = _____

B

30 × 100 = ____	30 × 10 = ____	30 × 1 = ____
30 × 200 = ____	30 × 20 = ____	30 × 2 = ____
15 × 100 = ____	15 × 10 = ____	15 × 1 = _____
15 × 200 = _____	15 × 20 = _____	15 × 2 = _____

C

ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1) 44 × 10 = _____

22 × 20 = _____

2) 16 × 100 = _____

4 × 400 = _____

©KTBS NOT TO BE REPUBLISHED

ವಾಹನ ಸಂಗ್ರಹಾಲಯದ ವಿಮಾನ ವಿಭಾಗದಲ್ಲಿರುವ ಈ ಮಾಹಿತಿಯನ್ನು ಓದಿ ಅಮಲಾ ಚಕಿತಗೊಂಡಳು.


ಕೋವಿಡ್ 19ರ ಸಾಂಕ್ರಾಮಿಕ ಅವಧಿಯಲ್ಲಿ, ಭಾರತ ಸರ್ಕಾರ, ದೇಶದ ಹೊರಗೆ ವಾಸಿಸುತ್ತಿರುವ ಭಾರತೀಯರನ್ನು ತೆರವುಗೊಳಿಸಲು ವಂದೇ ಭಾರತ್ ಹೆಸರಿನ ಒಂದು ಬೃಹತ್ ಅಭಿಯಾನವನ್ನು ಕೈಗೊಂಡಿತು. ಮೊದಲ ವಾರದಲ್ಲಿ 64 ವಿಮಾನಗಳು ಪ್ರತಿಯೊಂದರಲ್ಲಿ 152 ಜನರನ್ನು ಕರೆದೊಯ್ದವು.

ಶಿಕ್ಷಕರಿಗೆ ಟಿಪ್ಪಣಿ: ಮೇಲಿನ ಸಮಸ್ಯೆಗಳಲ್ಲಿನ ವಿನ್ಯಾಸಗಳನ್ನು ಗ್ರಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ. ದ್ವಿಗುಣಗೊಳಿಸುವುದು ಮತ್ತು ಅರ್ಧಗಳು ಮತ್ತು 10 ಗಳು ಹಾಗೂ 100 ಗಳಿಂದ ಗುಣಾಕಾರ – ಇವುಗಳ ಸಂಬಂಧವನ್ನು ಗುರ್ತಿಸಲು ತಿಳಿಸಬೇಕು.

ಈ "ವಂದೇ ಭಾರತ್ ಅಭಿಯಾನ"ದಲ್ಲಿ ಮೊದಲ ವಾರ ಎಷ್ಟು ಜನರು ಪ್ರಯಾಣಿಸಿರಬಹುದು ಎಂಬುದರ ಬಗ್ಗೆ ಅಮಲಾ ಅಚ್ಚರಿಪಡುತ್ತಾಳೆ.
ಉತ್ತರವನ್ನು ಕಂಡುಹಿಡಿಯಲು ಅವಳಿಗೆ ಸಹಾಯ ಮಾಡಿ.

64 × 152

	100	50	2
60	60 × 100 = 6000	60 × 50 = 3000	60 × 2 =120
4	4 × 100 = 400	4 × 50 = 200	4 × 2 =8



×	100	50	2
60	6000	3000	120
4	400	200	8
	6400	3200	128
			9728

©KTBS NOT TO BE REPUBLISHED

ಫರ್ಜಾನ್ ಕೇರಳದ ಪ್ರಸಿದ್ಧ ಹಾವು ದೋಣಿಯನ್ನು ಗಮನಿಸುತ್ತಾಳೆ.

ಈ ದೋಣಿಯನ್ನು ಮಾಡುವ ತಂತ್ರಜ್ಞಾನವು 800 ವರ್ಷಗಳಷ್ಟು ಹಳೆಯದು. ವಲ್ಲಂ ಕಲಿ, (ಹಾವು–ದೋಣಿ ಸ್ಪರ್ಧೆ) ಜುಲೈ ಮತ್ತು ಸೆಪ್ಟೆಂಬರ್ ನಡುವಿನ ಮಾನ್ಸೂನ್ ಕಾಲದಲ್ಲಿ ನಡೆಯುತ್ತದೆ ಹಾಗೂ ಬೆಳೆಗಳ ಹಬ್ಬ ಓಣಂನೊಂದಿಗೆ ಮುಕ್ತಾಯವಾಗುತ್ತದೆ. ಈ ದೋಣಿಗಳು 30 ರಿಂದ 35 ಮೀಟರ್‌ಗಳಷ್ಟು ಉದ್ದವಿದ್ದು 64 ರಿಂದ 128 ಜನರಿಂದ ತುಳಿಯಲ್ಪಡುತ್ತದೆ. (peddle)



ಒಂದು ನಿರ್ದಿಷ್ಟ ಸ್ಪರ್ಧೆಯಲ್ಲಿ, 960 ಜನರು ಸ್ವಪ್ರೇರಣೆಯಿಂದ ಪಾಲ್ಗೊಂಡರು. ಪ್ರತಿ ದೋಣಿಯನ್ನು 64 ಜನ ತುಳಿದರು. ಎಷ್ಟು ದೋಣಿಗಳ ಅಗತ್ಯವಿದೆ?

ನಾವು **960 ÷ 64** ನ್ನು ಕಂಡುಹಿಡಿಯಬೇಕು.

ದೋಣಿಗಳ ಸಂಖ್ಯೆ	ಭಾಗವಹಿಸುವವರ ಸಂಖ್ಯೆ	ಉಳಿದ ಜನರ ಸಂಖ್ಯೆ
		960
10	640	320
5	320	0

64) 960 (10 + 5
−640
320
−320
0

ಒಟ್ಟು ದೋಣಿಗಳು: 15

ನಾವು ಪರಿಹರಿಸೋಣ

ಭಾಗಾಕಾರ ಸಮಸ್ಯೆಗಳಲ್ಲಿ ಶೇಷವನ್ನು (ಇದ್ದಲ್ಲಿ) ಗುರ್ತಿಸಿ.

a) 237 × 28
b) 140 × 16
c) 389 × 57
d) 807 ÷ 24
e) 692 ÷ 33
f) 996 ÷ 45

@KTBS NOT TO BE REPUBLISHED

10 ಮತ್ತು 100 ರಿಂದ ಭಾಗಿಸುವುದು

ಒಬ್ಬ ರೈತ ತನ್ನ ಅಕ್ಕಿಯನ್ನು ಪ್ರತಿ ಚೀಲದಲ್ಲಿ 10 kg ಯಂತೆ ತುಂಬುತ್ತಾನೆ.

a) ಅವನಲ್ಲಿ 60 kg ಅಕ್ಕಿ ಇದ್ದರೆ, ಅವನಿಗೆ ಎಷ್ಟು ಚೀಲಗಳು ಬೇಕಾಗುತ್ತವೆ?
b) ಅವನಲ್ಲಿ 600 kg ಅಕ್ಕಿ ಇದ್ದರೆ, ಎಷ್ಟು ಚೀಲಗಳು ಬೇಕಾಗುತ್ತವೆ?



ಒಂದು ಚೀಲ ಅಕ್ಕಿ 100 kg ತೂಗಿದರೆ, 600 kg ಅಕ್ಕಿಗೆ ಎಷ್ಟು ಚೀಲಗಳು ಬೇಕಾಗುತ್ತವೆ?

60 ÷ 10 = _____
600 ÷ 10 = _____
600 ÷ 100 = _____

ಮುಂದಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಿರಿ. ನಿಮ್ಮ ಆಲೋಚನೆಗಳನ್ನು ತರಗತಿಯಲ್ಲಿ ಹಂಚಿಕೊಳ್ಳಿ.

40 ÷ 10 = ____	4 ÷ 2 = ____	400 ÷ 2 = ____
400 ÷ 10 = ____	40 ÷ 20 = ____	400 ÷ 20 = ____
400 ÷ 100 = ____	400 ÷ 200 = ____	400 ÷ 200 = ____

ಯೋಚಿಸಿ ಮತ್ತು ಉತ್ತರಿಸಿ. ಪ್ರತಿ ಸಂದರ್ಭದಲ್ಲೂ ಭಾಗಾಕಾರದ ಹೇಳಿಕೆಯನ್ನು ಬರೆಯಿರಿ.

1. ಮಂಕು ಕೋತಿ ಮಾರುಕಟ್ಟೆಯಲ್ಲಿ 870 ಬಾಳೆಹಣ್ಣುಗಳನ್ನು ನೋಡುತ್ತದೆ. ಪ್ರತಿ ಗೊನೆಯಲ್ಲಿ 10 ಬಾಳೆಹಣ್ಣುಗಳಿವೆ. ಮಾರುಕಟ್ಟೆಯಲ್ಲಿ ಎಷ್ಟು ಗೊನೆಗಳಿವೆ?



2. ಈದ್ ಸಂದರ್ಭದಲ್ಲಿ ತನ್ನ 10 ಮೊಮ್ಮಕ್ಕಳಿಗೆ ₹ 1000/- ವನ್ನು ಸಮನಾಗಿ ಹಂಚಲು ರುಕ್ಮಾ ಬೀ ಬಯಸುತ್ತಾರೆ.

   ಅವರಲ್ಲಿ ಪ್ರತಿಯೊಬ್ಬರೂ ಎಷ್ಟು ಹಣ ಪಡೆಯುತ್ತಾರೆ?

ನಾವು ಪರಿಹರಿಸೋಣ

1. ಮುಂಬೈ ಮತ್ತು ಪೇಶಾವರ್ ನಡುವೆ ಸಂಚರಿಸಿದ, ಭಾರತೀಯ ಅತ್ಯಂತ ಹಳೆಯ ರೈಲು ಪಂಜಾಬ್ ಮೇಲ್ ಆಗಿದೆ. ಅದರ ಮೊದಲ ಪ್ರಯಾಣದ ದಿನಾಂಕ 12 ಅಕ್ಟೋಬರ್ 1912. ಅದರ ಮೊದಲ ಪ್ರಯಣದಲ್ಲಿ ಎಷ್ಟು ಬೋಗಿಗಳಿದ್ದವು ಎಂಬುದು ನಿಮಗೆ ತಿಳಿದಿದೆಯೇ? ಅದರಲ್ಲಿ 6 ಕೋಚ್‌ಗಳಿದ್ದವು: ಅವುಗಳಲ್ಲಿ 3 ಬೋಗಿಗಳು 96 ಪ್ರಯಾಣಿಕರಿಗೆ ಹಾಗೂ 3 ಸರಕುಗಳ ಸಾಗಣೆಗೆ.



   a) ಮೊದಲ ಪ್ರಯಾಣದಲ್ಲಿ ಪ್ರತಿ ಬೋಗಿಯಲ್ಲಿ ಎಷ್ಟು ಜನರು ಪ್ರಯಾಣಿಸಿದ್ದಾರೆ?

   b) ಈ ರೈಲು 106 ವರ್ಷಗಳಿಂದ ಸಂಚರಿಸುತ್ತಿದೆ. ಅದು ಮುಂಬೈ, ಮಹಾರಾಷ್ಟ್ರ ಮತ್ತು ಪಂಜಾಬ್‌ನ ಫಿರೋಜ್‌ಪುರ್ ನಡುವೆ ಸಂಚರಿಸುತ್ತದೆ. ಅದರಲ್ಲಿ 24 ಬೋಗಿಗಳಿವೆ. ಪ್ರತಿ ಬೋಗಿ 72 ಪ್ರಯಾಣಿಕರನ್ನು ಸಾಗಿಸುತ್ತದೆ. ಈ ರೈಲಿನಲ್ಲಿ ಎಷ್ಟು ಪ್ರಯಾಣಿಕರು ಪ್ರಯಾಣಿಸಬಹುದು?

2. ಅಮಲ ಮತ್ತು ಅವಳ 35 ಸಹಪಾಠಿಗಳು, 6 ಶಿಕ್ಷಕರೊಂದಿಗೆ ಗೋವಾಗೆ ಶಾಲಾ ಪ್ರವಾಸ ಹೋಗುತ್ತಿದ್ದಾರೆ. ನಗರವನ್ನು ವೀಕ್ಷಿಸಲು ಅವರು "ಹಾಫ್ ಆನ್ ಹಾಫ್ ಆಫ್" ಡಬಲ್ ಡೆಕರ್ ಬಸ್‌ನ್ನು ಉಪಯೋಗಿಸುತ್ತಿದ್ದಾರೆ.



© KTBS NOT TO BE REPUBLISHED

a) ಬಸ್‌ನ ಪ್ರತಿ ಆಸನದಲ್ಲಿ 2 ಜನರು ಕೂಡಬಹುದು. ಕೆಳಗಿನ ಭಾಗದಲ್ಲಿ 15 ಆಸನಗಳಿವೆ ಮತ್ತು ಮೇಲಿನ ಭಾಗದಲ್ಲಿ 10 ಆಸನಗಳಿವೆ. ಅವರು ಎಷ್ಟು ಆಸನಗಳಲ್ಲಿ ಕೂಡಬಹುದು? ಪ್ರತಿಯೊಬ್ಬರಿಗೂ ಸಾಕಾಗುವಷ್ಟು ಆಸನಗಳಿವೆಯೇ?

b) ಎಲ್ಲಾ ಮಕ್ಕಳ ಒಟ್ಟು ಟಿಕೆಟ್‌ಗಳ ವೆಚ್ಚವನ್ನು ಕಂಡುಹಿಡಿಯಿರಿ.

c) ಎಲ್ಲಾ ಶಿಕ್ಷಕರ ಒಟ್ಟು ಟಿಕೆಟ್‌ಗಳ ವೆಚ್ಚ ಎಷ್ಟು?

ಟಿಕೆಟ್ ಬೆಲೆ

ವಯಸ್ಕರು - 899/-


ಮಕ್ಕಳು - 359/-

3. ಕೇದಾರ್ ಒಂದು ಇಟ್ಟಿಗೆ ಗೂಡಿನಲ್ಲಿ ಕೆಲಸ ಮಾಡುತ್ತಾರೆ.

a) ಇಟ್ಟಿಗೆ ಗೂಡು ಪ್ರತಿ ದಿನ 125 ಇಟ್ಟಿಗೆಗಳನ್ನು ಮಾಡುತ್ತದೆ. ಒಂದು ತಿಂಗಳಿನಲ್ಲಿ ಎಷ್ಟು ಇಟ್ಟಿಗೆಗಳನ್ನು ಮಾಡಬಹುದು?

b) ಮಾರುಕಟ್ಟೆಯಲ್ಲಿ ಪ್ರತಿ ಇಟ್ಟಿಗೆಗೆ ₹ 9 ರಂತೆ ಮಾರಲಾಗುತ್ತದೆ. ಒಂದು ತಿಂಗಳಲ್ಲಿ ಎಷ್ಟು ಹಣವನ್ನು ಅವರು ಸಂಪಾದಿಸಬಹುದು?

4. ಒಡಿಷಾದಲ್ಲಿರುವ ಚಿಲಿಕಾ ಸರೋವರ, ಭಾರತದಲ್ಲಿನ ಅತೀ ದೊಡ್ಡ ಉಪ್ಪು ನೀರಿನ ಸರೋವರ. ಅದು ಇರ್ರಾವಡಿ ಢಾಲ್ಫಿನ್‌ಗಳಿಗೆ ಪ್ರಸಿದ್ಧವಾಗಿದೆ. ಡಾಲ್ಫಿನ್‌ಗಳನ್ನು ನೋಡಲು ದೋಣಿಗಳನ್ನು ಬಾಡಿಗೆಗೆ ಪಡೆಯಬಹುದು. ಪುರಿಯಿಂದ ಆರಂಭವಾಗುವ ಪ್ರವಾಸವು ದೋಣಿ ಸವಾರಿ ಹಾಗೂ ಬಸ್ ಪ್ರಯಾಣವನ್ನು ಒಳಗೊಳ್ಳುತ್ತದೆ. ಎಂಟು ಜನರು ಪ್ರವಾಸಕ್ಕೆ ಹೋಗುತ್ತಿದ್ದಾರೆ.



© KTBS NOT TO BE REPUBLISHED

- ಪುರಿಯಿಂದ ಸಟಪದಗಿನ ಬಸ್ ಟಿಕೆಟ್ ವೆಚ್ಚ ₹ 60.
- 8 ಜನರಿಗೆ ಎರಡು–ಗಂಟೆ ದೋಣಿ ಸವಾರಿ ವೆಚ್ಚ ₹ 1200.
- ಪ್ರತಿ ವ್ಯಕ್ತಿಗೆ ನಾವು ಎಷ್ಟು ಹಣ ಖರ್ಚು ಮಾಡುವ ಅಗತ್ಯತೆ ಇದೆ?

5. ಮುಂದೆ ಗುಣಾಕಾರ ಮತ್ತು ಭಾಗಾಕರ ವಾಕ್ಯಗಳನ್ನು ಕಂಡುಹಿಡಿಯಿರಿ. ವಾಕ್ಯಗಳನ್ನು ಶೇಡ್ ಮಾಡಿ. ಎಷ್ಟನ್ನು ಕಂಡುಹಿಡಿದಿರಿ? ಕೆಲವನ್ನು ನಿಮಗಾಗಿ ಮಾಡಲಾಗಿದೆ.

134	52	30	31	931	10	93	55
5	20	15	15	250	3	33	101
22	1040	450	0	4	26	104	5555
110	100	50	20	1000	60	16	99
44	104	19	3	6	22	132	7
20	6	950	6	6000	30	200	693
808	624	31	14	1200	8	16	24
35	9	525	5	105	62	3200	78

250 × 4 = 1000

50 × 20 = 1000

525 ÷ 5 = 105

_____

_____

_____

_____

_____

_____

6. ಪರಿಹರಿಸಿ

a) 35 × 76
b) 267 × 38
c) 498 × 9
d) 89 × 42
e) 55 × 23
f) 345 × 17
g) 66 × 22
h) 704 × 11
i) 319 × 26
j) 459 ÷ 3
k) 774 ÷ 18
l) 864 ÷ 26
m) 304 ÷ 12
n) 670 ÷ 9
o) 584 ÷ 25
p) 900 ÷ 15
q) 658 ÷ 32
r) 974 ÷ 9

@KTBS NOT TO BE REPUBLISHED

ಚಿನ್ನುವಿನ ನಾಣ್ಯಗಳು

1. ಐದು ಸ್ನೇಹಿತರು ಹತ್ತಿರವಿರುವ ಮನೋರಂಜನಾ ಪಾರ್ಕ್‌ಗೆ ಹೋಗಲು ಯೋಚಿಸುತ್ತಾರೆ. ಟಿಕೆಟ್ ಖರೀದಿಸಲು ಪ್ರತಿಯೊಬ್ಬರೂ ವಿವಿಧ ನೋಟ್ ಮತ್ತು ನಾಣ್ಯಗಳನ್ನು ಉಪಯೋಗಿಸುತ್ತಾರೆ. ಟಿಕೆಟ್‌ನ ಬೆಲೆ ₹ 750.



- ಬುಜ್ಜಿ ಎಲ್ಲಾ ₹ 200 ರ ನೋಟ್‌ಗಳನ್ನು ತಂದಿದ್ದಾನೆ.
- ಮುನ್ನ ಎಲ್ಲಾ ₹ 50 ರ ನೋಟ್‌ಗಳನ್ನು ತಂದಿದ್ದಾನೆ.
- ಬಾಲು ಎಲ್ಲಾ ₹ 20 ರ ನೋಟ್‌ಗಳನ್ನು ತಂದಿದ್ದಾನೆ.
- ಮತ್ತು ಊಹಿಸಿ, ಚಿನ್ನು ಬಳಿ ಎಲ್ಲಾ ₹ 5 ರ ನಾಣ್ಯಗಳಿವೆ.
- ಮತ್ತು ಸನ್ನು ಬಳಿ ಎಲ್ಲಾ ₹ 2 ರ ನಾಣ್ಯಗಳಿವೆ.

a) ಟಿಕೆಟ್ ಖರೀದಿಸಲು ಪ್ರತಿ ಮಗು ಎಷ್ಟು ನೋಟ್‌ಗಳು / ನಾಣ್ಯಗಳನ್ನು ತರಬೇಕು ಕಂಡುಹಿಡಿಯಿರಿ.

b) ಇವರಲ್ಲಿ ಯಾವ ಮಕ್ಕಳು ಕ್ಯಾಷಿಯರ್‌ನಿಂದ ಯಾವುದೇ ಚಿಲ್ಲರೆಯನ್ನು ಪಡೆಯುವುದಿಲ್ಲ?

c) ಚಿನ್ನುನ ನಾಣ್ಯಗಳನ್ನು ಎಣಿಸಲು ಕ್ಯಾಷಿಯರ್‌ಗೆ ಎಷ್ಟು ಸಮಯ ಬೇಕಾಗಬಹುದು?

2. ಮುಂದಿನ ಗುಣಾಕಾರಗಳನ್ನು ಗಮನಿಸಿ. ಉತ್ತರಗಳನ್ನು ನೀಡಲಾಗಿದೆ.

12	11	13	11
x 13	x 14	x 13	x 12
156	154	169	132


ಪ್ರತಿ ಸಂದರ್ಭದಲ್ಲಿ, ಎರಡು ಸಂಖ್ಯೆಗಳು ಮತ್ತು ಅವುಗಳ ಗುಣಲಬ್ಧದಲ್ಲಿ ಯಾವುದೇ ವಿನ್ಯಾಸವನ್ನು ನೀವು ಗಮನಿಸಿದಿರಾ? (ಸುಳುಹು: ಬಣ್ಣದ ಅಂಕಿಗಳನ್ನು ಗಮನಿಸಿ)


ಈ ವಿನ್ಯಾಸವು ಯಾವ ಇತರೆ ಗುಣಾಕಾರ ಸಮಸ್ಯೆಗಳಿಗೆ ಸರಿಹೊಂದುತ್ತದೆ? ಅಂತಹ 5 ಉದಾಹರಣೆಗಳನ್ನು ಕಂಡುಹಿಡಿಯಿರಿ.


© KTBS NOT TO BE REPUBLISHED


3. ಪ್ರತಿ ವಾಹನವು ಪೂರ್ಣ ಸಾಮರ್ಥ್ಯದೊಂದಿಗೆ ಪ್ರಯಾಣಿಸುತ್ತಿದೆ ಎಂದು ಭಾವಿಸಿ. ಈ ಪ್ರತಿ ವಾಹನದಲ್ಲಿ ಎಷ್ಟು ಜನರು ಪ್ರಯಾಣಿಸಬಹುದು? ಅವುಗಳನ್ನು ಹೊಂದಿಸಿ.












75 ಸೈಕಲ್‌ಗಳು	400
52 ಆಟೋಗಳು	75
103 ಕಾರ್‌ಗಳು	4560
20 ಮಿನಿಬಸ್	156
30 ವಿಮಾನಗಳು	864
15 ರೈಲು ಸ್ಲೀಪರ್ ಕೋಚ್‌ಗಳು	412




@KTBS NOT TO BE REPUBLISHED

ಅಧ್ಯಾಯ
14

ದತ್ತಾಂಶ ನಿರ್ವಹಣೆ


C2Q9D6






ರೋಹನ್ ಮತ್ತು ಅಂಜಲಿ ಕೇಳಿದ ಪ್ರಶ್ನೆಗಳನ್ನು ಗಮನಿಸಿ.

'ಅತೀ ಹೆಚ್ಚು ಇಷ್ಟ ಪಟ್ಟ ವಿಷಯ'ವನ್ನು ಕಂಡುಹಿಡಿಯಲು ಅತ್ಯಂತ ಸೂಕ್ತವಾದ ಪ್ರಶ್ನೆಗೆ ಟಿಕ್ ಮಾಡಿ. ನೀವು ಹೀಗೇಕೆ ಯೋಚಿಸಿದಿರಿ? ನಿಮ್ಮ ಸ್ನೇಹಿತರು ಮತ್ತು ಶಿಕ್ಷಕರೊಂದಿಗೆ ಚರ್ಚಿಸಿ.




© KTBS NOT TO BE REPUBLISHED



ಮೇಲಿನ ಪ್ರಶ್ನೆಗೆ ಅಂಜಲಿ ಮತ್ತು ರೋಹನ್, ಮಕ್ಕಳ ಉತ್ತರಗಳನ್ನು (ಪ್ರತಿಕ್ರಿಯೆಗಳನ್ನು) ಮುಂದಿನಂತೆ ದಾಖಲಿಸಿದರು.

ಅವರು ಗಣಿತಕ್ಕೆ M, ಭಾಷೆಗಳಿಗೆ L, ನಮ್ಮ ಸುತ್ತಲಿನ ಪ್ರಪಂಚಕ್ಕೆ T, ಕಲೆಗೆ A ಮತ್ತು ದೈಹಿಕ ಶಿಕ್ಷಣಕ್ಕೆ P.E. ಎಂದು ಬರೆದರು.



ಮಕ್ಕಳ ಪ್ರತಿಕ್ರಿಯೆಗಳನ್ನು ಮೇಲೆ ನೋಡಿ ಹಾಗೂ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

- ಗಣಿತವನ್ನು ಅತೀ ಹೆಚ್ಚು ಇಷ್ಟ ಪಡುವ ಮಕ್ಕಳ ಸಂಖ್ಯೆ _____ .
- ಭಾಷೆಯನ್ನು ಅತೀ ಹೆಚ್ಚು ಇಷ್ಟ ಪಡುವ ಮಕ್ಕಳ ಸಂಖ್ಯೆ _____ .
- ನಮ್ಮ ಸುತ್ತಲಿನ ಪ್ರಪಂಚವನ್ನು ಅತೀ ಹೆಚ್ಚು ಇಷ್ಟ ಪಡುವ ಮಕ್ಕಳ ಸಂಖ್ಯೆ _____ .
- ದೈಹಿಕ ಶಿಕ್ಷಣವನ್ನು ಅತೀ ಹೆಚ್ಚು ಇಷ್ಟ ಪಡುವ ಮಕ್ಕಳ ಸಂಖ್ಯೆ _____ .
- ಕಲೆಯನ್ನು ಅತೀ ಹೆಚ್ಚು ಇಷ್ಟ ಪಡುವ ಮಕ್ಕಳ ಸಂಖ್ಯೆ _____ .

© NCERT NOT TO BE REPUBLISHED

ಮೇಲಿನ ಮಾಹಿತಿಯನ್ನು ಈ ಕೋಷ್ಟಕದಲ್ಲಿ ತುಂಬೋಣ.


ವಿಷಯಗಳು	ಮಕ್ಕಳ ಸಂಖ್ಯೆ
ಗಣಿತ (M)	_____
ಭಾಷೆಗಳು (L)	_____
ನಮ್ಮ ಸುತ್ತಲಿನ ಪ್ರಪಂಚ (T)	_____
ದೈಹಿಕ ಶಿಕ್ಷಣ(P.E.)	_____
ಕಲೆ (A)	_____

ಈಗ ಮೇಲಿನ ಕೋಷ್ಟಕವನ್ನು ಗಮನಿಸಿ, ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

- ಮಕ್ಕಳಿಗೆ ಸಾಮಾನ್ಯವಾಗಿ ಅತೀ ಹೆಚ್ಚು ಇಷ್ಟವಾದ ವಿಷಯ ಯಾವುದು? _____
- ಮಕ್ಕಳಿಗೆ ಸಾಮಾನ್ಯವಾಗಿ ಅತೀ ಕಡಿಮೆ ಇಷ್ಟವಾದ ವಿಷಯ ಯಾವುದು? _____

ಮಾಹಿತಿಯನ್ನು ಪ್ರದರ್ಶಿಸಲು ಮುಂದಿನಂತೆ ಎರಡು ಕ್ರಮಗಳಿವೆ.

1



2

ವಿಷಯಗಳು	ಮಕ್ಕಳ ಸಂಖ್ಯೆ
ಗಣಿತ(M)	_____
ಭಾಷೆಗಳು (L)	_____
ನಮ್ಮ ಸುತ್ತಲಿನ ಪ್ರಪಂಚ (T)	_____
ದೈಹಿಕ ಶಿಕ್ಷಣ(P.E.)	_____
ಕಲೆ (A)	_____

ಮಾಹಿತಿಯನ್ನು ಪ್ರದರ್ಶಿಸುವ ಯಾವ ಕ್ರಮ ಅರ್ಥಮಾಡಿಕೊಳ್ಳಲು ಸುಲಭ ಮತ್ತು ಏಕೆ?

_____

ಶಿಕ್ಷಕರಿಗೆ ಟಿಪ್ಪಣಿ: ಒಂದು ಪ್ರಶ್ನೆಯನ್ನು ಹೇಗೆ ರಚಿಸಬೇಕು ಮತ್ತು ಯಾವ ಪದಗಳನ್ನು ಉಪಯೋಗಿಸಬೇಕು ಎಂಬುದನ್ನು ಚರ್ಚಿಸಿ.

© KSTBS NOT TO BE REPUBLISHED

ವರ್ಣಮಯ ಗೋಲಗಳು


ಶಾಲೆಯ ಭೋಜನ ವಿರಾಮದ ಸಮಯದಲ್ಲಿ ವಿದ್ಯಾರ್ಥಿಗಳು ತಮಗೆ ಇಷ್ಟವಾದ ಬಣ್ಣದ ಗೋಲ ತಿನ್ನಲು ಹೊರಟರು.

ರೋಹನ್ ಮತ್ತು ಅಂಜಲಿ ಬೇರೆ ಬೇರೆ ಮಕ್ಕಳು ತಿಂದ ಗೋಲಗಳನ್ನು ದಾಖಲಿಸಿದರು. ಅವರು ಅತೀ ಹೆಚ್ಚು ಮಕ್ಕಳು ತಿನ್ನುವ ಗೋಲವನ್ನು ತಾವು ತಿನ್ನಬೇಕೆಂದುಕೊಂಡರು.


ಮಕ್ಕಳು ತಿಂದ ಗೋಲಗಳನ್ನು ದಾಖಲಿಸಲು ಇಬ್ಬರೂ ಆರಂಭಿಸಿದರು.



ರೋಹನ್



ಅಂಜಲಿ



© KTBS NOT TO BE REPUBLISHED

ಮೇಲೆ ಕೊಟ್ಟಿರುವ ಮಾಹಿತಿಯನ್ನು ಗಮನಿಸಿ. ಗೋಲಗಳ ಗೆರೆ ಚಿತ್ರಕ್ಕೆ ಸೂಕ್ತವಾಗಿ ಬಣ್ಣ ಹಾಕಿ.

1. ಯಾವ ಬಣ್ಣದ ಐಸ್ ಗೋಲ ಮಕ್ಕಳು ತಿಂದರು?

   a) ಅತೀ ಹೆಚ್ಚು  b) ಅತೀ ಕಡಿಮೆ 

   How do you know? ನಿಮಗೆ ಹೇಗೆ ತಿಳಿಯಿತು?

2. ಅಂಜಲಿ ಮತ್ತು ರೋಹನ್ ಯಾವ ಬಣ್ಣದ ಗೋಲ ತಂದರು? 

3. ಹುಡುಗರು ಯಾವ ಬಣ್ಣದ ಗೋಲಗಳನ್ನು ಅತೀ ಹೆಚ್ಚು ತಿಂದರು? 

4. ಹುಡುಗಿಯರು ಯಾವ ಬಣ್ಣದ ಗೋಲಗಳನ್ನು ಅತೀ ಹೆಚ್ಚು ತಿಂದರು? 

5. ಈ ಪ್ರಶ್ನೆಗಳಿಗೆ ಉತ್ತರಿಸಲು ಯಾವ ವಿಧಗಳ ದತ್ತಾಂಶಗಳ ಪ್ರತಿನಿಧಿಸುವಿಕೆಯನ್ನು ನೀವು ಉಪಯೋಗಿಸಿದಿರಿ ಮತ್ತು ಏಕೆ?

ಚಟುವಟಿಕೆ – ಚೆಸ್ ಅಥವಾ ಕ್ರಿಕೆಟ್

ನಿಮ್ಮ ಸಹಪಾಠಿಗಳಲ್ಲಿ ಎಷ್ಟು ಜನ ಚೆಸ್ ಮಾತ್ರ ಆಡುತ್ತಾರೆ, ಕ್ರಿಕೆಟ್ ಮಾತ್ರ ಆಡುತ್ತಾರೆ. ಎರಡನ್ನೂ ಆಡುತ್ತಾರೆ ಅಥವಾ ಯಾವುದನ್ನೂ ಆಡುವುದಿಲ್ಲ ಎಂಬುದನ್ನು ಕಂಡುಹಿಡಿಯಿರಿ.

ಈಗ ಮೇಲಿನ ದತ್ತಾಂಶಗಳನ್ನು ಒಂದು ಕೋಷ್ಟಕದಲ್ಲಿ ಆಯೋಜಿಸೋಣ.

ಆಟಗಳ ವಿಧ	ಹುಡುಗಿಯರ ಸಂಖ್ಯೆ	ಹುಡುಗರ ಸಂಖ್ಯೆ
ಚೆಸ್ ಆದರೆ ಕ್ರಿಕೆಟ್ ಅಲ್ಲ		
ಕ್ರಿಕೆಟ್ ಆದರೆ ಚೆಸ್ ಅಲ್ಲ		
ಎರಡೂ		
ಯಾವುದೂ ಅಲ್ಲ		

@KTBS NOT TO BE REPUBLISHED

ನಿಮ್ಮ ತರಗತಿಯಲ್ಲಿ ಸಂಗ್ರಹಿಸಿದ ದತ್ತಾಂಶಗಳ ಆಧಾರದಲ್ಲಿ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಯಾರು ಚೆಸ್ ಅತೀ ಹೆಚ್ಚಾಗಿ ಆಡುತ್ತಾರೆ? _____ (ಹುಡುಗರು / ಹುಡುಗಿಯರು)
2. ಯಾರು ಕ್ರಿಕೆಟ್ ಅತೀ ಹೆಚ್ಚಾಗಿ ಆಡುತ್ತಾರೆ? _____ (ಹುಡುಗರು / ಹುಡುಗಿಯರು)
3. ಎರಡೂ ವಿಧದ ಆಟಗಳನ್ನು ಎಷ್ಟು ಮಕ್ಕಳು ಆಡುತ್ತಾರೆ? _____

ಬಾಲ ಮೇಳ

3 ದಿನಗಳ ಬಾಲ ಮೇಳದಲ್ಲಿ ಎಷ್ಟು ಜನ ಹಣ್ಣಿನ ಚಾಟ್ಸ್ ಮತ್ತು ಸ್ಯಾಂಡ್‌ವಿಚ್‌ನ್ನು ತಿಂದರು ಎಂಬುದನ್ನು ಅಂಜಲಿ ಮತ್ತು ರೋಹನ್ ಚಿತ್ರ ನಕ್ಷೆ ಉಪಯೋಗಿಸಿ ದಾಖಲಿಸಿದ್ದಾರೆ.



ಅಂಜಲಿ: ಹಣ್ಣು ಚಾಟ್ಸ್

ದಿನಗಳು	ಒಟ್ಟು ಹಣ್ಣು ಚಾಟ್‌ಗಳು
ದಿನ 1	
ದಿನ 2	
ದಿನ 3	

ರೋಹನ್:
ಸ್ಯಾಂಡ್‌ವಿಚ್‌ಗಳು

ದಿನಗಳು	ಒಟ್ಟು ಸ್ಯಾಂಡ್‌ವಿಚ್‌ಗಳು
ದಿನ 1	
ದಿನ 2	
ದಿನ 3	

ನಾವು ಮಾಡೋಣ

1. ಕೋಷ್ಟಕವನ್ನು ಪೂರ್ಣಗೊಳಿಸಿ.

ಪದಾರ್ಥಗಳು	ಮಾರಾಟವಾದ ಒಟ್ಟು ಪದಾರ್ಥಗಳು
ಹಣ್ಣು ಚಾಟ್‌ಗಳು	
ಸ್ಯಾಂಡ್‌ವಿಚ್‌ಗಳು	

2. ಯಾವ ದಿನ ಅತೀ ಹೆಚ್ಚು ಸ್ಯಾಂಡ್‌ವಿಚ್‌ಗಳು ಮಾರಾಟವಾದವು?
3. 2 ನೇ ದಿನ ಯಾವ ಪದಾರ್ಥ ಅತೀ ಹೆಚ್ಚು ಮಾರಾಟವಾಯಿತು?
4. ಮುಂದೆ ಕೊಟ್ಟಿರುವ ಕೋಷ್ಟಕವನ್ನು ಪೂರ್ಣಗೊಳಿಸಿ. ಅತೀ ಹೆಚ್ಚು ಮಾರಾಟ ನಡೆದ ದಿನಕ್ಕೆ ವೃತ್ತ ಹಾಕಿ.

ದಿನ	ಒಟ್ಟು ಮಾರಾಟ
ದಿನ 1	
ದಿನ 2	
ದಿನ 3	


©KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ

ಬಾಕ್ಸ್ ಚಿತ್ರಗಳು ವಿದ್ಯಾರ್ಥಿಗಳಿಗೆ ಪದ ರೂಪದ ಸಮಸ್ಯೆಗಳನ್ನು ತಿಳಿಯಲು ಹಾಗೂ ಅವುಗಳನ್ನು ಬಿಡಿಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಉಪಯುಕ್ತವಾಗಿವೆ. ಸಂಕಲನ ಮತ್ತು ವ್ಯವಕಲನದ ಪದ ಸಮಸ್ಯೆಗಳಿಗೆ ಮುಂದಿನವುಗಳು ಮಾದರಿ ಉದಾಹರಣೆಗಳಾಗಿವೆ. ಯಾವುದೇ ಸಮಸ್ಯೆಯಲ್ಲಿ ಬಾಕ್ಸ್‌ಗಳಲ್ಲಿ ತುಂಬಬಹುದಾದ ಅಂಶಗಳನ್ನು ಆಧರಿಸಿ, ನಡೆಸಬೇಕಾದ ಕ್ರಿಯೆಯನ್ನು ನಿರ್ಧರಿಸಲಾಗುತ್ತದೆ. ಮೂರು ವಿಧದ ಸಮಸ್ಯೆಗಳೆಂದರೆ ಸಂಯೋಜನೆ, ಹೋಲಿಕೆ ಮತ್ತು ಬದಲಿಸುವಿಕೆ. ಪ್ರತಿ ಸಮಸ್ಯೆಯನ್ನು ಅಲ್ಪಸ್ವಲ್ಪ ವ್ಯತ್ಯಾಸವಿರುವ ಬೇರೆ ಬೇರೆ ಬಾಕ್ಸ್‌ಗಳ ಚಿತ್ರಗಳನ್ನು ಉಪಯೋಗಿಸಿ ಪ್ರತಿನಿಧಿಸಬಹುದು, ಇದರಿಂದ ಸಮಸ್ಯೆಯನ್ನು ಪೂರ್ಣವಾಗಿ ಗ್ರಹಿಸಲು ಸಾಧ್ಯವಾಗುತ್ತದೆ.

ಉದಾಹರಣೆ 1: ಸಂಯೋಜನೆ: ಎರಡು ಬೇರೆ ಬೇರೆ ಗುಂಪುಗಳು / ಸಂಗ್ರಹಗಳನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, ಒಂದು ಶಾಲೆಯಲ್ಲಿ ಪ್ರಾಥಮಿಕ ಹಂತದಲ್ಲಿ 343 ಮಕ್ಕಳಿದ್ದಾರೆ, ಮಾಧ್ಯಮಿಕ ಹಂತದಲ್ಲಿ 523 ಮಕ್ಕಳಿದ್ದಾರೆ. ಎರಡೂ ಹಂತಗಳಲ್ಲಿ ಒಟ್ಟು ಎಷ್ಟು ಮಕ್ಕಳಿದ್ದಾರೆ?

343 + 532 = ?




© KLBS NOT TO BE REPUBLISHED

ಉದಾಹರಣೆ 2: ಬದಲಾಯಿಸು: ಇರುವ ಗುಂಪು / ಪ್ರಮಾಣದಲ್ಲಿನ ಬದಲಾವಣೆಯನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, ನನ್ನ ಪಿಗ್ಗಿ ಬ್ಯಾಂಕ್‌ನಲ್ಲಿ 445 ಇದೆ. ಮೂರು ತಿಂಗಳ ನಂತರ ಬ್ಯಾಂಕ್‌ನಲ್ಲಿ 800 ಇರುತ್ತದೆ. ಮೂರು ತಿಂಗಳಲ್ಲಿ ಎಷ್ಟು ಹಣ ನನ್ನ ಬ್ಯಾಂಕ್‌ನಲ್ಲಿ ಹೆಚ್ಚಾಗಿದೆ?

445 + ? = 800


800 – 445 = ?



ಉದಾಹರಣೆ 3: ಬದಲಾಯಿಸು: ಸೋಹನ್ ಅಂಗಡಿಯಲ್ಲಿ ಆಲೂಗಡ್ಡೆಗಳಿವೆ. ಅವರು ಇನ್ನೂ 150 kg ತಂದರು, ಇದರಿಂದಾಗಿ ಅವರಲ್ಲಿ 500 kg ತಾಜ ಮತ್ತು ಹಳೆಯ ಆಲೂಗಡ್ಡೆಗಳಿವೆ. ಆರಂಭದಲ್ಲಿ ಅವರಲ್ಲಿ ಎಷ್ಟು ಆಲೂಗಡ್ಡೆ ಇತ್ತು?


? + 150 = 500

500 – 150 = ?




ಉದಾಹರಣೆ 4: ಹೋಲಿಸು: ಎರಡು ಪರಿಮಾಣಗಳನ್ನು ಹೋಲಿಸುವುದನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, ಅನು, ಅವಳ ಸಹೋದರಿ ಮಿನಿಗಿಂತ 6 ವರ್ಷ ದೊಡ್ಡವಳು. ಅನು ವಯಸ್ಸು ಈಗ 8 ವರ್ಷಗಳು. ಮಿನಿಯ ವಯಸ್ಸು ಎಷ್ಟು?

8 = ? + 6




2 ಆಯಾಮದ ಆಕೃತಿಗಳು

ಗಮನಿಸಿ: ಮುಂದೆ ನೀಡಿರುವ ಆಕೃತಿಗಳನ್ನು ಅಧ್ಯಾಯ 1 ರಲ್ಲಿ ಉಪಯೋಗಿಸಿ.



ಡೀನ್ ಬ್ಲಾಕ್‌ಗಳು



@KTBS NOT TO BE REPUBLISHED


ಗಮನಿಸಿ: ಅಗತ್ಯವಿದ್ದಲ್ಲಿ ಎನ್ನೂ ಹೆಚ್ಚಿನ ಡೀನ್ ಬ್ಲಾಕ್‌ಗಳನ್ನು ಮಾಡಿ.

@KTBS
NOT TO BE REPUBLISHED


ತಿಭುಜ ಪಟ್ಟಕ ಮತ್ತು ಆಯತ ಪಟ್ಟಕ ಆಯತ ಘನದ ಜಾಲಗಳು

ಗಮನಿಸಿ: ಚುಕ್ಕೆಗಳಿರುವ ಗೆರೆಯ ಉದ್ದಕ್ಕೂ ಕತ್ತರಿಸಿ ಮತ್ತು ದಪ್ಪ ಗೆರೆಗಳ ಉದ್ದಕ್ಕೂ ಮಡಚಿ.

ತ್ರಿಕೋನ ಪಟ್ಟಕ



@KTBS
NOT TO BE REPUBLISHED




ಆಯತಾಕಾರದ ಪಟ್ಟಕ / ಆಯತ ಘನ

@KTBS
NOT TO BE REPUBLISHED


ತ್ರಿಭುಜ ಗೋಪುರ ಮತ್ತು ಷಡ್ಭುಜ ಪಟ್ಟಕದ ಜಾಲಗಳು

ಗಮನಿಸಿ: ಚುಕ್ಕೆಗಳಿರುವ ಗೆರೆಯ ಉದ್ದಕ್ಕೂ ಕತ್ತರಿಸಿ ಮತ್ತು ದಪ್ಪ ಗೆರೆಗಳ ಉದಕ್ಕೂ ಮಡಚಿ.

ತ್ರಿಭುಜ ಗೋಪುರ



@KTBS
NOT TO BE REPUBLISHED




ಷಡ್ಭುಜ ಪಟ್ಟಕ

@KTBS
NOT TO BE REPUBLISHED

ವರ್ಗ ಗೋಪುರ ಮತ್ತು ಪಂಚಭುಜ ಗೋಪುರದ ಜಾಲಗಳು


ಗಮನಿಸಿ: ಚುಕ್ಕೆಗಳಿರುವ ಗೆರೆಯ ಉದ್ದಕ್ಕೂ ಕತ್ತರಿಸಿ ಮತ್ತು ದಪ್ಪ ಗೆರೆಗಳ ಉದ್ದಕ್ಕೂ ಮಡಚಿ

ವರ್ಗ ಗೋಪುರ




@KTBS
NOT TO BE REPUBLISHED

ಪಂಚಭುಜ ಗೋಪುರ



@KTBS
NOT TO BE REPUBLISHED


ಬಾಣದ ಕಾರ್ಡ್‌ಗಳು





@KTBS NOT TO BE REPUBLISHED


@KTBS
NOT TO BE REPUBLISHED


ಭಿನ್ನರಾಶಿ ಕಟ್

























@KTBS NOT TO BE REPUBLISHED

ಅಳತೆಪಟ್ಟಿ



@KTBS
NOT TO BE REPUBLISHED

ಸಂಖ್ಯಾ ಬೋಚನೆಗಳು



@KTBS NOT TO BE REPUBLISHED

@KTBS
NOT TO BE REPUBLISHED